
ಸಂಪುಟ 23 ಸಂಚಿಕೆ 38-39
ಸೆಪ್ಟೆಂಬರ್ 30, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಹುಬ್ಬಳ್ಳಿ: ಸಾಮರಸ್ಯಕ್ಕೆ ಖಾವಿಪಡೆ ಕೊಳ್ಳಿ





ಭಯೋತ್ಪಾದನೆ: ಬಿತ್ತಿದ್ದನ್ನೇ ಬೆಳೆದ ಅಮೇರಿಕಾ



ಶಿಕ್ಷಣದ ಕೇಸರೀಕರಣ: ಹೆಚ್ಚಿದ ಪ್ರತಿರೋಧ

ಸಿನಿಮಾ: 'ಲಜ್ಜಾ'

ಮೂರನೇ ಎಡರಂಗ ಸರ್ಕಾರ ಅಧಿಕಾರಕ್ಕೆ

ಹಿಂದಿನ ಸಂಚಿಕೆಯಲ್ಲಿ ದಿಢೀರ್ ಪಂಜಾಬ್ ಚುನಾವಣೆ ಘೋಷಣೆ, ಅಸ್ಸಾಂ ಒಪ್ಪಂದಕ್ಕೆ ಮುಂದಾದ ಕೇಂದ್ರ ಸರ್ಕಾರ, ಪಕ್ಷದ 12ನೇ ಮಹಾಧಿವೇಶ, ದಿನ ಪತ್ರಿಕೆಯಾಗಿ ಗಣಶಕ್ತಿ, ಪುರಸಭೆಗಳಲ್ಲಿ ಎಡರಂಗದ ಜಯಭೇರಿ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ರಾಜ್ಯದ ಯೋಜನೆಗಳಿಗೆ ಕೇಂದ್ರದಿಂದ ಅತಂತ್ರಸ್ಥಿತಿ, ಪ್ರಧಾನಿಯಿಂದ ಎಡರಂಗ ಸರ್ಕಾರದ ವಿರುದ್ಧ ಅಪಪ್ರಚಾರ, ಘೀಸಿಂಗ್ ಪ್ರತ್ಯೇಕವಾದಿ ಘೋಷಣೆ ರಾಷ್ಟ್ರವಿರೋಧಿ ಅಲ್ಲ ಪ್ರಧಾನಿ. ಕಾಮ್ರೇಡ್ ಸ್ನೇಹಾಂಗ್ಶು ಆಚಾರ್ಯ ನಿರ್ಧನ. ಸ್ಮರಣೀಯ ಬಾಂಗ್ಲಾ ಪ್ರವಾಸ, ಎಡರಂಗ 3ನೇ ಬಾರಿಗೆ ಅಧಿಕಾರಕ್ಕೆ, ಕೇರಳದಲ್ಲೂ ಅಧಿಕಾರಕ್ಕೆ, ಮುಖ್ಯಮಂತ್ರಿಯಾಗಿ ಇ.ಕೆ.ನಾಯನಾರ್ ಅಧಿಕಾರಕ್ಕೆ

ಎರಡು ತಿಂಗಳ ನಂತರ ನಾನು ಕೆಲವು ಸಚಿವ ಸಹೋದ್ಯೋಗಿಗಳ ಜತೆ ರಾಜಭವನದಲ್ಲಿ ಪ್ರಧಾನಿಯನ್ನು ಭೇಟಿ ಮಾಡಿದಾಗ ವಿದ್ಯುತ್, ಕೈಗಾರಿಕೆ, ಕಲ್ಲಿದ್ದಲು ಗಣಿ, ಸಾಗಣೆದರ ಸಮಾನತೆ,ನೀರಾವರಿ, ಆರೋಗ್ಯ, ಸಾರಿಗೆ ಮತ್ತು ನಿರಾಶ್ರಿತರ ಪುನರ್‌ವಸತಿ ಸೇರಿದಂತೆ ಎಲ್ಲ ವಿಷಯಗಳನ್ನು ಚರ್ಚಿಸಿದೆವು. ಆದರೆ ಪ್ರಧಾನಿ ಮುಂಚೆಯೇ ತೀರ್ಮಾನ ಮಾಡಿಕೊಂಡಿದ್ದರು. ಚರ್ಚೆಯಿಂದ ಹೆಚ್ಚಿನ ಫಲ ಸಿಗಲಿಲ್ಲ. 61ರ ಪೈಕಿ 11 ಯೋಜನೆಗಳಿಗೆ ಮಾತ್ರ ಅವರು ಅನುಕೂಲಕರ ಪ್ರತಿಕ್ರಿಯೆ ತೋರಿಸಿದರು. 13 ಯೋಜನೆಗಳನ್ನು 'ಮುಲಾಜಿಲ್ಲದೆ' ತಿರಸ್ಕರಿಸಿದರು. 37 ಯೋಜನೆಗಳನ್ನು ಮತ್ತೆ ಅತಂತ್ರ ಸ್ಥಿತಿಗೆ ತಳ್ಳಲಾಯಿತು. ವಿಚಿತ್ರವೆಂದರೆ ಮಾಧ್ಯಮಗಳಿಗೆ ಹೊಸ ಹೊಸ ವಿಚಾರಗಳು ಕಾಣಿಸತೊಡಗಿತು. ರಾಜೀವಗಾಂಧಿ ರಾಜ್ಯಕ್ಕೆ 684 ಕೋಟಿ ರೂಪಾಯಿ ನೀಡಿದ್ದಾರೆ ಎಂದು ವರದಿಗಳು ಪ್ರಕಟವಾದವು! ಸ್ವತಃ ಪ್ರಧಾನಿಯೇ ಈ ಬಗ್ಗೆ ಇನ್ನಷ್ಟು ಗೊಂದಲದ ಹೇಳಿಕೆಗಳನ್ನು ನೀಡಿದರು. ಕಾಂಗ್ರೆಸ್‌ನ ಕುಸಿಯುತ್ತಿರುವ ನೈತಿಕ ಸ್ಥೈರ್ಯವನ್ನು ಪುನರ್ ಸ್ಥಾಪಿಸಲು ಇವೆಲ್ಲವನ್ನು ಮಾಡಲಾಯಿತು.

ಎಡರಂಗ ಸರ್ಕಾರದ ವಿರುದ್ಧ ಪ್ರಧಾನಿಯೇ ಅಪಪ್ರಚಾರವನ್ನು ಮುಂದುವರಿಸಿದ್ದಾಗ ಅವರದೇ ಆಡಳಿತ ಎರಡು ತಿಂಗಳ ಅವಧಿಯಲ್ಲಿ ಅಕ್ಕಿ ಬೆಲೆಯನ್ನು ಎರಡು ಸಲ ಏರಿಸಿತು. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಬಂಗಾಳಕ್ಕೆ ಮಂಜೂರು ಮಾಡಿದ ಹಣವನ್ನು ಬಳಸಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಕೇಂದ್ರ ಸಚಿವ ಅಜಿತ್ ಪಾಂಜಾ ಹೇಳಿದರು. ಯೋಜನೆ ನಿಧಿಯ ಈ ತಥಾಕಥಿತ 'ಬಳಕೆ ಮಾಡದಿರುವ' ಪರಿಕಲ್ಪನೆಯನ್ನು ಗಿಳಿಪಾಠ ಮಾಡುವಲ್ಲಿ ಕಾಂಗ್ರೆಸ್ ಮತ್ತು ಅದರ ಪತ್ರಿಕೆಗಳು ಯಾಕೆ ಸಂತೋಷಪಡುತ್ತವೋ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಬಹಳಷ್ಟು ಜನರಿಗೆ ಹಣಕಾಸು ಕ್ಷೇತ್ರದ ಪದಗಳ ಸಂಕೀರ್ಣತೆ ಗೊತ್ತಿರುವುದಿಲ್ಲ. ಹೀಗಾಗಿ ಜನರನ್ನು ಗೊಂದಲದಲ್ಲಿ ಬೀಳಿಸಲು ಇದುವೇ ಒಳ್ಳೆಯ ಮಾರ್ಗ!. ಕೇಂದ್ರ ಸರ್ಕಾರದ ಪಕ್ಷಪಾತಗಳನ್ನು ಮುಚ್ಚಿಡಲು ಕೂಡ ಇದು ನೆರವಾಗುತ್ತದೆ. ರಾಜೀವ್ ನಮ್ಮನ್ನು ಭೇಟಿಯಾದಾಗ ಈ ವಿಚಾರವಾಗಿ ಏನನ್ನು ಹೇಳಿರಲಿಲ್ಲ. ಆದರೆ ಸಭೆಯ ಕೊಠಡಿಯಿಂದ ಹೊರಹೋಗುತ್ತಲೆ ಯೋಜನೆ ನಿಧಿಗಳ 1200 ಕೋಟಿ ರೂಪಾಯಿ ಹಣವನ್ನು ಬಳಸಲು ಬಂಗಾಳ ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎಂದು ಪ್ರಕಟಿಸಿದರು! ಅಲ್ಲದೆ ಈ ಹಣವನ್ನು ಕೇಂದ್ರಕ್ಕೆ ಕೇಂದ್ರದ ನಿಧಿಗಳನ್ನು ಪಡೆಯುವ ರಾಜ್ಯಗಳ ಪಟ್ಟಿಯಲ್ಲಿ ಪಶ್ಚಿಮ ಬಂಗಾಳ ಅತ್ಯಂತ ಕೆಳಗೆ ಇದೆ ಎಂಬುದನ್ನು ಇಲ್ಲಿ ಹೇಳುವುದು ಅಗತ್ಯ.

ರಾಜ್ಯದ ನಾಲ್ಕು ವಿದ್ಯುತ್ ಯೋಜನೆಗಳಿಗೆ ಮಂಜೂರು ನೀಡಲು ಕೂಡ ರಾಜೀವಗಾಂಧಿ ನಿರಾಕರಿಸಿದರು. ಜತೆಯಲ್ಲೇ ವಿದ್ಯುತ್ ಕ್ಷೇತ್ರದ ವಿಚಾರವಾಗಿ ರಾಜ್ಯದ ವಿರುದ್ಧ ಅಪಪ್ರಚಾರವನ್ನು ನಡೆಸಿದರು. ಆದರೆ ಜನರು ಅವರನ್ನು ನಂಬಲಿಲ್ಲ.

'ಗೂರ್ಖಾಲ್ಯಾಂಡ್' ಚಳುವಳಿ 'ರಾಷ್ಟ್ರವಿರೋಧಿ' ಅಲ್ಲ ಎಂಬ ಒಂದು ಅಪಾಯಕಾರಿ ಹೇಳಿಕೆಯನ್ನು ಅವರು ನೀಡಿದರು. ಸುಭಾಷ್ ಘೀಸಿಂಗ್ ಪ್ರತ್ಯೇಕತಾವಾದಿ ಘೋಷಣೆ ಎತ್ತಿದಾಗ ಹಾಗೂ ಡಾರ್ಜಿಲಿಂಗ್ ಬೆಟ್ಟ ಪ್ರದೇಶ ಹೊತ್ತಿ ಉರಿಯುತ್ತಿದ್ದಾಗ ರಾಜೀವ ಈ ರೀತಿ ಹೇಳಿದ್ದರು! ಅವರ ಈ ಟಿಪ್ಪಣಿಯಿಂದ ಬೆಂಕಿಗೆ ತುಪ್ಪ ಸುರಿದಂತಾಯಿತು. ರಂಗ ಸರ್ಕಾರದ ಸತತ ಯತ್ನ, ಪರಿಶ್ರಮದಿಂದಾಗಿ ಕೊನೆಗೂ ಕೇಂದ್ರ ಸರ್ಕಾರ ಗೂರ್ಖಾ ಚಳುವಳಿಯ ನಿಜ ಮರ್ಮವನ್ನು ಅರಿಯಿತು.

ಕಾಮ್ರೇಡ್ ಸ್ನೇಹಾಂಗ್ಶು ಆಚಾರ್ಯ ನಿಧನ

ರಾಜೀವಗಾಂಧಿ ಕೋಲ್ಕತ್ತಾಕ್ಕೆ ಭೇಟಿ ನೀಡಿದ ಮೂರು ದಿನಗಳಲ್ಲಿ, ನನ್ನ 50 ವರ್ಷಗಳ ಒಡನಾಡಿ ಸ್ನೇಹಾಂಗ್ಶು ಆಚಾರ್ಯ ನಿಧನರಾದರು. ನಾನಾಗ ದೆಹಲಿಯಲ್ಲಿದ್ದೆ. ಅವರು ಕೆಲ ವರ್ಷಗಳಿಂದ ಅನಾರೋಗ್ಯಪೀಡಿತರಾಗಿದ್ದರು. ಲಂಡನ್‌ಗೆ ತೆರಳಿ ಚಿಕಿತ್ಸೆಗಾಗಿ ಮಗನ ಜತೆ ಇರುವಂತೆ ನಾನು ಅವರ ಮನವೊಲಿಸಿದ್ದೆ. ಸಾವಿನ ಕೆಲ ದಿನಗಳ ಹಿಂದೆಯಷ್ಟೇ ಅವರು ಲಂಡನ್‌ನಿಂದ ಮರಳಿದ್ದರು. ಅವರ ಆರೋಗ್ಯ ಸುಧಾರಿಸುವುದೆಂದು ನಾನು ಆಶಿಸಿದ್ದೆ. ಆದರೆ ಹೃದಯಾಘಾತ ಅವರನ್ನು ನಮ್ಮಿಂದ ದೂರ ಮಾಡಿತು.

ಸಾಯುವವರೆಗೂ ಅವರು ರಾಜ್ಯ ಅಡ್ವಕೇಟ್ ಜನರಲ್ ಆಗಿದ್ದರು. ಎರಡನೇ ಸಂಯುಕ್ತ ರಂಗ 1969 ರಲ್ಲಿ ಅಧಿಕಾರದಲ್ಲಿದ್ದಾಗಲೂ ಅವರು ಅದೇ ಹುದ್ದೆಯಲ್ಲಿದ್ದರು.

ನಾವು 1939 ರಲ್ಲಿ ಲಂಡನ್‌ನಲ್ಲಿ ಭೇಟಿಯಾದೆವು. ನಾವಿಬ್ಬರೂ ಕಾನೂನು ವಿದ್ಯಾರ್ಥಿಗಳಾಗಿದ್ದೆವು. ನಾನು ಮಿಡ್ಲ್ ಟೆಂಪಲ್ ಇನ್‌ನಲ್ಲಿ ವಾಸವಾಗಿದ್ದೆ. ಅವರು ಗ್ರೇಸ್ ಇನ್‌ನಲ್ಲಿದ್ದರು. ನಾವು ಒಟ್ಟಿಗೆ ಲಂಡನ್‌ನಲ್ಲಿ ರಾಜಕೀಯ ಚಟುವಟಿಕೆಗಳಲ್ಲಿಯೂ ಭಾಗವಹಿಸಿದ್ದೆವು. ಇದರಿಂದ ನಮ್ಮ ಗೆಳತನ ಗಾಢವಾಯಿತು. 1940 ರಲ್ಲಿ ನಾವು ನಮ್ಮ ಕಾನೂನು ಪರೀಕ್ಷೆಯನ್ನು ಒಂದೇ ದಿನ ಪಾಸ್ ಮಾಡಿದೆವು. ನಾನು ಭಾರತಕ್ಕೆ ಮರಳಿದೆ. ಅವರು ಫಲಿತಾಂಶವನ್ನು ಪಡೆದುಕೊಳ್ಳಲು ಅಲ್ಲೇ ಉಳಿದರು.

ಗಲಭೆಗಳ ವೇಳೆ ಸ್ನೇಹಾಂಗ್ಶು ನಿರ್ವಹಿಸಿದ ಧೀರೋದಾತ್ತ ಪಾತ್ರ ನನ್ನ ನೆನಪಿನಲ್ಲಿ ಇನ್ನೂ ಹಸಿರಾಗಿದೆ. 1948 ರಲ್ಲಿ ಕಲ್ಕತ್ತಾದಲ್ಲಿ ನಡೆದ ಪಕ್ಷದ ಮಹಾಧಿವೇಶನದ ರೆಡ್‌ಗಾರ್ಡ್ಸ್‌ಗಳ ನಾಯಕರಾಗಿದ್ದರು. ಸ್ನೇಹಾಂಗ್ಶು ಆಚಾರ್ಯ ಎನ್ನುವುದು ಬಹುಜನಕ್ಕೆ ಗೊತ್ತಿರಲಿಕ್ಕಿಲ್ಲ. ಅವರು ಮೈಮನ್‌ಸಿಂಗ್ ರಾಜ ಕುಟುಂಬದ ಉತ್ತರಾಧಿಕಾರಿಯಾಗಿದ್ದರು. ಆದರೆ ಅವರು ಬಹಳ ಸುಲಭವಾಗಿ ದುಡಿಯುವ ಜನರ ಜತೆ ಸೇರುತ್ತಿದ್ದರು. ನ್ಯಾಯವಾದಿಯಾಗಿ ಅವರ ಪ್ರತಿಭೆಯನ್ನು ವಿವರಿಸಬೇಕೆಂದೆ ಇಲ್ಲ. 1957 ರಲ್ಲಿ ಸಿರಿಯಾದಲ್ಲಿ ನಡೆದ ಅಖಿಲ ವಿಶ್ವಾ ವಕೀಲರ ಸಮ್ಮೇಳನದಲ್ಲಿ ಅವರು ರಾಷ್ಟ್ರಪತಿಯವರ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿಯನ್ನು ಸ್ವೀಕರಿಸಿದರು. ಅವರ ಪತ್ನಿ ಸುಪ್ರಿಯಾ ಆಚಾರ್ಯ ಖ್ಯಾತ ಲೇಖಕ ಸೌರೀಂದ್ರ ಮೋಹನ್ ಮುಖ್ಯೋಪಾಧ್ಯಾಯರ ಪುತ್ರಿ. ಸುಪ್ರಿಯಾ ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತೆ. ಸ್ನೇಹಾಂಗ್ಶು ತಮ್ಮ ಮಹಾಯೋಜನೆ ಬಗ್ಗೆ ನನ್ನಲ್ಲಿ ವಿಶ್ವಾಸದಿಂದ ಮಾತನಾಡುತ್ತಿದ್ದುದು ನೆನಪಿದೆ. ನಮ್ಮ ಒಡನಾಟದ ಬಗ್ಗೆ ನಾನು ರೀಮುಗಟ್ಟಲೆ ಬರೆಯಬಲ್ಲೆ. ಅವರು ನನ್ನ ನೆನಪಲ್ಲಿ ಸದಾ ಉಳಿಯುತ್ತಾರೆ.


ಬಾಂಗ್ಲಾದೇಶದ ಪ್ರವಾಸ

1987 ರ ಬಾಂಗ್ಲಾದೇಶ ಪ್ರವಾಸ ನನ್ನ ನೆನಪಲ್ಲಿ ಸದಾ ಜೀವಂತವಾಗಿರುತ್ತದೆ. ಜನವರಿ 20 ರ ಸಂಜೆ ನಾನು ಮತ್ತು ಪತ್ನಿ ಢಾಕಾ ತಲುಪಿದೆವು. ಫೆಬ್ರವರಿ 2 ರಂದು ಹಿಂದಿರುಗಿದೆವು. ನಾನು ಢಾಕಾಗೆ ಭೇಟಿ ನೀಡದೆ 41 ವರ್ಷಗಳಾಗಿದ್ದವು.

ಢಾಕಾ ತಲುಪಿದ ಮರುದಿನ ನಾರಾಯಣಗಂಜ್‌ನ ಬರ್ದಿಯಲ್ಲಿರುವ ನನ್ನ ಪೂರ್ವದ ಮನೆಗೆ ನಾನು ಭೇಟಿಕೊಟ್ಟೆ. ನನ್ನನ್ನು ಬರಮಾಡಿಕೊಳ್ಳಲು ಸಾವಿರಾರು ಜನರು ನೆರೆದಿದ್ದನ್ನು ಕಂಡು ನನ್ನ ಹೃದಯ ತುಂಬಿಬಂತು. ಗುಲಾಬಿ ಮತ್ತಿತರೆ ಹೂಗಳ ಭಾರವನ್ನು ತಡೆದುಕೊಳ್ಳಲು ನನ್ನಿಂದಾಗಲಿಲ್ಲ!

ನಾನು ನನ್ನ ಬಾಲ್ಯಕ್ಕೆ ಮರಳಿದೆ. ನಮ್ಮ ಒಂದು ಅಂತಸ್ತಿನ ಮನೆ ಇನ್ನೂ ಅಲ್ಲಿತ್ತು. ನಾನು ರಜೆ ದಿನಗಳನ್ನು ಅಲ್ಲಿ ತಂದೆಯ ಜತೆ ಹೇಗೆ ಕಳೆದೆನೆಂಬುದು ನೆನಪಾಯಿತು. ಬದಲಾದ ಪರಿಸರದಲ್ಲಿ ಅದೇ ಕೊಠಡಿಗಳು, ಅದೇ ವರಾಂಡ, ಅದೇ ಮನೆ! ಆಹಾ!! ಅದು ನಿಜಕ್ಕೂ ಒಂದು ಭಿನ್ನ ಅನುಭವವಾಗಿತ್ತು. ನಾನು ಮತ್ತು ಪತ್ನಿ ಮೊದಲನೆ ಅಂತಸ್ತಿಗೆ ಹೋಗಿ ಹಬೀಬುಲ್ಲಾ ಮತ್ತು ಅವರ 90 ವರ್ಷ ಪ್ರಾಯದ ತಾಯಿ ಆಯತುನ್ನೀಸಾರನ್ನು ಕಂಡೆವು. ಆಕೆ ನಮ್ಮನ್ನು ಮಕ್ಕಳಂತೆ ನೋಡಿಕೊಂಡರು. ಬರ್ದಿಯೂನಿಯನ್ ಕಛೇರಿಯಲ್ಲಿ ಊಟ ಮಾಡಿ ಸಂಜೆ ಢಾಕಾಗೆ ಮರಳಿದೆವು.

ಅಂದಿನ ರಾಷ್ಟ್ರಾಧ್ಯಕ್ಷ ಲೆಫ್ಟಿನೆಂಟ್ ಜನರಲ್ ಎಚ್.ಎಂ.ಇರ್ಷಾದ್‌ರನ್ನು ನಾನು ಭೇಟಿಯಾದೆ. ಪ್ರತಿಪಕ್ಷ ಆವಾಮಿಲೀಗ್ ನಾಯಕಿ ಶೇಖ್ ಹಸಿನಾ ವಾಜಿದ್‌ರನ್ನು ಭೇಟಿ ಮಾಡಿದೆ. ವರ್ಕರ್ಸ್ ಪಕ್ಷದ ಕಾರ್ಯಕರ್ತರ ಜತೆ ಕೂಡ ನಾನು ಮಾತುಕತೆ ನಡೆಸಿದೆ. ನಾನು ನಂತರವೂ ಬಾಂಗ್ಲಾದೇಶಕ್ಕೆ ಪ್ರವಾಸ ಮಾಡಿದೆ. ಆದರೆ 1987 ರ ಆ ಪ್ರವಾಸ ನನ್ನ ಅನುಭವದಲ್ಲಿ ತೀರಾ ಭಿನ್ನವಾದುದಾಗಿದೆ. ವಿಭಜನೆಯ ನೋವನ್ನು ಅನುಭವಿಸಿದವರಿಗೆ ನನ್ನ ಭಾವನೆಗಳು ಚೆನ್ನಾಗಿ ಅರ್ಥವಾಗಬಲ್ಲದು.



ಮೂರನೇ ಬಾರಿಗೆ ಮುಖ್ಯಮಂತ್ರಿಯಾಗಿ ಬಸುರವರಿಂದ ಅಧಿಕಾರ ಸ್ವೀಕಾರ

ಮೂರನೇ ಎಡರಂಗ ಸರಕಾರ

ಚುನಾವಣೆ ಮೂರು ತಿಂಗಳಿಗೆ ಮುಂಚೆಯೇ 1986ರ ಡಿಸೆಂಬರ್ 28ರಂದು ಒಂಬತ್ತು ಪಕ್ಷಗಳು ಎಡರಂಗ ಚುನಾವಣೆ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ನಾವು 16 ಅಂಶಗಳ ಕಾರ್ಯಕ್ರಮವನ್ನು ರೂಪಿಸಿದೆವು ಹಾಗೂ ಕೇಂದ್ರ ಸರಕಾರದ ಮುಂದೆ 10 ಅಂಶಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದೆವು. ಆ ಬೇಡಿಕೆಯ ಬಗ್ಗೆ ಕಾಂಗ್ರೆಸ್ ಮಾಡಿದ ಆರೋಪಗಳನ್ನು ಚುನಾವಣೆ ಆಯೋಗ ತಳ್ಳಿಹಾಕಿತು. ಶ್ರೀರಾಮಪುರ ಹೊರತುಪಡಿಸಿ ಉಳಿದ ಎಲ್ಲ ಉಪನಗರಗಳು ನಮಗೆ ಮತನೀಡಿದವು.

ಎಡರಂಗ 251, ಕಾಂಗ್ರೆಸ್ 40 ಸ್ಥಾನಗಳಲ್ಲಿ ಗೆದ್ದಿತು. ಎಸ್‌ಯುಸಿಐ ಎರಡು, ಮುಸ್ಲಿಂಲೀಗ್ ಒಂದರಲ್ಲಿ ಗೆದ್ದಿತು. ರಂಗ ತನ್ನ ಬಲವನ್ನು 238 ರಿಂದ 251ಕ್ಕೆ ಹೆಚ್ಚಿಸಿಕೊಂಡಿತು. ನಮ್ಮ ಮತಸಂಖ್ಯೆ ಕಳೆದ ಸಲದ ಶೇ. 52.65ರಿಂದ 52.94ಕ್ಕೆ ಏರಿತು. ಸಿಪಿಐ(ಎಂ) ಒಂದೇ ಸ್ಪರ್ಧಿಸಿದ 213 ಸ್ಥಾನಗಳಲ್ಲಿ 187ರಲ್ಲಿ ಜಯಶಾಲಿಯಾಯಿತು. 58 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ ಬಿಜೆಪಿ ಖಾತೆ ತೆರೆಯಲಿಲ್ಲ. ಶೇ. 0.52ರಷ್ಟು ನಗಣ್ಯ ಮತಗಳನ್ನಷ್ಟೆ ಗಳಿಸಲು ಅದಕ್ಕೆ ಸಾಧ್ಯವಾಯಿತು. ಪ್ರಣಾಬಾ ಮುಖರ್ಜಿಯವರ ರಾಷ್ಟ್ರೀಯ ಸಮಾಜವಾದಿ ಕಾಂಗ್ರೆಸ್ ಕೂಡ 100ಕ್ಕೂ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸಿತು. ಅದು ರಾಜ್ಯವ್ಯಾಪಿ ಕೇವಲ ಒಂದುವರೆ ಲಕ್ಷ ಮತಗಳಿಗೆ ತೃಪ್ತಿ ಪಟ್ಟಿತು. ಜಿಎನ್‌ಎಲ್‌ಎಫ್ ಡಾರ್ಜಿಲಿಂಗ್‌ನಲ್ಲಿ ಚುನಾವಣೆಯನ್ನು ಬಹಿಷ್ಕರಿಸಿತು. ಆ ಪಕ್ಷ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಬೇರೆ ವಿಚಾರ. ಮಾರ್ಚ್ 31 ರಂದು ಮೂರನೇ ಎಡರಂಗ ಸರಕಾರ ಅಧಿಕಾರದ ಪ್ರಮಾಣವಚನ ಸ್ವೀಕರಿಸಿತು. ಕೇರಳದಲ್ಲೂ ನಾವು ಗೆದ್ದೆವು. ಇ.ಕೆ. ನಾಯನಾರ್ ಮುಖ್ಯಮಂತ್ರಿಯಾಗಿ ಮುಂದುವರಿದರು.

ಬೋಫೋರ್ಸ್ ಹಗರಣ

ಇದಾದ ಸ್ವಲ್ಪವೇ ಸಮಯದಲ್ಲಿ ಕೇಂದ್ರ ಸರ್ಕಾರವನ್ನು ಒಳಗೊಂಡ ಹಗರಣವೊಂದು ಬೆಳಕಿಗೆ ಬಂತು. ಅದು 1987ರ ಏಪ್ರಿಲ್ ಮೂರನೇ ವಾರ. ಸಂಸತ್ತಿನ ಬಜೆಟ್ ಅಧಿವೇಶನ ನಡೆಯುತ್ತಿತ್ತು. ಆಗ ಈ ಸುದ್ದಿ ಸ್ಫೋಟಗೊಂಡಿತು. 1986ರಲ್ಲಿ ಭಾರತ ಸರಕಾರ ಸ್ವೀಡನ್‌ನ ಬೋಫೋರ್ಸ್ ಕಂಪೆನಿ ಜತೆ ಮಾಡಿಕೊಂಡ ಶಸ್ತ್ರಾಸ್ತ್ರ ಒಪ್ಪಂದದಲ್ಲಿ ಲಂಚಾವತಾರ ನಡೆದಿದೆ ಎಂದು ಸ್ವೀಡಿಷ್ ರೇಡಿಯೋ ಏಪ್ರಿಲ್ 16 ರಂದು ಪ್ರಸಾರ ಮಾಡಿತು. ಕೆಲವು ಭಾರತೀಯ ಏಜೆಂಟರು ಇದರಲ್ಲಿ ಒಳಗೊಂಡಿದ್ದಾರೆ. ಇವರಿಗೆ ಭಾರತದ ಕೆಲವು ಪ್ರಭಾವಿ ವ್ಯಕ್ತಿಗಳ ಸಂಪರ್ಕವಿದೆ ಎಂದು ಹೇಳಿದ್ದಲ್ಲದೆ ರಾಜೀವಗಾಂಧಿಯವರ ಪಕ್ಷದ ಜನರೂ ಇದರಲ್ಲಿ ಒಳಗೊಂಡಿದ್ದಾರೆ ಎಂದು ಸ್ವೀಡಿಷ್ ರೇಡಿಯೋ ತಿಳಿಸಿತು.

(ಮುಂದುವರಿಯುವುದು)

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 77

ಕಾವೇರಿ ನೀರು : ಹಂಚಿಕೊಳ್ಳಬೇಕಿರುವ ಸಂಕಷ್ಟ

ಮುಂಗಾರು ಮಳೆಗಳೆಲ್ಲಾ ಕೈಕೊಟ್ಟು, ರಾಜ್ಯದ ತುಂಬಾ ಬರದ ಬೇಗೆಯಲ್ಲಿ ಬೇಯುತ್ತಿರುವಾಗ ಈಗ ಹಿಂಗಾರಿ ಮಳೆಯ ತುಂತುರು. ಅಲ್ಲಲ್ಲಿ ಮಳೆಯೇನೊ ಧಾರಾಕಾರವೆಂಬಂತೆ ಸುರಿದಿದೆ. ಸಿಡಿಲಿನ ಆರ್ಭಟಕ್ಕೆ 5 ಜನ ಬಲಿಯಾಗಿದ್ದಾರೆ. ಹರಿದ ನೀರಿಗೆ 9 ಜನರು ಕೊಚ್ಚಿಹೋಗಿದ್ದಾರೆ. ಬಿರುಕುಬಿಟ್ಟ ಭೂಮಿಯು ನೀರು ಕುಡಿದರೂ ದಾಹ ತಣಿದಿಲ್ಲ. ಇಷ್ಟಕ್ಕೆ ಹಿಂಗಾರು ಬಿತ್ತನೆಯಾಗಿ,ಕೈಗೆ ಫಸಲು ಸಿಗುತ್ತದೆಯೆಂದು ಭರವಸೆಯೇನೂ ಇಲ್ಲ. ಈಗಲೂ ಅನೇಕ ಜಿಲ್ಲೆಗಳು ಬರದ ದವಡೆಯಲ್ಲಿ ನಲುಗುತ್ತಿವೆ. ನಾಡಿನ ಮುಖ್ಯನದಿಗಳಾದ ಕಾವೇರಿ, ಕೃಷ್ಣ, ತುಂಗಾ ಮುಂತಾದ ಕಡೆಗಳಲ್ಲಿ ನೀರಿನ ಸಂಗ್ರಹವೂ ತೀರಾ ಕಡಿಮೆಯೇ. ಸರ್ವೇ ಪ್ರಕಾರವೇ ಕಾವೇರಿ ತೀರದ ಜಿಲ್ಲೆಗಳ 48ತಾಲೂಕುಗಳ ಪೈಕಿ 45 ತಾಲೂಕುಗಳು ಹಿಂದಿಗಿಂತ ತೀರಾ ಕಡಿಮೆ ಮಳೆ ಕಂಡಿವೆ. ಇಲ್ಲಿ ಬಹುತೇಕ ಬರ ಬಿದ್ದಿದೆಯೆಂಬುದು ಕೇಂದ್ರ ಸರ್ಕಾರಕ್ಕೆ ರಾಜ್ಯ ಕಳಿಸಿರುವ ಮನವಿಯಲ್ಲಿನ ಅಂಶ ಸಹ.





ಅತ್ತ ತಮಿಳುನಾಡಿನಲ್ಲಿ ಬಹುಮುಖ್ಯವಾಗಿ ಕಾವೇರಿ ನದಿ ಹರಿವಿನ ಪ್ರದೇಶಗಳಲ್ಲಿ ನೀರಿಲ್ಲದೇ ಬೆಳೆ ಒಣಗುವ ಸ್ಥಿತಿ. ಬಿಳಿಗುಂಡ್ಲುವಿನಲ್ಲಿ ರಿಜರ್ವ್ ಯರ್‌ನಲ್ಲಿ ಸೆಪ್ಟೆಂಬರ್ 10 ರಂದು 9.5 ಟಿ.ಎಂ.ಸಿ. ನೀರಿದ್ದು ಬಳಕೆಯ ಸಾಧ್ಯತೆ ನೀರು 7.5 ರಿಂದ 8 ಟಿಎಂಸಿ ಮಾತ್ರ. ಹಾಗೆ ಭವಾನಿ ರಿಜರ್ವ್‌ವಾಯರ್‌ನಲ್ಲಿ 7.5 ಟಿಎಂಸಿ ನೀರಿದೆ. (ಸಾಮರ್ಥ್ಯ 31.65 ಟಿಎಂಸಿ). ಮೆಟ್ಟೂರು ಪ್ರದೇಶದಲ್ಲೇ 15 ಲಕ್ಷ ಎಕರೆ ಭೂಮಿಗೆ ನೀರುಣಿಸಬೇಕಿದ್ದು ಬಹುತೇಕ ಬೆಳೆ ಭತ್ತದಿಂದ ಕೂಡಿದೆ. ಆದ್ದರಿಂದ ಈ ಕೂಡಲೇ ನೀರು ದೊರೆಯದಿದ್ದರೆ ಬೆಳೆಗಳೆಲ್ಲಾ ಒಣಗಿ ತೀವ್ರ ಸ್ವರೂಪದ ಸಂಕಷ್ಟಕ್ಕೆ ಸಿಲುಕಬೇಕಾಗುವ ಸಂದರ್ಭವಿದೆ. ಆದ್ದರಿಂದ ಕೂಡಲೇ ನೀರು ಬಿಡಿ ಎಂಬುದು ತಮಿಳುನಾಡು ಸರ್ಕಾರದ ಆಗ್ರಹ.

ಇದಕ್ಕೆ 'ನಮ್ಮಲ್ಲೇ ಬರ' ನೀರಿಲ್ಲ, ಹೇಗೆ ಅಷ್ಟೊಂದು ಬಿಡೋದು, ನಮ್ಮದು ಹತಾಶ ಸ್ಥಿತಿ ಎಂದು ಕರ್ನಾಟಕ ಸರ್ಕಾರದ ನಿಲುಮೆ. ಬಿತ್ತಿದ ಭತ್ತದ ಬೆಳೆ ಉಳಿಸಬೇಕೆಂದರೂ ದಿನಕ್ಕೆ 1 ಟಿಎಂಸಿಯಂತೆ 15 ಟಿಎಂಸಿ ನೀರು ಕನಿಷ್ಟ ಬೇಕಾಗಬಹುದು ಎಂಬುದು ತಮಿಳುನಾಡು ಆಗ್ರಹ.

ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ತಮಿಳುನಾಡು ಕಾವೇರಿ ನದಿ ಪ್ರಾಧಿಕಾರದ ಅಧ್ಯಕ್ಷರಾಗಿರುವ ಪ್ರಧಾನಿಗಳನ್ನು ಕಂಡು ತಮ್ಮ ಪಾಲಿಗೆ ಧಕ್ಕಬೇಕಿರುವ 205 ಟಿಎಂಸಿ ನೀರಿನಲ್ಲಿ ಉಳಿದ ಪಾಲನ್ನು ಬಿಡುವಂತೆ ಕರ್ನಾಟಕಕ್ಕೆ ಸೂಚಿಸುವ ಮನವಿ ಸಲ್ಲಿಸಿದೆ.

ಇದಕ್ಕೆ ಪ್ರತಿಯಾಗಿ ಎಲ್ಲಾ ಪಕ್ಷಗಳ ಸಭೆ ನಡೆದು, ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಪರಿಸ್ಥಿತಿ ವಿವರಿಸಿ ಮನವಿ ಪತ್ರವನ್ನು ಪ್ರಧಾನಿಗಳಿಗೆ 14 ರಂದು ಸಲ್ಲಿಸಲಾಗಿದೆ. ಇದರಲ್ಲಿ ಸಿಪಿಐ(ಎಂ), ಸಿಪಿಐ ಪಕ್ಷಗಳ ರಾಜ್ಯ ನಾಯಕರೂ ತೆರಳಿದ್ದರು. ಉಭಯ ರಾಜ್ಯಗಳ ನಡುವಿನ ಸೌಹಾರ್ದತೆ-ಸಮಸ್ಯೆ ಇತ್ಯರ್ಥದ ಮಾರ್ಗಸೂತ್ರಗಳನ್ನು ಎಡಪಕ್ಷಗಳು ಪ್ರತಿಪಾದಿಸಿದವು.

22 ರಂದು ಕಾವೇರಿ ಪ್ರಾಧಿಕಾರದ ಸಭೆ ನಿಗದಿಯಾಗಿದೆ. ಆದರೆ ಈ ಒಳಗಾಗಿ ತಮಿಳುನಾಡು ಸರ್ಕಾರ ನ್ಯಾಯದೊರಕಿಸಲು ಸುಪ್ರೀಂ ಕೋರ್ಟ್‌ಗೆ ಮೊರೆಹೋಗಿದೆ.

ಇದೊಂದು ಗಂಭೀರ ಪರಿಸ್ಥಿತಿ-ಸೂಕ್ಷ್ಮ ಪ್ರಶ್ನೆ. ಎರಡೂ ಕಡೆಯ ರೈತರ ಹಿತ ಕಾಯುವುದು ಅತಿ ಅಗತ್ಯವಿದೆ. ಆದ್ದರಿಂದ ಉಭಯ ರಾಜ್ಯ ಸರ್ಕಾರಗಳೂ ವಿಳಂಬಿಸದೆ ಪರಸ್ಪರ ಕುಳಿತು, ತಮಗೆ ಬಂದೊದಗಿರುವ ಆಪತ್ತು-ಸದ್ಯದ ವಾಸ್ತವ ಸ್ಥಿತಿಗತಿಗಳು, ಸಾಧ್ಯಾಸಾಧ್ಯತೆಗಳನ್ನು ಚರ್ಚಿಸಿ, ಇರುವುದನ್ನು ಹಂಚಿಕೊಳ್ಳಬೇಕು. ಇದು ಬಿಟ್ಟು ಬೇರೆ ದಾರಿಯಿಲ್ಲ. ಇಲ್ಲಿ ಬಗೆಹರಿಯದಿದ್ದರೆ ಕೇಂದ್ರಕ್ಕೆ ಮನವಿ ಮಾಡಬಹುದು. ಈಗಂತೂ ಅಷ್ಟು ಇಷ್ಟು ಮಳೆ ಆರಂಭಗೊಂಡಿರುವುದು ಸ್ವಲ್ಪ ಸಹಾಯ ಮಾಡಬಹುದು. ಆದರೆ ಕರ್ನಾಟಕದಲ್ಲಿಯೂ ತಮಿಳುನಾಡಿನಲ್ಲಿಯೂ ಕೆಲವರು ಒಬ್ಬರನ್ನು ಇನ್ನೊಬ್ಬರ ವಿರುದ್ಧ ಎತ್ತಿ ಕಟ್ಟುವ ಯಥಾರೀತಿ ಅವರ ರಾಜಕೀಯ ಆಟ ಆಡಬಯಸುತ್ತಿದ್ದಾರೆ. ಇದು ಖಂಡನೀಯ. ಮುಖ್ಯಮಂತ್ರಿಗಳು ಕರೆದ ಸಭೆಯಲ್ಲಿ ಉಭಯ ರಾಜ್ಯಗಳ ಮಾತುಕತೆಗೆ ಮುಂದಾಗುವುದನ್ನು ಬಿಜೆಪಿ ನಾಯಕರು ಬಹಳ ನಾಜೂಕಿನಿಂದ ದೂರ ಮಾಡಲು ಯತ್ನಿಸಿದರು. ಏನಿದ್ದರೂ ವಾಜಪೇಯಿ ಸಮರ್ಥ ನಾಯಕತ್ವದಲ್ಲಿ ಬಗೆಹರಿಯಲಿ, ಎರಡೂ ರಾಜ್ಯಗಳು ಪರಸ್ಪರ ಆದಷ್ಟು ದೂರವಿರಲಿ, ದ್ವೇಷವಿದ್ದರೆ ಒಳ್ಳೆಯದು ಎಂದೂ ಜಯಲಲಿತ ವಾಜಪೇಯಿಯವರ ಬಳಿ ಬರಲಿ ಎಂಬ ದುರಾಲೋಚನೆ. ಆಹಾ ಎಂತಹ ಕಾಳಜಿ.

ಖಾಸಗಿ ಧಣಿಗಳಿಗೆ ವಿದ್ಯುತ್ ರಂಗ ದಾನ


ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ. ಗುರುಶಾಂತ್

ಕರ್ನಾಟಕದ ರೈತರನ್ನು , ಸಣ್ಣ ಕೈಗಾರಿಕೆ ಹಾಗೂ ಗ್ರಾಹಕರನ್ನು ಮುಳುಗಿಸಲೆಂದೇ ಟೊಂಕಕಟ್ಟಿ ನಿಂತಿರುವ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ತಮ್ಮ ಹಂತಹಂತದ 'ಸುಧಾರಣೆ'ಗಳ ಪರಿಯಂತೆ ಇನ್ನೂ ಕೆಲವು ತಿಂಗಳಲ್ಲಿ ಕೆಲವು ಆಯ್ದ ಖಾಸಗಿ ಧಣಿಗಳಿಗೆ ಇಡೀ ಸಂಸ್ಥೆ ಹಾಗೂ ಅದರ ವಹಿವಾಟುಗಳನ್ನು ಮಾರಲಿದ್ದಾರೆಂದು ತಿಳಿದು ಬಂದಿದೆ. ಮುಖ್ಯವಾಗಿ ಮಲ್ಯನಂತಹ 'ಉದ್ದಿಮೆ' ದಾರರೊಂದಿಗೆ ಕೃಷ್ಣರ ಸರ್ಕಾರ ಒಂದು ತಿಳುವಳಿಕೆಯ ಒಪ್ಪಂದಕ್ಕೆ ಬರುತ್ತಿದೆಯಂತೆ. ಇದು 'ವಿಶ್ವಬ್ಯಾಂಕ್' ನ ನಿರ್ದೇಶನದ ಜಾರಿಯ ಕ್ರಮವಾಗಿದೆ.

ಇಂದಿನ ಸ್ಥಿತಿಯಲ್ಲಿ ಬದುಕುಳಿಯಲು ಏದುಸಿರು ಬಿಡುತ್ತಿರುವ ಕೃಷಿ ರಂಗದಲ್ಲಿ ಈ ಖಾಗೀಕರಣ ಖಂಡಿತಕ್ಕೂ ಅವಸಾನವನ್ನು ತರಲಿದೆ. ವಿದ್ಯುತ್ ಕ್ಷೇತ್ರ ಹಾಗೂ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬಹುದು ಎಂಬ ಅನೇಕ ನಿರ್ದಿಷ್ಟ ಸೂಚನೆ-ಸಲಹೆಗಳನ್ನು ಕೇವಲ ಕೇಳಿಸಿಕೊಂಡು ಇನ್ನೊಂದು ಕಿವಿಯಲ್ಲಿ ಬಿಟ್ಟುಬಿಟ್ಟು ಸರ್ಕಾರದ ವಿಶ್ವಬ್ಯಾಂಕ್ ಹಾಗೂ ಖಾಸಗಿ ಧಣಿಗಳ ಅಣತಿಯನ್ನೇ ಜಾರಿಗೊಳಿಸಲು ಮುಂದಾಗುತ್ತಿರುವುದು ಅದರ ವಂಚಕ, ದ್ರೋಹದ ಜನವಿರೋಧಿ ನಿಲುವು ತೋರುತ್ತದೆ. ರೈತರ ಆತ್ಮಹತ್ಯೆ ಬಗ್ಗೆ, ಬರದ ಬಗ್ಗೆ ಕುರಿತು ಅನುಕಂಪದ ಮಾತನಾಡುವ ಸರ್ಕಾರ, ಇನ್ನೊಂದೆಡೆ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ, ಹಾಗೂ ಹಳೇ ಬಾಕಿ ಹೆಸರಿನಲ್ಲಿ ಡಿಸ್‌ಕನೆಕ್ಷನ್ ಮುಂದುವರಿಸಿದೆ.

ಅಂತಿಮವಾಗಿ ಖಾಸಗೀ ಧಣಿಗಳಿಗೆ ಇವನ್ನೆಲ್ಲ ಒಪ್ಪಿಸಿದಲ್ಲಿ ಲಾಭ ಸೂರೆಗೊಳ್ಳುವ ದೃಷ್ಟಿ ಮಾತ್ರವೇ ಅವರಿಗಿದ್ದು, ಸಾಮಾಜಿಕ,ಆರ್ಥಿಕ ಅಭಿವೃದ್ಧಿ, ಜನಕಾಳಜಿ ಖಂಡಿತ ಇರಲಾರದು. ಇದನ್ನೇ ಇತ್ತೀಚಿಗಿನ ತಜ್ಞರು ವಿಚಾರಸಂಕಿರಣದಲ್ಲಿ ಖಡಾಖಂಡಿತ ನುಡಿದಿದ್ದಾರೆ. ಅನಾಹುತಗಳ ಬಗ್ಗೆ ಎಚ್ಚರಿಸಿದ್ದಾರೆ. ಮುಖ್ಯವಾಗಿ ಆಂಧ್ರದ ವಿದ್ಯುತ್ ಮಂಡಳಿಯ ಮಾಜಿ ಅಧ್ಯಕ್ಷರಾದ ತಾತಾರಾವ್ ರವರು ನೇರವಾಗಿ ಆಂಧ್ರ ಸರ್ಕಾರದ ವಿನಾಶಕಾರಿ ಕ್ರಮಗಳನ್ನು, ಜನರ ಪ್ರತಿರೋಧವನ್ನು ಕಣ್ಣಾರೆ ಕಂಡವರು ಅಧನ್ನು ಬಿಡಿಸಿದ್ದಾರೆ ಆದರೆ ಇವುಗಳನ್ನು ಒಪ್ಪುವ, ಜನರನ್ನು ರಕ್ಷಿಸುವ ಪ್ರಾಮಾಣಿಕತೆ, ಕೃಷ್ಣರ ಸರ್ಕಾರಕ್ಕೆ ಇದೆಯೇ? ಅಥವಾ ವಿಶ್ವಬ್ಯಾಂಕ್‌ನ ಗುಲಾಮತನವನ್ನೇ ನೆಚ್ಚಿಕೊಳ್ಳುತ್ತಾರಾ? ವಾಜಪೇಯಿ - ಕೃಷ್ಣರ ಸರಕಾರಗಳಿಗೆ ಎರಡನೆಯದೇ ಪ್ರೀತಿ.



ವಿದ್ಯುತ್ ಕ್ಷೇತ್ರ ಖಾಸಗೀಕರಣ ಟೀಕೆ-ಕೆಲವು ಸಲಹೆಗಳು

ಆ ಕ್ಷೇತ್ರದ ಹಿರಿಯ ತಜ್ಞ, ಅನುಭವಿಯೊಬ್ಬರ ಬಿಚ್ಚು ನುಡಿಗಳು

ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಸರ್ಕಾರದ ನೀತಿಯನ್ನು ಹಿರಿಯ ತಜ್ಞ, ಆಂಧ್ರಪ್ರದೇಶ ರಾಜ್ಯ ವಿದ್ಯುತ್ ಮಂಡಳಿಯ ಮಾಜಿ ಅಧ್ಯಕ್ಷ ಡಾ.ಎನ್.ತಾತಾರಾವ್ ಕಟುವಾಗಿ ಟೀಕಿಸಿದರು.

ಖಾಸಗಿ ರಂಗದವರ ಆಸಕ್ತಿ ಕೇವಲ ಕಡಿಮೆ ಅವಧಿಯಲ್ಲಿ ಹೆಚ್ಚು ಲಾಭ ಮಾಡುವ ಉದ್ದೇಶವಿದ್ದು ವಿದ್ಯುತ್ ವಿತರಣೆಯನ್ನು ಸಹ ಖಾಸಗಿಯವರಿಗೆ ನೀಡುವ ಕ್ರಮ ಖಾಸಗೀಕರಣ ಪಂಡಿತರ ದೊಡ್ಡ ಪ್ರಮಾದವಾಗಿದೆ. ಪ್ರತಿಯೊಂದು ರಾಜ್ಯದ ರಾಜಕಾರಣಿಗಳು ಖಾಸಗಿ ಕಂಪನಿಗಳ ಜೊತೆಗೆ ತಿಳಿವಳಿಕೆ ಒಪ್ಪಂದ ಇತ್ಯಾದಿಗಳಿಗೆ ಸಹ ಹಾಕಲು ಸ್ಪರ್ಧಿಸುವ ಮೂಲಕ ಬಡಗ್ರಾಹಕರು ಖಾಸಗಿ ರಂಗದವರ ಕರುಣೆಯಲ್ಲಿ ಬದುಕುವಂತಹ ವಾತಾವರಣ ಸೃಷ್ಟಿಸುತ್ತಿದ್ದಾರೆಂದು ತಿಳಿಸಿದರು. ವಿಶ್ವಬ್ಯಾಂಕ್ ನಿರ್ದೇಶನಗಳನ್ನೇ ಸುಧಾರಣೆಗಳು ಆಧರಿಸಬೇಕಿಲ್ಲ ಎಂದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಕರ್ನಾಟಕ ವಿದ್ಯುತ್ ಮಂಡಳಿ ಇಂಜಿನಿಯರ್ ಸಂಘ ಸಂಯುಕ್ತವಾಗಿ ಭಾರತದಲ್ಲಿ ವಿದ್ಯುತ್ ವಲಯದ ಸುಧಾರಣೆ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡುತ್ತಿದ್ದರು.

ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ವಿದ್ಯುತ್ತನ್ನು ಉಳಿದ ವಸ್ತುಗಳ ರೀತಿಯಲ್ಲಿ ಹೋಲಿಸಬಾರದು. ಬಂಡವಾಳ ಹೂಡುವುದೆಂದರೆ ನ್ಯಾಯಯುತವಾಗಿ ಅಥವಾ ಅನ್ಯಾಯಯುತವಾಗಿಯಾದರೂ ಹಣ ಗಳಿಸಬೇಕು ಎಂದು ಅರ್ಥೈಸುವುದು ಸರಿಯಲ್ಲ. ವಿದ್ಯುಚ್ಛಕ್ತಿಯನ್ನು ಗ್ರಾಹಕರಿಗೆ ಅತ್ಯಂತ ಕಡಿಮೆದರದಲ್ಲಿ ಸಾಕಷ್ಟು ಉತ್ತಮ ಗುಣಮಟ್ಟದಲ್ಲಿ ಒದಗಿಸಬೇಕು. ವಿದ್ಯುಚ್ಛಕ್ತಿಯ ಸಹಾಯದಿಂದ ಉತ್ಪಾದಿಸುವ ವಸ್ತುಗಳ ಮೂಲಕ ಲಾಭ ಬರಬೇಕೆ ಹೊರತು ವಿದ್ಯುತ್‌ನಿಂದ ಅಲ್ಲ ಎಂದ ಅವರು ಇಂತಹ ಪ್ರಮುಖ ಅಂಶವನ್ನು ನಾವು ಮರೆತುಬಿಟ್ಟಿದ್ದೇವೆ ಎಂದು ವಿಷಾದಿಸಿದರು.

ವಿದ್ಯುತ್ ವಲಯವನ್ನು ಬಲಿಷ್ಟಗೊಳಿಸಲು ಕೇಂದ್ರ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಳ್ಳಬೇಕು ಎಂದ ತಾತಾರಾವ್ ಅವರು ಹಾಲಿ ಅಸ್ತಿತ್ವದಲ್ಲಿರುವ ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣ ವ್ಯವಸ್ಥೆಯಲ್ಲಿ ರಾಜ್ಯಗಳು ಒಂದು ನಿಗಮ ರಚಿಸಬೇಕು.ಈ ನಿಗಮದ ಮೂಲಕ ವಿದ್ಯುತ್ತನ್ನು ಖಾಸಗಿ ಅಥವಾ ಸಾರ್ವಜನಿಕ ವಲಯದ ಮೂಲಕ ವಿತರಿಸುವ ವ್ಯವಸ್ಥೆ ಮಾಡಬೇಕು. ಅದೇರೀತಿ ಗ್ರಾಮೀಣ ವಲಯಕ್ಕೆ ಸಂಬಂಧಿಸಿದಂತೆ ಸಹಾಯಧನವನ್ನು ಹೈಟೆನ್ಷನ್ ವಿದ್ಯುತ್ ಗ್ರಾಹಕರು ಮತ್ತು ನಗರ ಗ್ರಾಹಕರ ಮೂಲಕ ಸಂಗ್ರಹಿಸಬೇಕು. ಆದರೆ ಹೆಚ್ಚಿನ ಪ್ರಮಾಣವನ್ನು ವಿದ್ಯುತ್ ಸಹಾಯದಿಂದ ಉತ್ಪನ್ನಗಳನ್ನು ತಯಾರಿಸುವವರಿಂದ ಸಂಗ್ರಹಿಸಬೇಕು ಎಂದು ಸಲಹೆ ಮಾಡಿದರು.

ಮುಖ್ಯ ಅತಿಥಿಗಳಾಗಿ ಕೆಪಿಟಿಸಿಎಲ್ ಅಧ್ಯಕ್ಷ ವಿ.ಪಿ.ಬಳಿಗಾರ್ ವಿಚಾರಸಂಕಿರಣ ಉದ್ಘಾಟಿಸಿ ಸರ್ಕಾರದ ನಿಲುವನ್ನು ಪ್ರತಿಪಾದಿಸಿದರು. ಅಧ್ಯಕ್ಷತೆಯನ್ನು ಕೇಇಬಿ ಇಂಜಿನಿಯರ್ ಸಂಘದ ಅಧ್ಯಕ್ಷ ಕೆ.ಸಿ.ನಾಯ್ಕುವಾಡಿ ವಹಿಸಿದ್ದರು.

ಶಿಕ್ಷಕರ ಸಂಖ್ಯೆ ಹೆಚ್ಚಾಗಿದೆಯೇ?

ಕರ್ನಾಟಕದಲ್ಲಿ ಶಿಕ್ಷಕರ ಕೊರತೆಯೇ ಇಲ್ಲ. ಕೆಲಸವೇ ಇಲ್ಲದೆ ಹೆಚ್ಚಳವಿರುವ ಶಿಕ್ಷಕರ ಸಂಖ್ಯೆಯೇ ಅತ್ಯಧಿಕ, ಇನ್ನ್ಯಾಕೆ ನೇಮಕಾತಿ ಎಂದು ಪ್ರಶ್ನಿಸಿದೆ ಕಮ್‌ಟ್ರೋಲರ್ ಅಕೌಂಟ್ಸ್ ಜನರಲ್ ಸಂಸ್ಥೆ. ಅದರ ಪ್ರಕಾರ ರಾಜ್ಯದಲ್ಲಿ 47847 ಶಿಕ್ಷಕರು ಹೆಚ್ಚುವರಿ ಇದ್ದಾರೆ. ಇಂತಹ ಸ್ಥಿತಿಯಲ್ಲಿ ಮತ್ತ್ಯಾಕೆ ನಿಯೋಜಿತ 15 ಸಾವಿರ ಶಿಕ್ಷಕರ ನೇಮಕ, ಅದು 261 ಕೋಟಿ ರೂಪಾಯಿಗಳು ಬೊಕ್ಕಸಕ್ಕೆ ಹೊರೆ ಎಂಬ ವಿಶ್ಲೇಷಣೆಗಳು.

ಆದರೆ ನಮ್ಮ ಗ್ರಾಮಗಳಲ್ಲಿ ಹಲವು ನಗರಗಳಲ್ಲಿ ವಿದ್ಯಾರ್ಥಿಗಳ ಹಾಗೂ ತರಗತಿಗಳ ಪ್ರಮಾಣಕ್ಕೆ ಅನುಗುಣವಾಗಿ ಶಿಕ್ಷಕರೇ ಇಲ್ಲದೇ ಭೋದನೆಯೆಂಬ ಪ್ರಹಸನ ನಡೆಯುತ್ತಿರುವಾಗ ಅದೇ ಸಾವಿರಾರು ಶಾಲೆಗಳು ಏಕೋಪಾದ್ಯಾಯ ಶಿಕ್ಷಕರಿಂದ ನಡೆಯುತ್ತ ಕೊರತೆ ಅನುಭವಿಸುತ್ತಿರುವ ವರದಿ ಸರ್ಕಾರದ ಕಣ್ಣೆದುರೇ ಇರುವಾಗ ಇದೆಂತಹ ಸೂಚನೆ? ಸರಕಾರ ತನಗೆ ಬೇಕಾದಂತೆ ಶಿಕ್ಷಕರ ವಿದ್ಯಾರ್ಥಿಗಳ ಅನುಪಾತ ನಿಗದಿಪಡಿಸಿ ಶಾಲೆಗಳನ್ನು ಮುಚ್ಚಿಸಿ (ಅಥವಾ ಇನ್ನೊಂದಕ್ಕೆ ಸೇರ್ಪಡೆ ಮಾಡಿ) ಇಂತಹ ಲೆಕ್ಕ ಇಟ್ಟಿರುವುದು ತಿಳಿದ ವಿಷಯ.

ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿನ ತನ್ನ ಹೊಣೆಯಿಂದ ಜಾರಿಕೊಳ್ಳುವ ಕಸರತ್ತಿನಂತೆ ಮತ್ತು ಶಿಕ್ಷಣವನ್ನು ಖಾಸಗೀಕರಿಸುವ ನಿಟ್ಟಿನಲ್ಲಿ ಇದೂ ಒಂದು ಹೆಜ್ಜೆ. ಇಂತಹದ್ದನ್ನೇ ಬಲಪಡಿಸುವಂತಹದು ಈ ಸಿಎಜಿ ವರದಿ. ಇದೂ ಸಹ His Master Voice ಅಲ್ಲವೇ!

ವಿಜಾಪುರದ ಚಿಕ್ಕಪಡಸಲಗಿಗೆ ಬಂದ ಸೋನಿಯಾಗಾಂಧಿಗೆ ತುಲಾಭಾರ ಮಾಡಿ, ಸಂತೃಪ್ತಿಪಡಿಸಿ, ಸ್ಥಾನ ಗಟ್ಟಿಯಾಗಿಸಿಕೊಳ್ಳುವ ಕಾರ್ಯಕ್ಕೆ ಕೃಷ್ಣ ಹಾಗೂ ಅವರ ಬಂಟರು ಸಿದ್ಧರಾದರು. ಆದರೆ ಬರಗಾಲದಿಂದ ತತ್ತರಿಸಿದ ಸ್ಥಿತಿಯೆದುರು ಜನರ ವಿರೋಧದಿಂದ ಅದನ್ನೇ ಕೈ ಬಿಟ್ಟರು. ಆದರೆ ಬವಣೆಯಲ್ಲಿ ಬೇಯುತ್ತಿರುವ ಜನತೆಗೆ, ಆತ್ಮಹತ್ಯೆಗೆ ಕಾರಣವಾದ ದಿವಾಳಿಖೋರ ಕೃಷಿ ನೀತಿ ಬಗ್ಗೆ, ರೈತರನ್ನು ರಕ್ಷಿಸುವ ಬಗ್ಗೆ ಏನೊಂದೂ ಮಾತನಾಡಲಿಲ್ಲ. ಇವುಗಳನ್ನು ಅರಿಯದಷ್ಟು ಮುಗ್ಧರೇ ಅವರು?

ಪಂಚನದಿಗಳ ಬೀಡು ಇನ್ನೂ ಬರಪೀಡಿತನಾಡು ಯಾಕೆ?

ಎನ್.ಕೆ.ಉಪಾಧ್ಯಾಯ

ಬಾಗಲಕೋಟೆ ತಾಲೂಕಿನ ಚಿಕ್ಕಪಡಸಲಗಿ (ಕೃಷ್ಣ ನದಿದಂಡೆಯಲ್ಲಿ ರೈತರೇ ಹತ್ತಾರುವರ್ಷದ ಹಿಂದೆ ತಮ್ಮ ಖರ್ಚಿನಿಂದ ಕೃಷ್ಣಾನದಿಗೆ ಒಡ್ಡು ಕಟ್ಟಿ ತಮ್ಮ ಹೊಲಕ್ಕೆ ನೀರುಣಿಸಿ ಕಬ್ಬು ಬೆಳೆಯುತ್ತಿದ್ದರು. ಈಗ ಕೋಟ್ಯಾವಧಿ ರೂಪಾಯಿ ಖರ್ಚು ಮಾಡಿ ತಮ್ಮ ದೇ ಸಕ್ಕರೆ ಕಾರ್ಖಾನೆ ಸ್ಥಾಪಿಸಿದ್ದಾರೆ. ಈ ಹೊಸ ಸಕ್ಕರೆ ಕಾರ್ಖಾನೆಯ ಉದ್ಘಾಟನೆಗೆ ಸೋನಿಯಾ ಗಾಂಧಿಯವರನ್ನು ಕರೆತರಲಾಗಿದೆ. ಸೋನಿಯಾಗಾಂಧಿಯವರು ಸಕ್ಕರೆ ಕಾರ್ಖಾನೆಯ ಉದ್ಘಾಟೆ ಮಾಡುತ್ತಾ ಪಂಚನದಿಗಳ ಬೀಡಾದ ಈ ಪ್ರದೇಶದಲ್ಲಿ ಕುಡಿಯುವ ನೀರಿನ ಕೊರತೆ ಇದೆಯೆಂಬದು ಆಶ್ಚರ್ಯಕರ, ಈ ಜಿಲ್ಲೆಗಳು ಪದೇ ಪದೇ ಬರ ಪರಿಸ್ಥಿತಿ ಅನುಭವಿಸುತ್ತಿವೆ ಎಂಬುದು ದುಃಖಕರ ಎಂದು ಹೇಳಿದ್ದಾರೆ. ಇದರ ಜೊತೆಯಲ್ಲಿಯೇ ತಮ್ಮ ಭಾಷಣದಲ್ಲಿ ಹಿಂದೆ ಬಂಗ್ಲಾದೇಶದ ಮೇಲೆ ಪಾಕಿಸ್ತಾನ ಆಕ್ರಮಣ ಮಾಡಿದಾಗ ಭಾರತ ದೇಶ ಮಧ್ಯಪ್ರವೇಶಿಸಿ ಬಾಂಗ್ಲಾದೇಶದ ಪರವಾಗಿ ಹೋರಾಡಿತ್ತು. ಆಗ ಇಂದಿರಾಗಾಂಧಿಯವರು ಬಿಜಾಪುರಕ್ಕೆ ಬಂದಾಗ ಅವರನ್ನು ಬಂಗಾರದಿಂದ ತುಲಾಭಾರ ಮಾಡಿದ್ದರು. ಹಿಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರ ತುಲಾಭಾರವೂ ಆಗಿತ್ತು. ಈಗ ಚಿಕ್ಕಪಡಸಲಗಿಯಲ್ಲಿ ಸೋನಿಯಾಗಾಂಧಿ - ಎಸ್.ಎಂಕೃಷ್ಣ ಅವರನ್ನು ಬೆಳ್ಳಿಯಿಂದ ತುಲಾಭಾರ ನಡೆಸುವ ತಯಾರಿ ನಡೆದಿತ್ತು. ಜನರ ವಿರೋಧಕ್ಕೆ ಮಣಿದು ಬೆಳ್ಳಿ ತುಲಾಭಾರ ಕೈಬಿಟ್ಟು 125 ಕೆ.ಜಿ.ತೂಕದ ಬೆಳ್ಳಿ ನಾಣ್ಯ ಕೊಡಲಾಯಿತು.

ನೀರಿದ್ದೂ ಬರ ಯಾಕೆ?

ಬಿಜಾಪುರ-ಬಾಗಲಕೋಟೆಗಳಲ್ಲಿ ಉದ್ಭವಿಸಿರುವ ಭೀಕರ ಬರಗಾಲ ಅದೂ ಪಂಚ ನದಿಗಳು ನೀರು ತುಂಬಿ ಹರಿಯುತ್ತಿರುವ ಪ್ರದೇಶದಲ್ಲಿ ಬರಗಾಲ ಇನ್ನೂ ಯಾಕೆ ಬೇರೂರಿ ನಿಂತಿದೆ, ಅದಕೆ ಪರಿಹಾರ ಏನು ಎಂಬುದನ್ನು ಸೋನಿಯಾಗಾಂಧಿ ರಾಜ್ಯದ ಮುಖ್ಯಮಂತ್ರಿಗಳಿಗೆ ಮನದಟ್ಟು ಮಾಡಿಕೊಡುವ ಗೊಡೆಗೆ ಹೋಗಲಿಲ್ಲ.

ಸೋನಿಯಾಗಾಂಧಿಯ ಅತ್ತೆ ಇಂದಿರಾ ಗಾಂಧಿಯ ಬಂಗಾರದ ತುಲಾಭಾರ, ಹಿರಿಯ ಧುರೀಣ ನಿಜಲಿಂಗಪ್ಪನವರ ನೋಟಿನ ತುಲಾಭಾರ ನಡೆದರೂ, ಉತ್ತಮ ಮಣ್ಣಿನಿಂದ ಮೆರೆಯುತ್ತಿರುವ ಬಿಜಾಪುರ-ಬಾಗಲಕೋಟೆ ಜಿಲ್ಲೆಗಳು ಎರಡನೇ ಪಂಜಾಬಾಗಿ ಕಂಗೊಳಿಸದೆ ಕಳೆದ 60-70 ವರ್ಷಗಳಿಂದಲೂ ಭೀಕರ ಬರಗಾಲಗಳಿಂದ ಬೆಂದು ತತ್ತರಿಸುತ್ತಿರುವುದೇಕೆ? ಬಿಜಾಪುರ-ಬಾಗಲಕೋಟೆ ಜಿಲ್ಲೆಗಳಲ್ಲಿಯ ಭೀಕರ ಬರಗಾಲ ಪರಿಸ್ಥಿತಿಯನ್ನು ಸೋನಿಯಾಗಾಂಧಿ ನೋಡಿಯಾಯಿತು. ಪಂಚನದಿಗಳಲ್ಲಿ ನೀರು ತುಂಬಿಹರಿಯುತ್ತಿರುವುದನ್ನು ನೋಡಿಯಾಯಿತು. ಆದರೆ ಪಂಚನದಿಗಳು ತುಂಬಿ ಹರಿಯುತ್ತಿರುವಾಗ ಬಿಜಾಪು-ಬಾಗಲಕೋಟೆ ಜಿಲ್ಲೆಗಳಿಗೆ ಶಾಶ್ವತ ಬರಗಾಲ ನಿವಾರಣೋಪಾಯ ಕೈಗೊಳ್ಳಲು ಸಾಧ್ಯವಿಲ್ಲವೇ. ಮೊನ್ನೆ ಚಿಕ್ಕ ಪಡಸಲಿಗೆ ಮುಖ್ಯಮಂತ್ರಿಯನ್ನೊಳಗೊಂಡು ಹತ್ತಿಪ್ಪತ್ತು ಮಂತ್ರಿಗಳಿದ್ದರು, ಶಾಸಕರ ಹಿಂಡೆ ನೆರೆದಿತ್ತು. ಕಾರ್ಯಕ್ರಮ ಮುಗಿದ ನಂತರ ಬರಪರಿಸ್ಥಿತಿಯನ್ನು ಪಂಚ ನದಿಗಳಲ್ಲಿ ಹರಿಯುತ್ತಿರುವ ನೀರನ್ನು ನೋಡಿ ಕರ್ನಾಟಕದಲ್ಲಿ ತನ್ನ ಪಕ್ಷವೇ ಹೆಚ್ಚು ಕಾಲ ರಾಜ್ಯಆಳಿದ್ದು, ದಶಮಾನಗಳೇ ಗತಿಸಿದರೂ ರೈತರನ್ನು ಬರದ ಬವಣೆಯಿಂದ ರಕ್ಷಿಸಲು ಸಾಧ್ಯ ಯಾಕೆ ಆಗಿಲ್ಲವೆಂಬ ಅತ್ಯಂತ ಗಂಭೀರ ವಿಷಯವನ್ನು ಚರ್ಚಿಸುವ ಸಲುವಾಗಿ ಒಂದೆರೆಡು ಗಂಟೆ ಬಿಜಾಪುರದಲ್ಲೇ ಉಳಿಯಬಹುದಿತ್ತು. ಹಲವಾರು ವರ್ಷ ದೇಶವನ್ನಾಳಿದ ಈಗ ವಿರೋಧಪಕ್ಷದ ಮುಖಂಡರಾಗಿರುವ ಸೋನಿಯಾಗಾಂಧಿಯವರಿಗೆ ರೈತರ ಭೀಕರ ಬವಣೆಯನ್ನು ಕಂಡು ಮನಸ್ಸು ನೊಂದಿದ್ದರೆ, ಜವಾಬ್ದಾರಿ ವ್ಯಕ್ತಿಯಾಗಿರುವ ಅವರಿಗೆ ಶಾಶ್ವತ ಬರಗಾಲ ಪರಿಹಾರದ ಕುರಿತು ಚರ್ಚಿಸಲಿಲ್ಲ.

ನೆನೆಗುದಿಯಲ್ಲಿ ನೀರಾವರಿ ಯೋಜನೆ

ಈ ಎರಡು ಜಿಲ್ಲೆಗಳಲ್ಲಿಯ ನೀರಾವರಿ ಯೋಜನೆಗಳು ಕಳೆದ 50 ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿವೆ. ಕೇಂದ್ರ-ರಾಜ್ಯ ಸರಕಾರಗಳು ಎರಡು ಮೂರು ವರ್ಷಗಳಿಗೊಮ್ಮೆ ಬರದ ಕೆನ್ನಾಲಿಗೆಯಿಂದ ಜನ-ದನಗಳನ್ನು ಸುಡುತ್ತಿರುವಾಗ ಸಹ್ಯಾದ್ರಿ ಬೆಟ್ಟದಲ್ಲಿಯ ಮಳೆಯಿಂದಾಗಿ ಪಂಚ ನದಿಗಳು ತುಂಬಿ ಹರಿಯುತ್ತಿ ರುವಾಗ ಈ ನದಿಗಳು ನೀರನ್ನುಪಯೋಗಿಸಿಕೊಂಡು ಆಣೆಕಟ್ಟು, ಕಾಲುವೆ, ಕೆರೆಗಳ ಮೂಲಕ ನೀರು ಸಂಗ್ರಹಿಸಿಟ್ಟು ಬರಗಾಲಕ್ಕೆ ಪರಿಹಾರ ಬದಲಿಸಿ ಕೊಡಲಿಕ್ಕೆ ಸಾಧ್ಯವಿಲ್ಲವೇ? ಸೊನಿಯಾಗಾಂಧಿ ಇದನ್ನು ಗಂಭೀರವಾಗಿ ವಿಚಾರಮಾಡಿ ರಾಜ್ಯದ ಮಂತ್ರಿಗಳ ಜೊತೆಯಲ್ಲಿ ಸುಧೀರ್ಘ ಚರ್ಚಿಸಬೇಕಾಗಿದೆ.

ಈಗಿರುವ ನೀರಾವರಿ ಯೋಜನೆಗಳನ್ನೇ ಸಕಾಲದಲ್ಲಿ ಪೂರ್ಣಗೊಳಿಸಿದರೆ ಉದಾಹರಣೆಗಾಗಿ ತಿಳಿಗೊಳಧಿಂದ ಸಿಂದಗಿ, ಇಂಡಿ ಮೂಲಕ ಭೀಮಾ ನದಿ ವರೆಗಿನ ಕಾಲುವೆ, ಉಪಕಾಲುವೆಗಳನ್ನು ಇದೇ ವರ್ಷ ಸರಿಪಡಿಸಿದ್ದರೆ ಇಂಡಿ, ಸಿಂದಗಿ ತಾಲೂಕಿನ ಮುಕ್ಕಾಲು ಭಾಗ ಭೂಮಿ ನೀರುಣ್ಣುತ್ತಿತ್ತು. ನಾರಾಯಣಪುರ ಜಲಾಶಯದಿಂದ ತಿಳಿಗೊಳ ಊರಿನ ಮೂಲಕ ಯಾತ ನೀರಾವರಿಯನ್ನು ಈಗಾಗಲೇ ಮುಗಿಸಬೇಕಿತ್ತು. ಹಾಗಾಗಿದ್ದರೆ ಬಾಗೇವಾಡಿ, ಬಿಜಾಪುರ, ಜಮಖಂಡಿ ತಾಲೂಕುಗಳ ಹೆಚ್ಚಿನ ಭಾಗದ ಹಳ್ಳಿಗಳಿಗೆ ನೀರು ಒದಗಿಸಬಹುದಿತ್ತು. ಮುದ್ದೆಬಿಹಾಳ ತಾಲೂಕಿಗೂ ಅರ್ಧಕ್ಕಿಂತ ಹೆಚ್ಚಿನ ಭೂಮಿಗೆ ಸುಲಭದಲ್ಲೇ ನೀರುಣಿಸಬಹುದಿತ್ತು. ಭೀಮಾ ನದಿಗೆ ಅಡ್ಡಲಾಗಿ ಬಾಂದ ಕಟ್ಟುವ ಕಾರ್ಯಕ್ರಮ ನಾಲ್ಕೈದು ವರ್ಷಗಳ ಹಿಂದೆಯೇ ಮಂಜೂರಾಗಿತ್ತು. ಆದರೆ ಸರಕಾರ ಅದರತ್ತ ಗಮನಹರಿಸಲಿಲ್ಲ. ಭೀಮಾನದಿಯ ನೀರನ್ನು ಬಾಂದಗಳ ಮೂಲಕ ತಡೆ ಹಿಡಿದು ಇಂಡಿ, ಸಿಂದಗಿ, ಗುಲ್ಬರ್ಗ ಜಿಲ್ಲೆಗಳ ಸಾವಿರಾರು ಎಕ್ರೆಗಳಿಗೆ ನೀರುಣಿಸುವ ಯೋಜನೆ ಕಾರ್ಯರೂಪದಲ್ಲಿ ಬರುತ್ತಿಲ್ಲ. ಚಿಕ್ಕಪಡಸಲಗಿಯ



ರೈತರು ಒಟ್ಟು ಕಟ್ಟೆ ಕಬ್ಬು ಬೆಳೆಯುತ್ತಿರುವಂತೆ ಸರಕಾರ ಕಾಳಜಿ ವಹಿಸಿದರೆ,’ಕೃಷ್ಣಾನದಿಗೆ ಇನ್ನೂ ನಾಲ್ಕೈದು ಬಾಂದ ಕಟ್ಟಿ ಸಾವಿರಾರು ಎಕರೆಗೆ ನೀರುಣಿಸಬಹುದು. ಸೋನಿಯಾಗಾಂಧಿಯವರು ಬರಪರಿಸ್ಥಿತಿ ಕುರಿತು ಕಣ್ಣೀರು ಸುರಿಸುವುದಕ್ಕಿಂತ ತಮ್ಮ ಪಕ್ಷದ ಮುಖಂಡರಿಗೆ ಜಿಲ್ಲೆಯಲ್ಲಿರುವ ಪ್ರಕೃತಿ ದೇಣಿಗೆಯನ್ನು ಸರಿಯಾಗಿ ಉಪಯೋಗಿಸಿ, ಅದರ ಲಾಭ ರೈತರಿಗೆ ಸಿಗುವಂತೆ ಮಾಡಿ ಬಿಜಾಪುರ- ಬಾಗಲಕೋಟೆ ಜಿಲ್ಲೆಗಳ ರೈತರು ಶಾಶ್ವತ ಪರಿಹಾರ ಕಾಣುವಂತೆ ಮಾಡಬೇಕಾಗಿದೆ.

ತಾರತಮ್ಯ

ಹುಬ್ಬಿ-ಉತ್ತರಿ ಮಳೆ ಕೈಕೊಡುತ್ತಿರುವುದರಿಂದ ಹಿಂಗಾರು ಬೆಳೆ ರೈತರ ಕೈ ತಪ್ಪುತ್ತದೆ. ಭೀಕರ ಪರಿಸ್ಥಿತಿಯೆನ್ನೆದುರಿಸಬೇಕಾಗುತ್ತದೆ. ಪರಿಸ್ಥಿತಿಯ ಗಂಭೀರತೆಯನ್ನು ಸರಕಾರ ಪರಿಗಣಿಸಿದಂತೆ ಕಾಣುವುದಿಲ್ಲ. ಹೋದ ವರ್ಷ ಪಶ್ಚಿಮ ಬಂಗಾಳ ಸರ್ಕಾರ ನೆರೆ ಹಾವಳಿಗೆ ತುತ್ತಾದಾಗ, ಕೇಂದ್ರ ಸರ್ಕಾರ ಜ್ಯೋತಿಬಸು ಸರಕಾರಕ್ಕೆ ಸರಕಾರದ ಹಸ್ತ ನೀಡಲಿಲ್ಲ. ನೆರೆ ಪರಿಹಾರಕ್ಕೆ ಸರಿಯಾಗಿ ಪರಿಹಾರ ಒದಗಿಸಲಿಲ್ಲ. ಕರ್ನಾಟಕ ಸರ್ಕಾರದ ವಿಷಯದಲ್ಲಿ ಕೂಡ ವಾಜಪೇಯಿ ಸರ್ಕಾರ ಹೆಚ್ಚಿನ ಸಹಾಯ ಮಾಡಲಿಲ್ಲ. ರೈಲ್ವೆ ಅಭಿವೃದ್ಧಿ ಕುರಿತು ಬಿಜೆಪಿ ಲೋಕಸಭೆ ಸದಸ್ಯರು ಕರ್ನಾಟಕವನ್ನು ವಂಚಿಸುತ್ತಲೇ ಇದ್ದಾರೆ. ಬರ ಪರಿಹಾರದ ಕುರಿತು ಕೇಂದ್ರ ಸರಕಾರ ಕರ್ನಾಟಕದ ವಿಷಯದಲ್ಲಿ ಮಲತಾಯಿ ಧೋರಣೆ ತೋರಿಸುತ್ತದೆ.

ಅದೇ ನೀತಿಗಳು

ಬಿಜೆಪಿ ಧುರೀಣರಿಂದಸ ಹೆಚ್ಚು ಪರಿಹಾರಧನ ಒದಗಿಸಲು ಕಿಂಚಿತ್ತೂ ಯತ್ನಿಸದೇ ಬಂದಿದ್ದೇ ಭಾರಿ ಎಂದು ಪ್ರತಿಪಾದಿಸುತ್ತಿದ್ದಾರೆ. ಆದ್ದರಿಂದ ಬರ ಪರಿಹಾರಕ್ಕಾಗಿ ಪರಿಣಾಮಕಾರಿಯಾದ ಜನಾಂದೋಲನೆ ನಡೆಸುವ ಅಗತ್ಯವಿದೆ. ಕೇಂದ್ರಕ್ಕೆ ರೈತರ ಗೋಳು ಕೇಳುತ್ತಿಲ್ಲ ನಿಜ, ಆದರೆ ಗೋಳನ್ನು ದಿನನಿತ್ಯ ಕೇಳುತ್ತಿರುವ ಕರ್ನಾಟಕ ಸರ್ಕಾರಗಳು ಮಾಡಿದ್ದೇನು? ರೈತ ಕುಟುಂಬಗಳು ಬರಗಾಲ ಮಾತ್ರವಲ್ಲ, ಕೃಷಿ ಮತ್ತು ಒಕ್ಕಲತನದ ನೂರಾರು ಸಮಸ್ಯೆಗಳನ್ನೆದುರಿಸುತ್ತಿರುವಾಗ ಈಗ ರಾಜ್ಯ ಸರ್ಕಾರ ಕೇಂದ್ರ ಸರಕಾರದ ನೀತಿಯನ್ನೇ ಚಾಚೂ ತಪ್ಪದೇ ಅನುಸರಿಸುತ್ತಿದ್ದಾರೆ. ರೈತರತ್ತ ಕಾಳಜಿಯೇ ಇಲ್ಲ. ಚಿಕ್ಕಪಡಸಲಗಿಯಲ್ಲಿ ಸೋನಿಯಾಗಾಂಧಿ ಸಮಕ್ಷಮ ರೈತನ್ನುದ್ದೇಶಿಸಿ ಭಾಷಣ ಮಾಡುತ್ತಾ ‘ಈಗ ಸರಕಾರ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡಲು ನಿರ್ಧರಿಸಿದೆಂದು ಸಾರಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ರೈತಕುಟುಂಬಕ್ಕೆ ಪರಿಹಾರ ಕೊಡಬೇಕು ನಿಜ, ಆದರೆ ರೈತರಾಗಲೀ, ನೇಕಾರರು ಆತ್ಮಹತ್ಯೆ ಮಾಡಿಕೊಳ್ಳದಂತೆ ಅವರಲ್ಲಿ ಧೈರ್ಯ ತುಂಬುವ ಅವರ ಕೃಷಿ ಉಳಿಸುವ ಮಾತುಗಳನ್ನು ಎಸ್.ಎಂ.ಕೃಷ್ಣರವರಾಗಲೀ ಸೋನಿಯಾ ಗಾಂಧಿಯವರಾಗಲೀ ಆಡಲಿಲ್ಲ.

ಆತ್ಮವಿಶ್ವಾಸ

ಅಖಿಲ ಭಾರತ ಕಿಸಾನ್ ಸಭಾ, ಕರ್ನಾಟಕ ಪ್ರಾಂತ ರೈತ ಸಂಘ ರೈತರಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ. ರೈತರೇ ನೀವು ಆತ್ಮಹತ್ಯೆಗೆ ಒಳಗಾಗಬಾರದು. ನಿಮ್ಮ ಐಕ್ಯ ಹೋರಾಟದಿಂದ ನೀವು ಆತ್ಮಹತ್ಯೆ ಮಾಡಿಕೊಳ್ಳುವಂತೆ ಸೃಷ್ಟಿಯಾಗತ್ತಿರುವ ಪರಿಸ್ಥಿತಿಯ ವಿರುದ್ಧ ಹೋರಾಡಲು ಮುಂದಾಗಿ. ನಾವು ನಿಮ್ಮೊಂದಿಗಿದ್ದೇವೆ. ‘ಆತ್ಮಹತ್ಯೆಯಲ್ಲ ದೃಢವಾದ ಐಕ್ಯ ಹೋರಾಟ’. ಆದರೆ ಎಸ್.ಎಂ.ಕೃಷ್ಣ ಅವರ ಸರ್ಕಾರದ ಪರವಾಗಿ ಸಂಕಷ್ಟದಲ್ಲಿರುವ ರೈತರಲ್ಲೇ ಧೈರ್ಯ ತುಂಬಬಹುದಲ್ಲ. ರೈತರ ಕುಟುಂಬ ಆತ್ಮಹತ್ಯೆಗೆ ಪರಿಹಾರಕ್ಕಿಂತ ಮೊದಲು ಅವ ಒಕ್ಕಲುತನ ಮಾಡುವಾಗ ಅನುಭವಿಸುವ ನಷ್ಟಕ್ಕೆ ಪರಿಹಾರ ಬೇಕಂತ ಅಪೇಕ್ಷಿಸುತ್ತಾನೆ. ರಾಜ್ಯ ಸರಕಾರ ಇದರ ಕುರಿತು ಚಿಂತಿಸಲಿ. ಪರಿಹಾರ ಒದಗಿಸಲಿ. ಕೃಷಿ ನೀತಿ ಬದಲಿಸಿಕೊಳ್ಳಲಿ. ರೈತ ಸಂಘ (ಎಐಕೆಎಸ್) ಇದಕ್ಕೆ ಪರಿಹಾರ ಸೂಚಿಸಿದೆ. ಸರ್ಕಾರ ಇದನ್ನು ಕೃತಿಯಲ್ಲಿ ತರಲಿ.


ತಮಿಳುನಾಡಿಗೆ ಹೊಸ ಮುಖ್ಯಮಂತ್ರಿ

ಜಯಲಲಿತಾ ಅವರ ನೇಮಕವನ್ನು ಸುಪ್ರೀಂ ಕೋರ್ಟ್ ರದ್ದು ಪಡಿಸಿದ ಹಿನ್ನೆಲೆಯಲ್ಲಿ ಪನ್ನೀರ್ ಸೆಲ್ವಂ ಅವರು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿದ್ದಾರೆ. ಇದಕ್ಕೂ ಮೊದಲು ಸುಪ್ರೀಂ ಕೋರ್ಟಿನ ತೀರ್ಪು ಬರುತ್ತಲೇ ಜಯಲಲಿತಾ ರಾಜಿನಾಮೆಸಲ್ಲಿಸಿದ್ದು, ಎಐಡಿಎಂಕೆ ಪಕ್ಷದ ಶಾಸಕರು ಪನ್ನೀರ್ ಸೆಲ್ವಂ ಅವರನ್ನು ನಾಯಕನನ್ನಾಗಿ ಆಯ್ಕೆಮಾಡಿದರು.



ಪ್ರಮಾಣ ವಚನದ ನಂತರ

ತಾನ್ಸಿ ಭೂಮಿ ವ್ಯವಹಾರದ ಕೇಸಿನಲ್ಲಿ ಜಯಲಲಿತಾ ಅವರಿಗೆ 3 ವರ್ಷದ ಶಿಕ್ಷೆಯಾಗಿತ್ತು. ಆ ತೀರ್ಪಿನ ವಿರುದ್ಧ ಮದ್ರಾಸ್ ಹೈಕೋರ್ಟಿನಲ್ಲಿ ಅಪೀಲನ್ನು ಸಲ್ಲಿಸಿದ್ದರು. ಈಗ ಅದು ವಿಚಾರಣೆಯ ಮತದಲ್ಲಿದೆ. ಜನ ಪ್ರತಿನಿಧಿಗಳ ಕಾಯಿದೆ (Refresentation of people act) ಅನ್ವಯ ಯಾವುದೇ ಕೇಸಿನಲ್ಲಿ ಎರಡುವರ್ಷಕ್ಕಿಂತಲೂ ಹೆಚ್ಚು ಸಮಯ ಶಿಕ್ಷೆಗೆ ಗುರಿಯಾದಲ್ಲಿ ಅವರು ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಆದರೆ ಈಗಾಗಲೇ ಶಾಸಕರಾಗಿದ್ದವರು, ಅವರಿಗೆ ಶಿಕ್ಷೆಯಾಗಿದ್ದರೂ ಅವರು ಚುನಾವಣೆಗೆ ಸ್ಪರ್ಧಿಸಬಹುದು. 5 ತಿಂಗಳ ಹಿಂದೆ ತಮಿಳುನಾಡು ಅಸೆಂಬ್ಲಿ ಚುನಾವಣೆಯಲ್ಲಿ 4 ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದ್ದರೂ, ಜಯಲಲಿತಾ ಅವರ ನಾಮಪತ್ರ ತಿರಸ್ಕಾರವಾಗಿತ್ತು. ಆದ್ದರಿಂದ ಶಾಸಕರಾಗಿ



ಮತ್ತೆ ಹಿಂತಿರುಗುವ ನಿರೀಕ್ಷೆಯಲ್ಲಿ

ಆಯ್ಕೆಯಾಗಲು ಸಾಧ್ಯವಾಗಲಿಲ್ಲ.

ಆದರೆ ತಮಿಳುನಾಡಿನ ಜನ, ಜಾತ್ಯಾತೀತ ಕೂಟದ ಬೆಂಬಲಿತ ಎಐಡಿಎಂಕೆ ಯನ್ನೇ ಅತ್ಯಧಿಕ ಬಹುಮತದಿಂದ ಆರಿಸಿತು. ಎಐಡಿಎಂಕೆ ಪಕ್ಷದ ಶಾಸಕರು ಜಯಲಲಿತಾ ಅವರನ್ನೇ ನಾಯಕರನ್ನಾಗಿ ಆಯ್ಕೆ ಮಾಡಿದರು. ಜಯಲಲಿತಾ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಕಾನೂನು ಪ್ರಕಾರ 6 ತಿಂಗಳೊಳಗಾಗಿ ಶಾಸಕಿಯಾಗಿ ಆಯ್ಕೆಯಾಗಿ ಬರಬೇಕಾಗಿತ್ತು.

ತನ್ನ ನಿರಪರಾಧಿತ್ವವನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಿ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಗಳಿಸುವುದಾಗಿ ಜಯಲಲಿತಾ ಹೇಳಿದ್ದಾರೆ. ಮದ್ರಾಸ್ ಹೈಕೋರ್ಟಿನಲ್ಲಿರುವ ತನ್ಸಿ ಭೂಮಿ ವ್ಯವಹಾರದ ಕೇಸನ್ನು ಕೂಡಲೇ ಇತ್ಯರ್ಥಗೊಳಿಸುವ ಅಗತ್ಯವಿದೆ.

ಬಿನ್‌ಲಾಡೆನ್ ಹಾಗೂ ಮತೀಯ ಮೂಲಭೂತವಾದಿಗಳ ಭಯೋತ್ಪಾದನೆಯ ಬಗ್ಗೆ ಕೂಗಾಡುತ್ತಲೇ ಈ ಖಾವಿ ಪಡೆ ಹುಬ್ಬಳ್ಳಿಯಲ್ಲಿ ಸಿಂಘಾಲ್ ಹುಟ್ಟುಹಬ್ಬವನ್ನು ನೆಪವಾಗಿಸಿ ಕೋಮುದ್ವೇಷದ ಕಿಚ್ಚು ಹಚ್ಚಿತು. ಭಯೋತ್ಪಾದನೆಯನ್ನು ನಿರ್ದಿಷ್ಟ ಧರ್ಮದವರೊಂದಿಗೆ ತಳಕು ಹಾಕುತ್ತಿರುವ ಅಮೇರಿಕಾದ ಈ ನೆಚ್ಚಿನ ಬಂಟರು ನಡೆಸಿದ ಹುಬ್ಬಳ್ಳಿ ಹಿಂಸಾಚಾರ ಯಾವ ಭಯೋತ್ಪಾದನೆಗಿಂತ ಹೇಗೆ ಭಿನ್ನ? 'ದೇಶಾದ್ಯಂತ ಕೋಮುದ್ವೇಷದ ಉನ್ಮಾದವನ್ನು ಮತ್ತೆ ಹುಟ್ಟು ಹಾಕುತ್ತಿರುವ ಸಂಘ ಪರಿವಾರ ಹುಬ್ಬಳ್ಳಿಯಲ್ಲಿ ನಡೆಸಿದ ಕುಕೃತ್ಯಗಳನ್ನು ಬಿಚ್ಚಿಟ್ಟ ವರದಿ


ಭಜರಂಗಿಗಳ ದಾಂಧಲೆ

ಹುಬ್ಬಳ್ಳಿಗೆ ನುಗ್ಗಿದ ಭಜರಂಗದಳ ಭಯೋತ್ಪಾದಕರು

ನಿತ್ಯಾನಂದಸ್ವಾಮಿ

ಭಯ ಭೀತಿ ಹುಟ್ಟಿಸುವವರು ಭಯೋತ್ಪಾದಕರು, ಮುಗ್ದ ಜನತೆಯ ನೆಮ್ಮದಿಯನ್ನು ಹಾಳುಮಾಡುವವರು ಭಯೋತ್ಪಾದಕರು, ಅಮೆರಿಕಾದ ವರ್ಲ್ಡ್ ಟ್ರೇಡ್ ಸೆಂಟರ್‌ನ ಗೋಪುರಗಳನ್ನು ಉರುಳಿಸಿದವರು ಭಯೋತ್ಪಾದಕರು, ಪಾಲೆಸ್ತೀನಿಯರಿಗೆ ಅವರ ನೆಮ್ಮದಿಯ ತಾಯ್ನಾಡನ್ನು ನಿರಾಕರಿಸುವವರು ಭಯೋತ್ಪಾದಕರು, ಬಾಬ್ರಿ ಮಸೀದಿಯ ಗೋಪುರಗಳನ್ನು ನೆಲಸಮಮಾಡಿದವರು ಭಯೋತ್ಪಾದಕರು, ಮುಂಬೈನಲ್ಲಿ ಸರಣೀ ಬಾಂಬ್ ಸ್ಫೋಟ ಮಾಡಿದವರು ಭಯೋತ್ಪಾದಕರು, ಹುಬ್ಬಳ್ಳಿಯ ಈದ್ಗಾವನ್ನು ಒಡೆದುಹಾಕಲು ಮೊನ್ನೆ ನಗರಕ್ಕೆ ನುಗ್ಗಿದವರು ಭಯೋತ್ಪಾದಕರು.

ಬಲಾಢ್ಯರಷ್ಟೇ ಬಲಹೀನರಲ್ಲಿ ಭೀತಿ ಹುಟ್ಟಿಸಲು ಸಾಧ್ಯ. ಶ್ರೀಮಂತರಷ್ಟೇ ಬಡವರಲ್ಲಿ ಭಯ ಹುಟ್ಟಿಸಲು ಸಾಧ್ಯ. ಬಹುಸಂಖ್ಯಾತರಷ್ಟೇ ಅಲ್ಪಸಂಖ್ಯಾತರನ್ನು ಬೆದರಿಸಲು ಸಾಧ್ಯ. ಸೆಪ್ಟೆಂಬರ್ 15 ರಂದು ಹುಬ್ಬಳ್ಳಿಯಲ್ಲಿ ಆಯೋಜಿಸಲಾಗಿದ್ದ ಹಿಂದೂ ತರುಣರ ರ್‍ಯಾಲಿಗೆ ಸ್ಥಳೀಯ ಅಲ್ಪಸಂಖ್ಯಾತ ಕೋಮಿನವರಲ್ಲಿ ಭೀತಿಯನ್ನು ಉಂಟುಮಾಡುವ ಉದ್ದೇಶವಾಗಿತ್ತೇ ಹೊರತು ಬೇರೆ ಯಾವ ಸದುದ್ದೇಶ ಇರಲಿಲ್ಲ.

ವಿಶ್ವ ಹಿಂದೂ ಪರಿಷತ್ತಿನ ವಿಶ್ವಮಟ್ಟದ ನಾಯಕರಾದ ಅಶೋಕ್ ಸಿಂಘಾಲರ 75ನೇ ಹುಟ್ಟುಹಬ್ಬವನ್ನು ಅಮೇರಿಕಾದ ಶ್ವೇತಭವನದಲ್ಲಿ ಆಚರಿಸುವಂತಿರಲಿಲ್ಲ, ಏಕೆಂದರೆ ಅದು ಅಷ್ಟೊಂದು ಸುರಕ್ಷಿತ ಸ್ಥಳವಲ್ಲ ಎಂದು ಅಷ್ಟರೊಳಗೆ ಸಾಬೀತಾಗಿತ್ತು. ಆದರೆ ಸಿಂಘಾಲರ ಶೋಭಾ ಯಾತ್ರೆಗಾಗಿ ಹುಬ್ಬಳ್ಳಿಯನ್ನೇ ಯಾಕೆ ಆಯ್ಕೆ ಮಾಡಿಕೊಳ್ಳಲಾಯಿತು? ಈದ್ಗಾ ಮೈದಾನದ ವಿವಾದದ ಹೆಸರಿನಲ್ಲಿ ಹುಬ್ಬಳ್ಳಿಯ ಜನತೆಯನ್ನು ಕಾಡಿದ್ದು ಸಾಲದೆಂದೆ? ಅಥವ ಕಳೆದ ನಾಲ್ಕು ವರ್ಷಗಳಿಂದ ಅಲ್ಲಿ ಕಾಪಾಡಿಕೊಂಡು ಬರಲಾದ ಶಾಂತಿ ಸದ್ಭಾವನೆ ಅತಿಯಾಯಿತು ಎಂದೆ. ಅತಿ ಸೂಕ್ಷ್ಮ ಸ್ಥಳವೆಂದು ಗುರುತಿಸಲಾದ ಹುಬ್ಬಳ್ಳಿಯಲ್ಲಿ ಇಂತಹ ಕಾರ್ಯಕ್ರಮಕ್ಕೆ ಅನುಮತಿ ನೀಡಿದ್ದೇ ಪ್ರಶ್ನಾರ್ಹವಾಗಿದೆ.

ಆಕ್ರಮಣಕಾರಿ ರ್‍ಯಾಲಿ

ಅಂದು ನಗರದ ನಾಲ್ಕೂ ಮೂಲೆಗಳಿಂದ ಜನಜಂಗುಳಿ ನುಗ್ಗಿಬಂದದ್ದು ಹುಬ್ಬಳ್ಳಿಯಲ್ಲಿ ಶಾಂತಿಯಿಂದ ಬದುಕಬಯಸುತ್ತಿರುವವರ ಮೇಲೆ ನಡೆಸಲಾದ ಆಕ್ರಮಣ. ಐವತ್ತು ಸಾವಿರದಷ್ಟಿದ್ದ ಅನಿಯಂತ್ರಿತ ಜನಜಂಗುಳಿ ಒಂದು ನಗರವನ್ನು ಈ ರೀತಿ ನುಗ್ಗುವಾಗ ಅಲ್ಲೋಲಕಲ್ಲೋಲವಾಗದಿರಲು ಸಾಧ್ಯವೆ? ಇಂದಿರಾ ಗಾಜಿನಮನೆಯಿಂದ ಮೆರವಣಿಗೆಯಲ್ಲಿ ಪಾಲ್ಗೊಂಡ ವಿಎಚ್‌ಪಿ, ಭಜರಂಗದಳದ ಜನ ದಾರಿಯುದ್ದಕ್ಕೂ ಮುಸಲ್ಮಾನರ ವಿರುದ್ಧ ಘೋಷಣೆ ಕೂಗುತ್ತಿದ್ದರು. ಮುಸಲ್ಮಾನರ ಅಂಗಡಿಗಳಿಗೆ, ಕಚೇರಿಗಳಿಗೆ ಕಲ್ಲು ತೂರುತ್ತಿದ್ದರು. ಮೆರವಣಿಗೆಯು ಕಿತ್ತೂರು ಚೆನ್ನಮ್ಮ ವೃತ್ತಕ್ಕೆ ಬರುತ್ತಿದ್ದಂತೆ ಮೆರವಣಿಗೆಕಾರರು ನಿಗದಿತ ದಾರಿಯನ್ನು ಬಿಟ್ಟು ಈದ್ಗಾ ಮೈದಾನ ನುಗ್ಗಲು ಯತ್ನಿಸಿದರು. ಈದ್ಗಾ ಕಟ್ಟಡವನ್ನು ಧ್ವಂಸ ಮಾಡುವ ಪ್ರಯತ್ನದ ಸುದ್ದಿ ಕಾಳ್ಗಿಚ್ಚಿನಂತೆ ಹರಡುತ್ತಿದ್ದಂತೆ ಇಡೀ ನಗರವೇ ಒಂದು ರಣರಂಗವಾಯಿತು. ಅಶೋಕ್ ಸಿಂಘಾಲ್‌ರು ನೆಹರು ಮೈದಾನದಲ್ಲಿ ಸನ್ಮಾನ ಮಾಡಿಸಿಕೊಳ್ಳುವುದರಲ್ಲಿ ಮೈಮರೆತಿದ್ದಾಗ ಅಕ್ಕ ಪಕ್ಕದ ರಸ್ತೆಗಳಲ್ಲಿ ಎರಡೂ ಕೋಮಿನ ಯುವಕರ ಬೀದಿ ಕಾಳಗ, ದೊಂಬಿ, ಲೂಟಿ, ನಿರಾತಂಕವಾಗಿ ನಡೆದವು. ಮಹಾನಗರ ಸಭೆಯ ಕಚೇರಿಯ ಎದುರುಗಡೆ ಇರುವ ದರ್ಗಾವನ್ನು ಕೆಡವಿ ಹಾಕುವ ಪ್ರಯತ್ನ ನಡೆಯಿತು. ಗಣೇಶ್ ಪೇಟೆಯಲ್ಲಿನ ಹನುಮಂತ ದೇವರ ಗುಡಿ ಹೊಕ್ಕು ದಾಂಧಲೆ ನಡೆಸಲಾಯಿತು.

ರಕ್ತ ಹರಿಯಿತು. ಉದ್ರಿಕ್ತ ಜನರನ್ನು ನಿಯಂತ್ರಿಸಲು ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಜನಕ್ಕೆ ಬರದಿದ್ದಾಗ ಪೋಲೀಸರು ನಗರದ ವಿವಿಧೆಡೆ ಸುಮಾರು 50 ಸುತ್ತು ಗೋಲಿಬಾರ್ ಮಾಡಿದರು. ಕೊಪ್ಪಿಕರ್ ರಸ್ತೆಯಲ್ಲಿ ಪೊಲೀಸರು ಹಾರಿಸಿದ ಗುಂಡು ತಗಲಿ ತೀವ್ರ ಗಾಯಗೊಂಡ ಬೆಳಗಾವಿಯ ಒಬ್ಬ ಭಜರಂಗದಳದ ಕಾರ್ಯಕರ್ತ ನಂತರ ಆಸ್ಪತ್ರೆಯಲ್ಲಿ ಮೃತಪಟ್ಟ. ಗುಂಡಿನೇಟು ತಗುಲಿ ನೂರಾರು ಜನ ಗಾಯಗೊಂಡಿದ್ದಾರೆ. ಕಲ್ಲಿನೇಟಿನಿಂದ ಅನೇಕ ಜನ ಪೊಲೀಸರೂ ತೀವ್ರ ಗಾಯಗೊಂಡಿದ್ದಾರೆ. ಅಂದು ರಾತ್ರಿಯೆಲ್ಲಾ ಗಲಭೆ ನಿಯಂತ್ರಣಕ್ಕೆ ಬಾರದೆ ನಗರದ ವಿವಿಧ ಬಡಾವಣೆಗಳಿಗೆ ಹಬ್ಬಿತು. ಜನ್ನತ ನಗರದಲ್ಲಿ ಯುವಕನೊಬ್ಬ ಅಪರಿಚಿತರ ಚೂರಿ ಇರಿತಕ್ಕೆ ಬಲಿಯಾಗಿದ್ದಾನೆ.


ವಿಶ್ವನಾಯಕನ ಹುಟ್ಟುಹಬ್ಬಕ್ಕೆ ನೀಡಿದ ಸೂಕ್ತ (?) ಸ್ಮರಣ ಫಲಕ

ಹತ್ತಾರು ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿದೆ. ಕೆಲವು ಅಂಗಡಿಗಳನ್ನು ಸಂಪೂರ್ಣವಾಗಿ ಲೂಟಿ ಮಾಡಲಾಗಿದೆ. ಹದಿನೈದು ಸರ್ಕಾರಿ ಬಸ್ಸುಗಳು ಜಖಂಗೊಂಡಿವೆ. ಹಲವಾರು ಖಾಸಗಿ ವಾಹನಗಳು ಬೆಂಕಿಗೆ ಆಹುತಿಯಾಗಿವೆ. ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ಶಾಲೆಕಾಲೇಜುಗಳನ್ನು ಮುಚ್ಚಲಾಗಿದೆ. ವ್ಯಾಪಾರವಹಿವಾಟು ಸ್ಥಗಿತಗೊಂಡಿದೆ. ಕೂಲಿನಾಲಿ ಮಾಡಿ ಬದುಕುತ್ತಿದ್ದ ನಗರದ ಹಾಗೂ ನಗರದ ಸುತ್ತ ಮುತ್ತಲಿನ ಗ್ರಾಮಗಳ ಜನ ಉಪವಾಸ ವನವಾಸ ಅನುಭವಿಸುತ್ತಿದ್ದಾರೆ. ಇಡೀ ನಗರವೇ ಕರ್ಫ್ಯೂ ಕರಿ ನೆರಳಿನಲ್ಲಿ ನರಳುವಂತಾಗಿದೆ.

ದಾಳಿ ಎದುರಿಸಲು ಸಿದ್ಧತೆ

ಹುಬ್ಬಳ್ಳಿಯ ಅಲ್ಪಸಂಖ್ಯಾತ ಕೋಮಿನವರು ಈ ಸಲದ ದಾಳಿಯನ್ನು ಎದುರಿಸಲು ಸಜ್ಜಾಗಿದ್ದರು ಎಂಬಂತೆ ಕಾಣುತ್ತದೆ. ಇಷ್ಟೊಂದು ಜನಜಂಗುಳಿಯನ್ನು ನಗರದೊಳಗೆ ನುಗ್ಗಿಸುವ ದುರುದ್ದೇಶವನ್ನು ಅವರು ಮೊದಲೇ ಮನಗಂಡಂತಿದ್ದರು. ಮತಾಂಧ ಶಕ್ತಿಗಳು ಪರಸ್ಪರ ಇಂತಹ ಪೈಪೋಟಿಯಲ್ಲೇ ಬಲಗೊಳ್ಳುವುದು. ಹುಬ್ಬಳ್ಳಿಯ ಅಲ್ಪಸಂಖ್ಯಾತರು ಹೆಚ್ಚಾಗಿ ಬಡವರು. ಪ್ರತಿದಿನ ಕೂಲಿ ಕೆಲಸ ಮಾಡಿಕೊಂಡೇ ಬದುಕುವವರು. ನಗರವನ್ನು ಮೇಲಿಂದ ಮೇಲೆ ಕೋಮು ಗಲಭೆಗಳಿಗೆ ಒಳಪಡಿಸುವುದನ್ನು ಅವರು ಬೆಂಬಲಿಸಲಾರರು. ನಗರದಲ್ಲಿ ಶಾಂತಿ ಬಯಸುವ ಜಾತ್ಯಾತೀತವಾದಿ ಶಕ್ತಿಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡು ಧೈರ್ಯದಿಂದ ಮುನ್ನಡೆಯುವುದರಲ್ಲಿ ಮಾತ್ರ ಅವರ ಹಿತ ಅಡಗಿದೆ.

○

ಹುಬ್ಬಳ್ಳಿಯ ಅವನತಿಗೆ ನಾಂದಿ

ಕೇಂದ್ರದ ಬಿಜೆಪಿ ಸರ್ಕಾರದ ಧೋರಣೆಗಳಿಂದಾಗಿ ಹುಬ್ಬಳ್ಳಿ ನಗರಕ್ಕೆ ಈಗಾಗಲೇ ಸಾಕಷ್ಟು ಹಾನಿಯಾಗಿವೆ. ಇಲ್ಲಿನ ಕೈಗಾರಿಕೆಗಳು ಮುಚ್ಚಿಹೋಗಿವೆ. ಇಲ್ಲಿನ ವ್ಯಾಪಾರ ವಹಿವಾಟು ಕುಸಿದಿದೆ. ಮೇಲಿಂದ ಮೇಲೆ ತಲೆದೋರುತ್ತಿರುವ ಗಲಭೆಗಳಿಂದಾಗಿ ಹುಬ್ಬಳ್ಳಿ ನಗರದ ಅವನತಿ ಸಮೀಪಿಸುತ್ತಿದ್ದಂತಿದೆ. ಚಿನ್ನ ಬೆಳ್ಳಿ ಹಾಗೂ ಬಟ್ಟೆ ವ್ಯಾಪಾರ ಬಹುತೇಕವಾಗಿ ಇತರ ಕಡೆಗಳಿಗೆ ಹೊರಟುಹೋಗಿದೆ. ಸಗಟು ವ್ಯಾಪಾರಸ್ಥರು, ವಿತರಕರು ಹುಬ್ಬಳ್ಳಿಯ ಮೇಲಿನ ಆಸೆ ಬಿಟ್ಟು ಬೇರೆ ಕಡೆಗೆ ತಮ್ಮ ಚಟುವಟಿಕೆಗಳನ್ನು ತಿರುಗಿಸಿಕೊಂಡಿದ್ದಾರೆ.

ಸಿಂಘಾಲ್‌ರು ಸನ್ಮಾನದಲ್ಲಿ ನೀಡಲಾದ 75 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡುಹೋಗಿದ್ದಾರೆ. ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಹುಬ್ಬಳ್ಳಿಯಲ್ಲಿ ಮಾಡಿದಂತೆ ಜನತೆಯ ನೆಮ್ಮದಿಗೆ ಬೆಂಕಿಹಚ್ಚಲು ಬಳಸಲಾಗುತ್ತಿದೆ ಎಂಬುದು ಅತ್ಯಂತ ಆತಂಕದ ವಿಷಯ. ಹುಬ್ಬಳ್ಳಿ ವ್ಯಾಪಾರಸ್ಥರು ಉದಾರ ದೇಣಿಗೆ ನೀಡಿ ಲಕ್ಷಗಟ್ಟಲೆ ಕಳೆದುಕೊಂಡರೆ ಈಗ ವ್ಯಾಪಾರ ವಹಿವಾಟು ನಿಂತು ಹೋಗಿ ಕಳೆದುಕೊಳ್ಳುತ್ತಿರುವುದು ಕೋಟಿಗಟ್ಟಲೆ. ಅವರು ಪಾಠ ಕಲಿಯಬೇಕು. ಗಲಭೆಕೋರ ಶಕ್ತಿಗಳಿಗೆ ಹಣ ನೀಡುವುದೆಂದರೆ ತಮ್ಮ ಮನೆಗೆ ತಾವೇ ಬೆಂಕಿ ಇಡುವುದು ಎಂದು ಇವರುಗಳು ಎಷ್ಟು ಬೇಗ ತಿಳಿದುಕೊಳ್ಳುತ್ತಾರೋ ಅಷ್ಟು ಹೆಚ್ಚು ಅವರಿಗೆ ಒಳ್ಳೆಯದು.


ಹತ್ತಿ ಉರಿದ ಹುಬ್ಬಳ್ಳಿ



ಭಯೋತ್ಪಾದನೆ: ಬಿತ್ತಿದ್ದನ್ನೇ ಬೆ

ಸೆಪ್ಟೆಂಬರ್ 11 ಕರಾಳ ಮಂಗಳವಾರ. ಕೇವಲ ಹತ್ತಿಪ್ಪತ್ತು ಭಯೋತ್ಪಾದಕರು ನಾಗರಿಕ ವಿಮಾನಗಳನ್ನು ಅಪಹರಿಸಿ ನ್ಯೂಯಾರ್ಕ್‌ನ ವಿಶ್ವವಿಖ್ಯಾತ ಜೋಡಿ ಸೌಧಗಳಿರುವ 'ವರ್ಲ್ಡ್ ಟ್ರೇಡ್ ಸೆಂಟರ್' ಮತ್ತು ಮಿಲಿಟರಿ ಕೇಂದ್ರ ಪೆಂಟಗನ್ ಮೇಲೆ ವಿಧ್ವಂಸಕ ದಾಳಿ ನಡೆಸಿದರು. ಇನ್ನೊಂದು ವಿಮಾನ ಮತ್ತೊಂದು ಪ್ರಮುಖ ಗುರಿ (ಅಧ್ಯಕ್ಷರ ಶ್ವೇತಭವನ ಎಂಬ ಗುಮಾನಿ ಇದೆ) ತಲುಪಲಾರದೆ ನೆಲಕಪ್ಪಳಿಸಿತು. ಈ ಬರ್ಬರ ಭಯೋತ್ಪದಕ ಕೃತ್ಯ ಅಮೆರಿಕಾ ಮತ್ತು ಇಡೀ ಜಗತ್ತಿನ ಜನತೆಯನ್ನು ದಂಗುಬಡಿಸಿದೆ. ಅಮೆರಿಕಾದ ಅದ್ಯಕ್ಷ ಬುಶ್ ಸರ್ಕಾರದ ಪ್ರಕಾರ ಒಸಾಮಾ ಬಿನ್ ಲಾಡೆನರ ಅಲ್-ಕಾಯಿದಾ ಭಯೋತ್ಪಾದಕ ಗುಂಪು ಈ ಕೃತ್ಯ ಎಸಗಿದೆ. ಅಧ್ಯಕ್ಷ ಬುಶ್ ಬಿನ್ ಲಾಡೆನ್‌ರು ಅಡಗಿರುವ ಅಫಘಾನಿಸ್ತಾನದ ಮೇಲೆ ಮತ್ತು ಅವರ ಅಲ್-ಕಾಯಿದಾ ಜಾಲ ನಾಶ ಮಾಡುವವರೆಗೆ ದೀರ್ಘ ಯುದ್ಧವನ್ನು ಘೋಷಿಸಿದ್ದಾರೆ. ಈ ಕರಾಳ ಘಟನೆ ಜಗತ್ತಿನ ಗತಿಯನ್ನು ನಕಾರಾತ್ಮಕವಾಗಿ ಬದಲಾಯಿಸುವ ಸೂಚನೆ ಇದೆ. ಜಾಗತೀಕರಣದ ವಿರುದ್ಧ ವಿಶ್ವಾದ್ಯಂತ ಪ್ರತಿಭಟನೆಗಳು ಮತ್ತು ತೀವ್ರ ಆರ್ಥಿಕ ಕುಸಿತದಿಂದ ತತ್ತರಿಸುತ್ತಿದ್ದ ಅಮೇರಿಕೆ ಆಳುವ ವರ್ಗ ಈ ಅವಕಾಶವನ್ನು ಬಳಸಿ ತನ್ನ ಬೇಳೆ ಬೇಯಿಸಿಕೊಳ್ಳುವ ಸೂಚನೆಗಳಿವೆ. 'ಭಯೋತ್ಪಾದನೆಯ ವಿರುದ್ಧ ಯುದ್ಧದ ಹೆಸರಲ್ಲಿ ಅಮೇರಿಕ ಸೇರಿದಂತೆ ಎಲ್ಲಾ ದೇಶಗಳ ಜನರ ಶಾಂತಿ, ಮಾನವ ಹಕ್ಕುಗಳು, ಜೀವನ ಮಟ್ಟದ ಮೇಲೆ ದಾಳಿಯ ಹುನ್ನಾರ ನಡೆದಿದೆ. ಇದನ್ನು ವಿಫಲಗೊಳಿಸಲುಈ ಘಟನಾವಳಿಯ ಸರಿಯಾದ ವಿಶ್ಲೇಷಣೆ ಅಗತ್ಯ.

ಭಯೋತ್ಪಾದಕರನ್ನು

ನ್ಯೂಯಾರ್ಕ್‌ನ ವರ್ಲ್ಡ್ ಟ್ರೇಡ್ ಸೆಂಟರ್‌ನ ಜೋಡಿ ಸೌಧಗಳು, ಮಿಲಿಟರಿ ಮುಖ್ಯಾಲಯ ಪೆಂಟಗನ್ ಮೇಲೆ ಮೂರು ನಾಗರಿಕ ವಿಮಾನಗಳನ್ನು ಅಪಹರಿಸಿ ದಾಳಿ ನಡೆಸಿದ್ದು ಅತ್ಯಂತ ಬರ್ಬರ ಭಯೋತ್ಪಾದಕ ಕೃತ್ಯ. ಸುಮಾರು ಆರು ಸಾವಿರಕ್ಕೂ ಹೆಚ್ಚು ನಾಗರಿಕರ ಸಾವು, ಶತಕೋಟ್ಯಾಂತರ ಡಾಲರುಗಳ ನಷ್ಟವಾಗಿದೆ. ಸತ್ತವರಲ್ಲಿ , ನಷ್ಟಕ್ಕೆ ಒಳಗಾದವರು ಅಮೇರಿಕನ್ನರು ಮಾತ್ರವಲ್ಲ. ಭಾರತ ಸೇರಿದಂತೆ ಹಲವು ದೇಶಗಳು ಪ್ರತ್ಯಕ್ಷ, ಪರೋಕ್ಷ ನಷ್ಟ ಅನುಭವಿಸಿದೆ. ಭಾರತ ಮೂಲದವರು, ಭಾರತೀಯರು ಸೇರಿದಂತೆ ಸುಮಾರು 250 ಜನ ಸತ್ತಿರುವ ಗುಮಾನಿಯಿದೆ. ಇಂತಹ ಭಯೋತ್ಪಾದನೆಯ ಕೃತ್ಯ ಬೇರೆಡೆಯೂ ಪುನರಾವರ್ತನೆಯಾಗಬಹುದು ಎಂಬ ಭೀತಿ ಗಗನಚುಂಬಿ ಕಟ್ಟಗಳನ್ನು ಹೊಂದಿರುವ ಎಲ್ಲಾ ನಗರ ಗಳಲ್ಲಿ ವ್ಯಾಪಿಸಿದೆ. ನ್ಯೂಯಾರ್ಕಿನ ಮಾತ್ರವಲ್ಲ, ಎಲ್ಲಾ ಅಮೇರಿಕದ ಜನರ ನೆಮ್ಮದಿ, ಭದ್ರತೆಯ ಭಾವನೆಗೆ ಈ ಬರ್ಬರ ಕೃತ್ಯ ಬಲವಾದ ಏಟು ಕೊಟ್ಟಿದೆ. ಅಮೇರಿಕಾದ ಆಳುವ ವರ್ಗಗಳನ್ನು ನಡುಗಿಸಿದೆ.

ಇಂತಹ ಭಯೋತ್ಪಾದಕ ಕೃತ್ಯವನ್ನು ದೀರ್ಘ ಕಾಲದಿಂದ ಯೋಜಿಸಲಾಗಿತ್ತು. ಭಯೋತ್ಪಾದಕರು ಅಮೆರಿಕಾದ ನಾಗರಿಕರೇ ಆಗಿದ್ದು, ಇದಕ್ಕಾಗಿ ವಿಮಾನಯಾನ ತರಬೇತಿ ಪಡೆದಿದ್ದರು. ನಾಲ್ಕು ವಿಮಾನಗಳನ್ನು ಅತ್ಯಂತ ಸಂಯೋಜಿತ ರೀತಿಯಲ್ಲಿ ಅಪಹರಿಸಿ, ಭಯೋತ್ಪಾದಕರು ತಮ್ಮ ಗುರಿ ಮುಟ್ಟುವಲ್ಲಿ ಸಫಲರಾದರು. ಅಮೇರಿಕಾದ ಅತ್ಯಂತ ಸುಸಜ್ಜಿತ ಸಂಘಟನ ಆಂತರಿಕ ಭದ್ರತಾ ವ್ಯವಸ್ಥೆ, ಮಿಲಿಟರಿ ವ್ಯವಸ್ಥೆ, ಗೂಢಾಚಾರ ವ್ಯವಸ್ಥೆ - ಇವೆಲ್ಲವುಗಳಿಗೆ ಈ ಭೀಕರ ಭಯೋತ್ಪಾದಕ ಕೃತ್ಯದ ಯಾವುದೇ ಮುನ್ಸೂಚನೆ ಸಿಗದೆಹೋಯಿತು. ಮೊದಲನೆಯ ವಿಮಾನ ವರ್ಲ್ಡ್ ಟ್ರೇಡ್ ಸೆಂಟರ್‌ನ ಮೊದಲ ಸೌಧಕ್ಕೆ ಡಿಕ್ಕಿ ಹೊಡೆದು ಅರ್ಧಗಂಟೆಗೂ ಹೆಚ್ಚು ಕಾಲದ ನಂತರ ಎರಡನೇ ಸೌಧ ಮತ್ತು ಪೆಂಟಗಾನ್ ಮೇಲಿನ ನಡೆದ ದಾಳಿಯನ್ನು ತಡೆಯುವುದು ಸಾಧ್ಯವಾಗಲಿಲ್ಲ. ಪ್ರಾಥಮಿಕ ವಿಮಾನ ಅಪಹರಣ ನಿರೋಧ ಕ್ರಮಗಳನ್ನು ಜಾರಿ ಮಾಡಲು ಸಾಧ್ಯವಾಗಲಿಲ್ಲ. ಬೇರೆ ಯಾವುದೇ ದೇಶದಲ್ಲಿ ಇದಕ್ಕೆ ಜವಾಬ್ದಾರ ರಾದವರು ರಾಜೀನಾಮೆ ಕೊಡಬೇಕಾಗಿ ಬರುತ್ತಿತ್ತು.

ನ್ಯೂಯಾರ್ಕ್‌ನ ಮ್ಯಾನ್‌ಹಟನ್ ಪ್ರದೇಶದ ಜನಜೀವನವನ್ನು, ದೇಶದಾದ್ಯಂತ ವಿಮಾನ ಯಾನವನ್ನು ಸ್ತಬ್ಧಗೊಳಿಸಿದ ಈ ಭೀಕರ ಕೃತ್ಯ ನ್ಯೂಯಾರ್ಕ್ ಶೇರು ಮಾರುಕಟ್ಟೆಯನ್ನು 1930ರ ದಶಕದ ಮಹಾನ್ ಕುಸಿತದ ನಂತರ ಮೊದಲ ಬಾರಿಗೆ ಮುಚ್ಚುವಂತೆ ಮಾಡಿತು. ವರ್ಲ್ಡ್ ಟ್ರೇಡ್ ಸೆಂಟರ್‌ನ ಹತ್ತಿರದ ಇನ್ನೆರಡು ಕಟ್ಟಡಗಳೂ ಆ ಮೇಲೆ ಉರುಳಿದವು. ಇನ್ನೂ ಈ ಕಟ್ಟಡಗಳ ಭಗ್ನಾವಶೇಷಗಳ ಅಡಿಯಲ್ಲಿ ಬದುಕಿ ಉಳಿದವರಿಗಾಗಿ ಶೋಧ ಹಗಲುರಾತ್ರಿ ನಡೆಯುತ್ತಿದೆ. ಆದರೆ ಇನ್ನೂ ಬದುಕಿ ಉಳಿದಿರುವ ಸಾಧ್ಯತೆ ಬಹಳಕಡಿಮೆ. ಸುಮಾರು 400ಕ್ಕೂ ಹೆಚ್ಚು ಜಗದ್ವಿಖ್ಯಾತ ಕಂಪನಿಗಳ ಮುಖ್ಯ ಕಚೇರಿ ಹೊಂದಿರುವ 50 ಸಾವಿರ ಜನ ಕೆಲಸ ಮಾಡುವ, ಒಂದು ಲಕ್ಷಜನ ಪ್ರತಿದಿನ ಭೇಟಿ ನೀಡುವ ವರ್ಲ್ಡ್ ಟ್ರೇಡ್ ಸೆಂಟರ್ ಅಮೇರಿಕಾದ ಆರ್ಥಿಕ ಚಳುವಟಿಕೆ, ವಾಣಿಜ್ಯದ ಕೇಂದ್ರವಾಗಿತ್ತು. ಇದರಿಂದ ಸ್ವಾಭಾವಿಕವಾಗಿಯೇ ಈಗಾಗಲೇ ಬಿಕ್ಕಟ್ಟಿಗೆ ಸಿಕ್ಕಿಬಿದ್ದ ಅಮೇರಿಕಾದ ಆರ್ಥಿಕ, ವಾಣಿಜ್ಯ ಚಟುವಟಿಕೆಗಳಿಗೆ ತೀವ್ರ ಹೊಡೆತಬಿದ್ದಿದೆ.

ಇಂತಹ ಖಂಡನೀಯ ಅಮಾನವೀಯ ಕೃತ್ಯವನ್ನು ಇಡೀ ಜಗತ್ತಿಗೆ ಜಗತ್ತೇ ಏಕಕಂಠದಿಂದ ಖಂಡಿಸಿದೆ. ಇರಾಕ್, ಒಂದು ಪ್ಯಾಲೆಸ್ಟೈನ್ ಸಂಘಟನೆ ಮತ್ತು ಅಫಘಾನಿಸ್ತಾನದ ತಾಲಿಬಾನ್ ಸರ್ಕಾರ ಮಾತ್ರ ಇದಕ್ಕೆ ಅಪವಾದ. ಇದನ್ನು ಎಸಗಿದವರು ಯಾರು? ಅವರ ಉದ್ದೇಶ ಏನು? ಎಂಬುದು ನಿಗೂಢವಾಗಿ ಉಳಿದಿದೆ. ಪ್ರಾಥಮಿಕ ತನಿಖೆ ವರದಿಗಳ ಪ್ರಕಾರ ಅಪಹರಣಕಾರರು ಹಲವು ಅರಬ್ ದೇಶಗಳ ಮೂಲದವರು ಎನ್ನಲಾಗಿದೆ. ಅಮೆರಿಕದ ಸರ್ಕಾರ ಇದು ಒಸಮಾ ಬಿನ್ ಲಾಡೆನ್ ರ ಅಲ್-ಕಾಯಿದಾ ಎನ್ನುವ ಭಯೋತ್ಪಾದಕ ಗುಂಪಿನ ಕೃತ್ಯ ಎಂದು ಹೇಳಿದೆ. ಇದಕ್ಕೆ ಯಾವುದೇ ಪುರಾವೆಯನ್ನು ಒದಗಿಸಿಲ್ಲ. ಇಂತಹ ಸುಸಂಘಟಿತ ಕೃತ್ಯ, ತಾಂತ್ರಿಕ ಪರಿಣತಿ, ಸಂಘಟನೆ ಉದ್ದೇಶ ಇರುವುದು ಅಲ್-ಕಾಯಿದಾಗೆ ಮಾತ್ರ ಎನ್ನುವುದಷ್ಟೇ ಈ ಆಪಾದನೆಗೆ ಆಧಾರ. ಅಮೆರಿಕದ ಸರ್ಕಾರದ ಪ್ರತಿಷ್ಠೆ, ಉದ್ಧಟತನಕ್ಕೆ ಮತ್ತು ಆರ್ಥಿಕ-ಮಿಲಿಟರಿ-ಭದ್ರತಾ ವ್ಯವಸ್ಥೆಯ ಅಜೇಯ ಭಾವನೆಗೆ ಬಲವಾದ ಏಟು ಕೊಡುವುದು ಭಯೋತ್ಪಾದಕರ ಉದ್ದೇಶವಾಗಿತ್ತು ಎನ್ನುವುದು ಮಾತ್ರ ಸ್ಪಷ್ಟ. ಪೆಂಟಗಾನ್ ಮತ್ತು ವರ್ಲ್ಡ್ ಟ್ರೇಡ್ ಸೆಂಟರ್‌ಗಳನ್ನು ಗುರಿಯಾಗಿ ಆಯ್ದುಕೊಂಡಿರುವುದು ಇದರಿಂದಾಗಿಯೇ. ಅಮೆರಿಕದ ಸರ್ಕಾರವನ್ನು ಆಳವಾಗಿ ದ್ವೇಷಿಸುವವರಿಂದ ಮತ್ತು ಭಯಂಕರ ಅಸಹಾಯಕ ಸೇಡಿನ ಭಾವನೆ ಯಿಂದ ಬೆಂದು ಹೋಗುತ್ತಿರು ವುದರಿಂದ ಮಾತ್ರ ಸಾಧ್ಯ ಈ ಭೀಕರ ಕೃತ್ಯ. ಆದರೆ ಈ ಕೃತ್ಯದಿಂದ ಸಾಯುವವರು, ಕಷ್ಟಕ್ಕೊಳಗಾಗುವವರು ಮುಗ್ಧ ಸಾಮಾನ್ಯ ಜನ. ಈ ಭಯೋತ್ಪಾದಕ ಕೃತ್ಯ ಅದರ ಗುರಿಯಾದ ಅಮೆರಿಕದ ಸರ್ಕಾರವನ್ನು ಇನ್ನಷ್ಟು ಬಲಪಡಿಸಿದೆ ಎನ್ನುವುದೇ ಅತ್ಯಂತ ದೊಡ್ಡ ವಿಪರ್ಯಾಸ.

ಶೀತಲ ಸಮರದ ಕೂಸು-'ಜೆಹಾದ್'

70 ರ ದಶಕದಲ್ಲೇ ಸಿಐಎ ಸೋವಿಯತ್ ಒಕ್ಕೂಟದ ಬಲವನ್ನು ಆಂತರಿಕ ಸಮಸ್ಯೆಗಳಿಂದ ಮುರಿಯುವ ಪಿತೂರಿಯ ಅಂಗವಾಗಿ ಮಧ್ಯ ಏಶ್ಯಾದ ಗಣರಾಜ್ಯಗಳಲ್ಲಿ (ತರ್ಜುಕಿಸ್ತಾನ, ತುರ್ಕೆಯಾನಿಸ್ತಾನ ಇತ್ಯಾದಿ) ಇಸ್ಲಾಮಿಕ್ ಮೂಲಭೂತವಾದದ ಆಧಾರದ ಮೇಲೆ ಸಣ್ಣ ಗುಂಪುಗಳಿಗೆ ಬೆಂಬಲ ಆರಂಭಿಸಿತ್ತು. ಇಂತಹುದೇ ಗುಂಪುಗಳು ಅಫಘಾನಿಸ್ತಾನದಲ್ಲೂ ಇದ್ದವು. ಇಂತಹ ಹಲವು ಗುಂಪುಗಳನ್ನು ಸಿಐಎ ಸ್ವತಃ ಆರಂಭಿಸಿತ್ತು. 1978 ರಲ್ಲಿ ಅಫಘಾನಿಸ್ತಾನದಲ್ಲಿ ಬಂದ ಪ್ರಗತಿಪರ - ಎಡ ಒಲವಿನ ಸರ್ಕಾರದ ವಿರುದ್ಧ ಇಂತಹ



ಒಸಾಮ ಬಿನ್ ಲಾಡೆನ್ ಯಾರೀತ?

ಒಸಾಮಾ ಬಿನ್ ಲಾಡೆನ್ ಸೌದಿ ಅರೇಬಿಯಾದ ಭಾರಿ ದೊಡ್ಡ ಸಿವಿಲ್ ಕಂಟ್ರಾಕ್ಟರುಗಳ ಶ್ರೀಮಂತ ಕುಟುಂಬದವನು. 1979 ರಲ್ಲಿ ಸಿವಿಲ್ ಇಂಜಿನಿಯರ್ ಆದ ಲಾಡೆನ್ ಅದೇ ಸಮಯದಲ್ಲಿ ಅಫಘಾನಿಸ್ತಾನದಲ್ಲಿ ಸೋವಿಯತ್ ಬೆಂಬಲವಿದ್ದ ಪ್ರಗತಿಪರ ಜಾತ್ಯಾತೀತ ಸರ್ಕಾರದ ವಿರುದ್ಧ ಮೂಲಭೂತವಾದಿ ಮುಸ್ಲಿಮ್ ಗೆರಿಲ್ಲಾ ಗುಂಪುಗಳ ಸಶಸ್ತ್ರ ಕಾರ್ಯಾಚರಣೆ ಆರಂಭವಾಗಿತ್ತು. ಈ ಗುಂಪುಗಳಿಗೆ ಪಾಕಿಸ್ತಾನ ಮತ್ತು ಅಮೆರಿಕ ಸಕ್ರಿಯ ಬೆಂಬಲ ಕೊಡುತ್ತಿತ್ತು. ಲಾಡೆನ್ ಈ 'ಮುಜಾಹಿದಿನ್' ಗುಂಪುಗಳಿಗೆ ಆರ್ಥಿಕ ಬೆಂಬಲ, ಆಹಾರ-ಇತರ ಸಾಮಗ್ರಿಗಳ ಪೂರೈಕೆ, ಗೆರಿಲ್ಲಾಗಳ ಕುಟುಂಬಗಳನ್ನು ನೋಡಿಕೊಳ್ಳುವ 'ಮಾನವೀಯ' ಸಹಾಯಗಳಿಂದ ಕೆಲಸ ಆರಂಭಿಸಿದ. ಆಮೇಲೆ ಸೋವಿಯತ್ ಬೆಂಬಲಿತ-ಅಫಘಾನಿಸ್ತಾನ ಸರ್ಕಾರದ ವಿರುದ್ಧದ ಗೆರಿಲ್ಲಾ ಯುದ್ಧದಲ್ಲಿ ಗೆರಿಲ್ಲಾ ಕಮಾಂಡರ್ ಆದ ಎನ್ನಲಾಗಿದೆ. ಆದರೆ ಲಾಡೆನ್‌ನ ಪ್ರಾಮುಖ್ಯತೆ ಇದ್ದದ್ದು ಆತನ ಮಿಲಿಟರಿ ಸಾಮರ್ಥ್ಯಕ್ಕಿಂತ ಹೆಚ್ಚಾಗಿ ಆತ ಗೆರಿಲ್ಲಾಗಳಿಗೆ ಆರ್ಥಿಕ, ಮಿಲಿಟರಿ ಬೆಂಬಲವನ್ನು ಸೌದಿ ಅರೇಬಿಯಾ ಮತ್ತು ಇತರ ಮುಸ್ಲಿಂ ದೇಶಗಳ ಸರ್ಕಾರ ಮತ್ತು ಶ್ರೀಮಂತರಿಂದ

ಸಿಐಎ-ಐಎಸ್‌ಐಗಳ ಅಕ್ರಮ ಸಂತಾನ

ಒದಗಿಸುವ ಸಾಮರ್ಥ್ಯದಿಂದ. 1984 ರ ಹೊತ್ತಿಗೆ ಬಿನ್ ಲಾಡೆನ್ ಮಕ್‌ಬತ್-ಅಲ್-ಖಿದಾಮರ್ ಎಂಬ ಸಂಘಟನೆ ರಚಿಸಿದ್ದ. ಮುಸ್ಲಿಂ-ಅರಬ್ ದೇಶಗಳಿಂದ ಮಾತ್ರವಲ್ಲ, ಪಾಕಿಸ್ತಾನದ ಕುಖ್ಯಾತ ಗೂಢಾಚಾರ-ಮಿಲಿಟರಿ ಸಂಸ್ಥೆ ಐಎಸ್‌ಐ ಮತ್ತು ಅಮೆರಿಕಾದ ಸಿಐಎ(ಅಮೆರಿಕದ ಕುಖ್ಯಾತ ಅಂತರ್ರಾಷ್ಟ್ರೀಯ ಗೂಢಚಾರ ಸಂಸ್ಥೆ) ಗಳಿಂದಲೂ ಲಾಡೆನ್‌ರ ಸಂಘಟನೆ 'ಮುಜಾಹಿದಿನ್' ಗಳಿಗೆ ಶಸ್ತ್ರಾಸ್ತ್ರ, ಹಣ, ಇತರ ಸರಕುಗಳನ್ನು ಪೂರೈಸಿತು. ಮುಜಾಹಿದಿನ್‌ಗಳಿಗೆ ಬೆಂಬಲ ಸಾಮಗ್ರಿ ಪೂರೈಕೆಗಾಗಿ ಲಾಡೆನ್‌ರ ಸಂಘಟನೆ ಸಿಐಎ-ಐಎಸ್‌ಐ ಗಳಿಗೆ ಮುಸುಕು ಪರದೆಯಾಗಿತ್ತು. ಹೀಗೆ 1980 ರ ದಶಕದ ಆರಂಭದಿಂದಲೇ ಅಂದರೆ ಸುಮಾರು ಎರಡು ದಶಕಗಳಿಂದಲೇ ಸಿಐಎಗೆ ಲಾಡೆನ್‌ರ ನೇರ ಸಂಪರ್ಕವಿತ್ತು. ಲಾಡೆನ್‌ರ ಖಿದಾಮರ್ ಸಂಘಟನೆಯನ್ನು ಸುಸಂಘಟಿತ ಅಂತರ್ರಾಷ್ಟ್ರೀಯ ಸಂಪರ್ಕ ಇರುವ ಸಂಘಟನೆಯಾಗಿ ಬೆಳೆಸಿದ್ದು ಸಿಐಎ ಅಂತ ಹಲವು ಹಲವು ವರದಿಗಳು ಹೇಳಿವೆ. ಲಾಡೆನ್ ತಮ್ಮ ಶ್ರೀಮಂತಿಕೆ, ಬುದ್ದಿವಂತಿಕೆ, ಶಿಕ್ಷಣದಿಂದಾಗಿ ಪ್ರಾಮುಖ್ಯತೆ ಪಡೆದ ಎನ್ನಲಾಗಿದೆ. ಸಿಐಎ-ಐಎಸ್‌ಐಗಳ ಸಂಪರ್ಕ ಇಲ್ಲದೆ ಬಹುಶಃ ಬಿನ್ ಕೇವಲ 'ಮಾನವೀಯ ಸಹಾಯ' ಒದಗಿಸುವಷ್ಟಕ್ಕೆ ಲಾಡೆನ್ ಬೆಂಬಲ ಸೀಮಿತವಾಗಿರುತ್ತಿತ್ತು ಎಂದು ಹಲವು ವರದಿಗಳು ಹೇಳಿವೆ.

...ರುಕೊಂಡ ಅಮೆರಿಕ

ಮೂಲಭೂತವಾದಿ ಗುಂಪುಗಳು ಗೆರಿಲ್ಲಾ ಹೋರಾಟ ಆರಂಭಿಸಿದಾಗ ಸಿಐಎ ತನ್ನ ಚರಿತ್ರೆಯಲ್ಲೇ ಅತ್ಯಂತ ದೊಡ್ಡ ಅಂತರ್ರಾಷ್ಟ್ರೀಯ ಕಾರ್ಯಾಚರಣೆ ಆರಂಭಿಸಿತು: ಈ ಗೆರಿಲ್ಲಾ ಹೋರಾಟದ ವಿರುದ್ಧ ಸೋವಿಯತ್ ಸರ್ಕಾರ ಅಫಘಾನಿಸ್ತಾನದ ಸರ್ಕಾರಕ್ಕೆ ಬೆಂಬಲವಾಗಿ ಪಡೆಗಳನ್ನು ಕಳಿಸಿದ್ದನ್ನು ಸಿಐಎ ಪೂರ್ಣವಾಗಿ ತನ್ನ ಉದ್ದೇಶಗಳಿಗಾಗಿ ಬಳಸಿತು. ಮುಸ್ಲಿಮ್ ಮೂಲಭೂತವಾದಿ ಗೆರಿಲ್ಲಾಗಳು ಅಫಘಾನಿಸ್ತಾನದ ಸರ್ಕಾರದ ವಿರುದ್ಧ ಆರಂಭಿಸಿದ ಹೋರಾಟವನ್ನು ಎಲ್ಲಾ ಮುಸ್ಲಿಂ ದೇಶಗಳು ಸೋವಿಯತ್ ಒಕ್ಕೂಟದ ವಿರುದ್ಧ 'ಜಾಗತಿಕ ಯುದ್ಧ' ವಾಗಿ ಪರಿವರ್ತಿಸಲು ತನ್ನ ಎಲ್ಲಾ ಆಕರಗಳನ್ನು ಬಳಸಿ ಪ್ರಯತ್ನಿಸಿತು.

ಆಯ್ದು ತರಬೇತಿ ಮಾಡಿತು. ಅರಬರು ಅಫಘಾನರಿಗಿಂತ ಹೆಚ್ಚು ಶಿಕ್ಷಣ ಹೊಂದಿದವರು, ಪರಿಣತರು ಆಗಿದ್ದರು. ಅಲ್ಲದೆ ಅವರು ಹೆಚ್ಚು ಧಾರ್ಮಿಕ ಪ್ರವೃತ್ತಿಯವರೂ ಆಗಿದ್ದರು. ನಾಯಕತ್ವಕ್ಕೆ ಹೆಚ್ಚು ಸೂಕ್ತರಾಗಿದ್ದವರು. ಈ ರೀತಿ ಆಯ್ದ ಅರಬರಿಗೆ ಉನ್ನತ ತರಬೇತಿ ಕೊಡಲಾಯಿತು. ಇದರಲ್ಲಿ ರಾಜಕೀಯ, ಸೈದ್ಧಾಂತಿಕ, ಮಿಲಿಟರಿ, ಭಯೋತ್ಪಾದಕ ತಂತ್ರಗಳ ಬಗ್ಗೆ ತರಬೇತಿ ಸೇರಿತ್ತು. ಬಿನ್ ಲಾಡೆನ್ ಇಂತಹ ತರಬೇತಿ ಪಡೆದವರಲ್ಲಿ ಒಬ್ಬನಾಗಿದ್ದ.

ಲಾಡೆನ್ - ತಾಲಿಬಾನ್‌ಗಳೂ ಸಿಐಎ ಕೂಸುಗಳೇ!

1988 ರಲ್ಲಿ ಅಫಘಾನ್ ಗೆರಿಲ್ಲಾ ಯುದ್ಧದ ಅಂತ್ಯ ಕಾಲದಲ್ಲಿ ಬಿನ್ ಲಾಡೆನ್ 'ಅಲ್-ಕಾಯಿದಾ' ಎಂಬ ಹೆಚ್ಚು ಉಗ್ರಗಾಮಿ ಸಂಘಟನೆ ಆರಂಭಿಸಿದ. 1989 ರಲ್ಲಿ ಸೋವಿಯತ್ ಪಡೆಗಳು ವಾಪಸಾದ ಮೇಲೆ ಲಾಡೆನ್ ಸೌದಿ ಅರೇಬಿಯಾಕ್ಕೆ ವಾಪಸಾದ. ಆದರೆ ತನ್ನ ಸಂಘಟನೆ 'ಅಲ್ ಕಾಯಿದಾ' ದ ಕೆಲಸ ಮುಂದುವರೆಸಿದ. ಸೌದಿ ಅರೇಬಿಯಾದಲ್ಲಿ ಆತನಿಗೂ ಸ್ಥಳೀಯ ಸರ್ಕಾರಕ್ಕೂ ಗರಿ ಬರದೆ, ಲಾಡೆನ್ ವಿರೋಧ ಪಕ್ಷಗಳಿಗೆ ಬೆಂಬಲ ನೀಡಿವೆ. ಈ ಹೊತ್ತಿಗೆ ಅಫಘಾನ್ ಯುದ್ಧ ಮುಗಿದರೂ, ಸಿಐಎ-ಐಎಸ್‌ಐಗಳ 'ಜೆಹಾದ್' ಮುಂದುವರೆದಿತ್ತು. ಸೋವಿಯತ್ ಒಕ್ಕೂಟದ ಮಧ್ಯ ಏಶ್ಯಾ ಗಣರಾಜ್ಯಗಳಲ್ಲಿ ಮತ್ತು ಒಟ್ಟಾರೆ ಪ್ರದೇಶದ ತೈಲ ಸಂಪತ್ತಿನ ನಿಯಂತ್ರಣಕ್ಕೆ ಈ ಜಾಲವನ್ನು ಮುಂದುವರೆಸುವುದು ಅಗತ್ಯವಾಗಿತ್ತು. ಸೋವಿಯತ್ ಒಕ್ಕೂಟದ ಮುಸ್ಲಿಂ ಗಣರಾಜ್ಯಗಳಲ್ಲಿ ಗೆರಿಲ್ಲಾ ಹೋರಾಟಗಳನ್ನು ಆರಂಭಿಸುವುದು ಇತ್ಯಾದಿ ಚಟುವಟಿಕೆಗಳು ಆರಂಭವಾದವು. ಅದೇ ಹೊತ್ತಿಗೆ ಪೂರ್ವಯುರೋಪಿನ ಬಾಲ್ಕನ್ ಪ್ರದೇಶ (ಯುಗೋಸ್ಲಾವಿಯ ಸುತ್ತಮುತ್ತ) ರಶ್ಯಾದ ಚೆಚೆನ್ಯಾ ಮುಂತಾದ ಕಡೆ ಇಸ್ಲಾಮಿಕ್ ಮೂಲಭೂತವಾದಿ ಮೇಲೆ ಗಮನ ಹರಿಸಲಾಗಿತ್ತು. 80 ದಶಕದಲ್ಲಿ ಅಫಘಾನ್ ಸುತ್ತಮುತ್ತ ಸಿಐಎ-ಐಎಸ್‌ಐ-ಗೆರಿಲ್ಲಾಗಳು 'ಮಾದಕ ದ್ರವ್ಯ' ಗಳನ್ನು ತಮ್ಮ ಮುಖ್ಯ ವಾಣಿಜ್ಯವಾಗಿ ಮಾಡಿಕೊಂಡಿದ್ದರು. 90 ರ ದಶಕದ ಆರಂಭದ ಹೊತ್ತಿಗೆ ಈ 'ಮಾದಕ ದ್ರವ್ಯ ವಾಣಿಜ್ಯ' ದ ರಕ್ಷಣೆ ಮುಖ್ಯಉದ್ದೇಶವಾಯಿತು. ಜಗತ್ತಿನ ಒಟ್ಟು 'ಮಾದಕ ದ್ರವ್ಯ' ವಹಿವಾಟಿನ ಮೂರನೇ ಒಂದು ಭಾಗ (ಸುಮಾರು 200 ಶತಕೋಟಿ ಡಾಲರು) ಈ ಪ್ರದೇಶದಲ್ಲಿತ್ತು. ಈ ದುಷ್ಟಕೂಟಕ್ಕೆ ಸೋವಿಯತ್ ಒಕ್ಕೂಟದ ವಿಘಟನೆ ನಂತರ, ರಶ್ಯನ್ ಮಾಫಿಯಾಗಳು ಸೇರಿಕೊಂಡವು. ಸೋವಿಯತ್ ನಿರ್ಗಮನದ ನಂತರ ಅಫಘಾನಿಸ್ತಾನದಲ್ಲಿ ಆಂತರಿಕ ಯುದ್ಧ ಆರಂಭವಾಯಿತು. ಇದರಲ್ಲಿ ಸಿಐಎ-ಐಎಸ್‌ಐ, ತಾಲಿಬಾನ್ ಎಂಬ ಹೊಸ ಪಡೆ ತಯಾರಿಸಿ ಅದನ್ನು ಬಲಪ್ರಯೋಗದ ಮೂಲಕ ಸರ್ಕಾರ ಸ್ಥಾಪಿಸುವಂತೆ ಮಾಡಿದವು. ಹೀಗೆ ಈಗ 'ವಿಲ್ಲನ್' ಆಗಿರುವ ತಾಲಿಬಾನ್ ಸಹ ಸಿಐಎ-ಐಎಸ್‌ಐ ಶಿಶುವೇ.

90 ರ ದಶಕದಲ್ಲಿ ಮುಂದುವರೆದ 'ಜೆಹಾದ್'

ಇದಲ್ಲದೆ ತಾಲಿಬಾನ್ ಸರ್ಕಾರ ಆರಂಭವಾದ ನಂತರ ಅಫಘಾನಿಸ್ತಾನದ 'ಜೆಹಾದ್' ನ ಅಂತರ್ರಾಷ್ಟ್ರೀಯ ಕೇಂದ್ರವಾಯಿತು. ಪಾಕಿಸ್ತಾನದ ಐಎಸ್‌ಐ ತನ್ನ ಚಟುವಟಿಕೆಯನ್ನು ರಭಸದಿಂದ ಮುಂದುವರೆಸುತ್ತಿತ್ತು. ಈ ನಡುವೆ ಕೊಲ್ಲಿ ಯುದ್ಧದಲ್ಲಿ ಅಮೆರಿಕಕ್ಕೆ ಬೆಂಬಲ ನೀಡುವ ಸೌದಿ ಅರೇಬಿಯಾದ ನಿರ್ಧಾರದ ವಿರುದ್ಧ ಲಾಡೆನ್ ದೇಶ ತೊರೆದು ಅಫಘಾನಿಸ್ತಾನ, ಆಮೇಲೆ ಸುಡಾನ್‌ನಲ್ಲಿ (1992) ನೆಲೆಸಿದ. ಆಗಿನಿಂದ ಲಾಡೆನ್‌ಗೂ ಸಿಐಎಗೂ



ಬದುಕುಳಿಯಲು ಹಾತೊರೆದ ಜನ

ಮತಭೇದ ಆರಂಭವಾಯಿತು. ಆದರೂ ಬೋಸ್ನಿಯಾ, ಕೊಸೊವೊ, ಚೆಚೆನ್ಯಾ-ಮುಂತಾದ ಕಡೆ ಮುಸ್ಲಿಂ ಮೂಲಭೂತವಾದಿ ಪಡೆಗಳಿಗೆ ಶಸ್ತ್ರ ಸಾಮಗ್ರಿ, ಹಣ ಒದಗಿಸುವಲ್ಲಿ ಇತರ 'ಜೆಹಾದಿ'ಗಳ ಜತೆಗೆ ಲಾಡೆನ್‌ಗೂ ಪ್ರಮುಖ ಪಾತ್ರವಿತ್ತು. ಈ ಎಲ್ಲಾ ಗುಂಪುಗಳೂ ತಮ್ಮ ಪ್ರಮುಖ 'ವಾಣಿಜ್ಯ'ವಾಗಿ ಮಾದಕ ದ್ರವ್ಯಗಳನ್ನು ನಂಬಿದ್ದವು. ಇದಕ್ಕೂ ಸಿಐಎ-ಐಎಸ್‌ಐ-ಜೆಹಾದಿ ಗುಂಪುಗಳ ಅಂತರ್ರಾಷ್ಟ್ರೀಯ ಜಾಲ ಬೆಂಬಲ ಕೊಡುತ್ತಿತ್ತು ಎಂಬುದು ಈಗ ಬಹಿರಂಗ ಗುಟ್ಟು. 1996 ರಷ್ಟು ಇತ್ತೀಚೆಗೆ ಪಾಕಿಸ್ತಾನಿ ಐಎಸ್‌ಐ ಮೂಲಕ ಸಿಐಎ ಸಂಘಟಿಸಿದ ಹಿಜ್‌ಬುಲ್ಲಾ ಅಂತರ್ರಾಷ್ಟ್ರೀಯ ಎಂಬ ರಹಸ್ಯ ಶೃಂಗಸಭೆಯಲ್ಲಿ ಚೆಚೆನ್ಯಾ ಗೆರಿಲ್ಲಾ ಯುದ್ಧವನ್ನು ಯೋಜಿಸಲಾಯಿತು. ಇದರಲ್ಲಿ ಲಾಡೆನ್ ಭಾಗ ವಹಿಸಿದ್ದ ಎಂದು ಹಲವು ಮೂಲಗಳು ದೃಢಪಡಿಸಿವೆ. ಹೀಗೆ 90 ರ ದಶಕದಲ್ಲಿ ಲಾಡೆನ್‌ರ 'ಅಲ್ ಕಾಯಿದಾ' ಹೆಚ್ಚೆಚ್ಚು ಸ್ವತಂತ್ರವಾಗಿದ್ದರೂ, ಸಿಐಎ-ಐಎಸ್‌ಐ ಜತೆ ಇತರ ದೇಶಗಳಲ್ಲಿ ಭಯೋತ್ಪಾದಕ ಕೆಲಸದಲ್ಲಿ ಸಹಕರಿಸಿದ್ದವು ಎಂಬುದು ಸತ್ಯ.

ತಿರುಗಿ ಬಿದ್ದ ಲಾಡೆನ್

ಆದರೆ ಅದೇ ಸಮಯದಲ್ಲಿ ಕೊಲ್ಲಿ ಯುದ್ಧದಿಂದ ಆರಂಭವಾದ ಅಮೆರಿಕದ ಆಕ್ರಮಕ ಅರಬ್-ವಿರೋಧಿ ನೀತಿ ಹೆಚ್ಚೆಚ್ಚು ಜನರಿಗೆ ಸ್ಪಷ್ಟವಾಗುತ್ತಿದ್ದಂತೆ ಅದು ಎಲ್ಲಾ 'ಜೆಹಾದಿ' ಗುಂಪುಗಳ ಮೇಲೂ ಪರಿಣಾಮ ಬೀರಲಾರಂಭಿಸಿತ್ತು. ಅರಬರು ತಮ್ಮ ಸಾಮಾನ್ಯ ಶತ್ರು ಎಂದು ಭಾವಿಸುವ ಇಸ್ರೇಲಿಗೆ ಅಮೆರಿಕದ ಅನನ್ಯ ಮಿಲಿಟರಿ ರಾಜಕೀಯ ಬೆಂಬಲ, ಪ್ಯಾಲೆಸ್ಟೀನರ ಮೇಲೆ ಬರ್ಬರ ಹಿಂಸಾಚಾರ, ಏಕಮಾತ್ರ ಸೂಪರ್‌ಪವರ್

ಪುಟ 10 ಕ್ಕೆ

...ಸಾಕಿದವರು ಭಯೋತ್ಪಾದನೆ ವಿರುದ್ಧ ಯುದ್ಧ ಸಾರಿದ್ದಾರೆ

ಇದರಲ್ಲಿ ಸಿಐಎ ಎರಡು ಪ್ರಮುಖ ಅಸ್ತ್ರಗಳೆಂದರೆ ಇಸ್ಲಾಮಿಕ್ ಮೂಲಭೂತವಾದ ಮತ್ತು ಪಾಕಿಸ್ತಾನದ ಮಿಲಿಟರಿ ಸರ್ಕಾರ. ಕಮ್ಯುನಿಸಂ ಧರ್ಮ-ವಿರೋಧಿ ಅದರಲ್ಲೂ ಇಸ್ಲಾಮಿಕ್ ವಿರೋಧಿ, ಇದಕ್ಕಾಗಿ ಸೋವಿಯತ್ ಒಕ್ಕೂಟದ 'ಧರ್ಮದ್ವೇಷಿ' ಸರ್ಕಾರದ ವಿರುದ್ಧ 'ಧರ್ಮಯುದ್ಧ' (ಜೆಹಾದ್) ಅಗತ್ಯ. ಇದಕ್ಕಾಗಿ ಜಗತ್ತಿನಾದ್ಯಂತದ ಮುಸ್ಲಿಮರು, ತಮ್ಮೆಲ್ಲಾ ಬಲ ಬಳಸಿಪ್ರಯತ್ನಿಸಬೇಕು. ಹೀಗೆ ಜಾಗತಿಕ 'ಜೆಹಾದ್' ನ ಸಿದ್ಧಾಂತವನ್ನು ಹುಟ್ಟು ಹಾಕಿದ್ದು ಸಿಐಎ ನೇ ಎಂದು ಬಹಳ ಜನಕ್ಕೆ ಗೊತ್ತಿಲ್ಲ. ಆದರೆ ಸ್ವಾಭಾವಿಕವಾಗಿಯೇ ಸಿಐಎ ಬಹಿರಂಗವಾಗಿ ಇದನ್ನು ಮಾಡುವುದು ಸಾಧ್ಯವಿರಲಿಲ್ಲ. ಇದಕ್ಕಾಗಿ ಸಿಐಎ ಪಾಕಿಸ್ತಾನದ ಆಗಿನ ಜಿಯಾ-ಉಲ್-ಹಕ್‌ರ ಮಿಲಿಟರಿ ಸರ್ಕಾರವನ್ನು ಬಳಸಿತು. ಇದಕ್ಕಾಗಿಯೇ ಪಾಕಿಸ್ತಾನದ ಗೂಢಚಾರ-ಮಿಲಿಟರಿ ಸಂಸ್ಥೆಯಾಗಿ ಐಎಸ್‌ಐಯನ್ನು ಹುಟ್ಟುಹಾಕಿ ವಿಸ್ತರಿಸಲಾಯಿತು.

ಇದಕ್ಕಾಗಿ ಸಿಐಎ-ಐಎಸ್‌ಐ ದುಷ್ಟಕೂಟ ಪಾಕಿಸ್ತಾನ-ಅಫಘಾನಿಸ್ತಾನದ ಗಡಿ ಪ್ರದೇಶದಲ್ಲಿ ಹಲವು ಮಿಲಿಟರಿ ತರಬೇತಿ ಕ್ಯಾಂಪುಗಳನ್ನು ಸ್ಥಾಪಿಸಿತು. ಇದಲ್ಲದೆ ಪಾಕಿಸ್ತಾನದಲ್ಲಿರುವ 'ಮದರಸಾ' (ಧಾರ್ಮಿಕ ಸ್ಕೂಲು) ಗಳನ್ನು ಬಳಸಲು ನಿರ್ಧರಿಸಿತು. 1982 ರಿಂದ 1992 ರ ನಡುವೆ 40 ಮುಸ್ಲಿಮ್ ದೇಶಗಳಿಂದ ಆಯ್ದ 35 ಸಾವಿರ ಮುಸ್ಲಿಂ ಮೂಲಭೂತವಾದಿಗಳು ತರಬೇತಿ ಪಡೆದು ಅಫಘಾನಿಸ್ತಾನದಲ್ಲಿ ಗೆರಿಲ್ಲಾ ಯುದ್ಧದಲ್ಲಿ ಭಾಗವಹಿಸಿದರು. ಅಫಘಾನ್ 'ಜೆಹಾದ್' (ಧರ್ಮಯುದ್ಧ)ದಿಂದ ಆಕರ್ಷಿತರಾಗಿ 'ಮದರಸಾ' ಗಳಲ್ಲಿ ಓದಿ, ತರಬೇತಿ ಪಡೆದು ಕೆಲವರು ತಮ್ಮ ದೇಶಗಳಿಗೆ 'ಜೆಹಾದ್' ಆರಂಭಿಸಲು ಮರಳಿದರು. ಸುಮಾರು ಒಂದು ಲಕ್ಷ 'ಜೆಹಾದಿ' ಮುಸ್ಲಿಮ್ ಮೂಲ ಭೂತವಾದಿಗಳ ಭಾರಿ ಅಂತರ್ರಾಷ್ಟ್ರೀಯ ಜಾಲವನ್ನು ಸಿಐಎ- ಐಎಸ್‌ಐಗಳು 80 ರ ದಶಕದಲ್ಲಿ ನಿರ್ಮಿಸಿದ್ದವು. ಗೆರಿಲ್ಲಾ ಯುದ್ಧ ಆರಂಭವಾದಾಗ ಪ್ರಧಾನವಾಗಿ ಸ್ಥಳೀಯ ಅಫಘಾನರೇ ಗೆರಿಲ್ಲಾ ಯೋಧರಾಗಿದ್ದರು. ಹಲವು ಅಫಘಾನ್ ಗೆರಿಲ್ಲಾ ಗುಂಪುಗಳ ಒಳಜಗಳದಿಂದ ಬೇಸತ್ತು ಮತ್ತು ಅಂತರ್ರಾಷ್ಟ್ರೀಯ ಸ್ವರೂಪ ಕೊಡಲು ಸಿಐಎ-ಐಎಸ್‌ಐ ಅರಬ್ ಮುಸ್ಲಿಂ ದೇಶಗಳಿಂದ ಹಲವು ಹೋರಾಟಗಾರರನ್ನು



ಇತಿಹಾಸವನ್ನು ಮರೆತವರು

ಇವತ್ತು ಟಿವಿ ತೆರೆಯ ಮೇಲೆ ಅಮೆರಿಕದ ಮುಗ್ಧ, ನಿರಪರಾಧಿ ಜನರು ಸಂಕಟದಿಂದ ಕಣ್ಣೀರು ಹಾಕುತ್ತಿರುವ ದೃಶ್ಯ ನೋಡುತ್ತಿದ್ದರೆ, ನಮಗೆ ಹಿಂದೆ ಇರಾಕ್‌ನಲ್ಲಿ, ಪ್ಯಾಲೆಸ್ಟೇನಿನಲ್ಲಿಯೂ ಇದೇರೀತಿ ಹಾಕುತ್ತಿರುವ ದೃಶ್ಯ ನೋಡುತ್ತಿದ್ದರೆ, ನಮಗೆ ಹಿಂದೆ ಇರಾಕ್‌ನಲ್ಲಿ, ಪ್ಯಾಲಸ್ಟೀನ್‌ನಲ್ಲಿಯೂ ಇದೇ ರೀತಿ ಮುಗ್ಧ, ನಿಷ್ಪಾಪಿ ಜನರು ಕಣ್ಣೀರು ಹಾಕುತ್ತಿದ್ದ ದೃಶ್ಯ ನೆನಪಾಗಬೇಕು. ಹಾಗೆ ಇತಿಹಾಸದ ಎಲ್ಲ ಕಾಲಘಟ್ಟಗಳ ಎಲ್ಲ ಮಾನವ ಜನಾಂಗದ ನೋವು, ಕಣ್ಣೀರು ಹಾಗೂ ಆತಂಕಗಳನ್ನು ನೆನಪಿಟ್ಟುಕೊಂಡರೆ ಮಾತ್ರ ಒಸಮಾ ಬಿನ್ ಲಾಡೆನ್ ಎಂಬ ಮತಾಂಧ ಧರ್ಮಗುರುವಿನ 'ಅಲ್‌ಖೂದಾ' ಸಂಘಟನೆಯ ಭಯೋತ್ಪಾದನೆಯ ವಿರುದ್ಧ ಜಗತ್ತೂ ಪ್ರತಿಯಾಗಿ ಸಂಘಟಿತ ಪ್ರತಿರೋಧ ಒಡ್ಡಲು ಸಾಧ್ಯ. ಅದು ಬಿಟ್ಟು ನಾಳೆ ಅಮೆರಿಕಾ ನೇರವಾಗಿ ಅಫ್ಘಾನಿನ ಮೇಲೆ ನೂರಾರು ವಿಮಾನಗಳನ್ನು ಕಳುಹಿಸಿ ಬಾಂಬು ದಾಳಿ ನಡೆಸುವುದು ಮಾತ್ರವಾದರೆ, ಅಲ್ಲಿ ಹರಿಯುವ ನಿಷ್ಪಾಪಿ ಜನ ಕಣ್ಣೀರಿಗೂ, ಇವತ್ತು ಅಮೆರಿಕದಲ್ಲಿ ಹರಿಯುತ್ತಿರುವ ಜನರ ಕಣ್ಣೀರಿಗೂ ಯಾವುದೇ ವ್ಯತ್ಯಾಸ ಉಳಿಯುವುದಿಲ್ಲ. ಒಬ್ಬ ಬಿನ್ ಲಾಡೆನ್ ಬದಲಾಗಿ ಇನ್ನೊಬ್ಬ ಬಿನ್ ಲಾಡೆನ್ ಹುಟ್ಟುವುದಕ್ಕೆ ಹೆಚ್ಚು ದಿನಗಳೇನೂ ಬೇಕಾಗುವುದಿಲ್ಲ.

ಆದರೆ ನಮ್ಮಲ್ಲಿ ಯಾವ ರಾಜಕಾರಣಿಗಳು ಇತಿಹಾಸವನ್ನು ಪೂರ್ತಿಯಾಗಿ ನೆನೆಪಿಟ್ಟುಕೊಂಡಿರುತ್ತಾರೆ ಹೇಳಿ? ನ್ಯೂಯಾರ್ಕ್‌ನಲ್ಲಿ ಗಗನಚುಂಬಿ ಕಟ್ಟಡಗಳು ಉರುಳುತ್ತಿದ್ದರೆ ನಮ್ಮ ಗೃಹಸಚಿವ ಲಾಲ್ ಕೃಷ್ಣ ಅಡ್ವಾಣಿಯವರಿಗೆ ಮುಂಬೈಯಲ್ಲಿ ನಡೆದ ಬಾಂಬ್ ಸ್ಫೋಟ ನೆನಪಾಯಿತಂತೆ! ದುರಂತವೆಂದರೆ ಮುಂಬೈನ ಬಾಂಬ್ ಸ್ಫೋಟಕ್ಕೆ ಮೂಲಕಾರಣವಾದ ಬಾಬ್ರಿ ಮಸೀದಿಯ ನಾಶ ಅವರಿಗೆ ನೆನಪಾಗಲಿಲ್ಲ! ಬಾಬ್ರಿ ಮಸೀದಿಯನ್ನು ಇದೇರೀತಿ ಮೂರೂವರೆ ಲಕ್ಷ ಜನರು ಸೇರಿ ಸಂಘಟಿತರಾಗಿ ಉರುಳಿಸಿದ್ದು ಭಯೋತ್ಪಾದನೆಯ ಕೃತ್ಯವಾಗಿ ಅವರಿಗೆ ಕಾಣುವುದಿಲ್ಲ!

ಇದು ಒಬ್ಬ ಅಡ್ವಾಣಿ ಅವರ ಮಾತಲ್ಲ. ಎಲ್ಲ ಕೋಮುವಾದಿ ರಾಜಕಾರಣಿಗಳೂ ಹೀಗೆಯೇ ತಮ್ಮ ಮೂಗಿನ ನೇರಕ್ಕೆ ಸಿದ್ಧಾಂತಗಳನ್ನು ರೂಪಿಸಿಕೊಂಡಿರುತ್ತಾರೆ. ಇಂದಿರಾಗಾಂಧಿ ಕೊಲೆಯಾದ ಬೆನ್ನಲ್ಲೇ ಬೀದಿಗೆಬಂದ ಸಾವಿರಾರು ಜನರು ನಿಷ್ಪಾಪಿ ಸಿಖ್ಖರನ್ನು ಕೈಗೆ ಸಿಕ್ಕ ಆಯುಧದಿಂದ ಹೊಡೆದುಕೊಂದದ್ದೂ ಸಂಘಟಿತ ಭಯೋತ್ಪಾದನೆಗೆ ಸಾಕ್ಷಿ. ತುರ್ತು ಪರಿಸ್ಥಿತಿಯ ಸಮಯದಲ್ಲಿ ಸಾವಿರಾರು ಜನರನ್ನು ವಿಚಾರಣೆಯಿಲ್ಲದೆ ಜೈಲಿಗೆ ತಳ್ಳಿ ಹಿಂಸೆ ನೀಡಿದ್ದೂ ಸಂಘಟಿತ ಭಯೋತ್ಪಾದನೆಯ ಇನ್ನೊಂದು ಮುಖ. ಮುಂಬೈನ ಭೀವಂಡಿ ಮತ್ತು ಗುಜರಾತ್ ಮತ್ತು ಕರ್ನಾಟಕದಲ್ಲಿ ನಿರ್ದಿಷ್ಟ ಸಂಘಟನೆಗಳ ಜನರು ಚರ್ಚ್‌ಗಳಿಗೆಬೆಂಕಿ ಹಚ್ಚಿದ್ದೂ ಸಣ್ಣ ಮಟ್ಟದ ಭಯೋತ್ಪಾದನೆಯೇ. ಇದೀಗ ಕಾಶ್ಮೀರದಲ್ಲಿ ಪಾಕಿಸ್ತಾನ ಬೆಂಬಲಿತ ಉಗ್ರವಾದಿಗಳು ನಡೆಸುತ್ತಿರುವ ಮನುಷ್ಯರ ಮಾರಣಹೋಮ ಈ ಸಂಘಟಿತ ಭಯೋತ್ಪಾದನೆಯ ಪರಾಕಾಷ್ಠೆ.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಒಂದು ಮಾತು ಇಲ್ಲಿ ಸ್ಮರಣಾರ್ಹ. ಅವರು ಹೇಳಿದ್ದರು - 'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲು ಸಾಧ್ಯವಿಲ್ಲ!'

- 'ಸುಧಾ' ಪತ್ರಿಕೆಯಿಂದ


15 WORLD FESTIVAL OF YOUTH AND STUDENTS

ಜಗತ್ತಿನ ಎಲ್ಲೆಡೆಗಳಲ್ಲಿ ಚಿಮ್ಮುತ್ತಿರುವ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳನ್ನು ಬೆಸೆಯುವ ಮಹತ್ವದ ಚಾರಿತ್ರಿಕ ಘಟನೆ ಅಲ್ಜೀರಿಯಾದಲ್ಲಿ ನಡೆಯಿತು. ವಿಶ್ವದ ವಿದ್ಯಾರ್ಥಿ-ಯುವಜನ ಚೇತನಗಳು ಒಂದುಗೂಡಿ ಸೌಹಾರ್ದತೆ ಸಾರಿದ ಮಹಾನ್ ಉತ್ಸವವಿದು. ಆದರೆ ನಮ್ಮ ದೇಶದ ಜಗತ್ತಿನ ಪತ್ರಿಕೆ-ಟಿ.ವಿ.ಗಳು ಬೇಕೆಂದೇ ದುರುದ್ದೇಶದಿಂದ ಈ ಉತ್ಸವದ ಸ್ಫೂರ್ತಿ ಸಂದೇಶವನ್ನು ಬಿತ್ತರಿಸದೇ ಸಾಮ್ರಾಜ್ಯಶಾಹಿಯ ನಿಷ್ಠಸೇವೆ ಮಾಡಿದವು. ಆದರೇನಂತೆ ಉತ್ಸವದ ಹುರುಪು-ಅರಿವಿನ ಹೊಳಪು ಜಗತ್ತಿಗೆ ಪಸರಿಸಿದೆ. ಸ್ನೇಹ-ಸೌಹಾರ್ದದ ಬಳ್ಳಿ ಕಡಿದಷ್ಟೂ ಚಿಗುರುವ ಕ್ಷನು ಮರಗಳಂತೆ ಚಿಗುರುತ್ತಿದೆ. ಈ ಉತ್ಸವದಲ್ಲಿ ಭಾಗಿಯಾದ ಪ್ರತಿನಿಧಿ ಅದರ ಸ್ಫೂರ್ತಿಯ ವಿವರಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಅವರ ಅನುಭವದ ಬುತ್ತಿಯಲ್ಲಿ ಏನಿದೆ ನೋಡೋಣ. ಅದೂ ಮತೀಯ ಮೂಲಭೂತವಾದಿಗಳಿಂದ ನಲುಗಿ ಮತ್ತೆ ಮೇಲೆದ್ದು ನಿಂತಿರುವ ಅಲ್ಜೀರಿಯಾದಿಂದ...

15ನೇ ವಿಶ್ವ ಯುವಜನ-ವಿದ್ಯಾರ್ಥಿ ಉತ್ಸವ


ಹೋರಾಟಗಳ ಜಾಗತೀಕರಣ

ಆಗಸ್ಟ್ 8 ರ ಸಂಜೆ 'ಅಲ್ಜೀರ್ಸ್' ನ ಜನತೆಗೆ ಹಬ್ಬವೇ ಸರಿ! ರಾತ್ರಿ 8 ಗಂಟೆಗೆ ಉತ್ಸವದ ಅಧಿಕೃತ ಉದ್ಘಾಟನೆ, ಆದರೆ ಸಂಜೆ 6 ಗಂಟೆಗೆ 'ಜುಲೈ 5 ಸ್ಟೇಡಿಯಂ' ನಲ್ಲಿ ಕಾಲಿಡಲು ಜಾಗವಿಲ್ಲದಷ್ಟು ಲಕ್ಷಾಂತರ ಜನರು ಸಮಾವೇಶಗೊಂಡಿದ್ದರು. ಅದೊಂದು ವರ್ಣಿಸಲಸಾಧ್ಯವಾದ ವರ್ಣಮಯ ಸಮಾರಂಭ! ಸುಮಾರು 150ದೇಶಗಳ ಯುವಜನ ಪ್ರತಿನಿಧಿಗಳು ತಮ್ಮ ದೇಶಗಳ ರಾಷ್ಟ್ರಧ್ವಜಗಳೊಂದಿಗೆ ಸ್ಟೇಡಿಯಂನಲ್ಲಿ ಪಥಸಂಚಲನ ಆರಂಭಿಸುತ್ತಿದ್ದಂತೆಯೇ ಲಕ್ಷಾಂತರ ಅಲ್ಜೀರಿಯನ್ನರ ಭಾರಿ ಚಪ್ಪಾಳೆಗಳ ಸ್ವಾಗತ, ಮುಗಿಲು ಮುಟ್ಟಿದ ಘೋಷಣೆಗಳು, ಅದಕ್ಕೆ ಪ್ರೇರೇಪಿಸುವ ಸಂಗೀತ... ಎಲ್ಲೆಲ್ಲೂ ಸಂಭ್ರಮ. ಈ ಮಧ್ಯದಲ್ಲೇ ಉತ್ಸವದ ಜ್ಯೋತಿಯನ್ನು ಹೊತ್ತಿಸುವುದರ ಮೂಲಕ ವರ್ಣಮಯ ಉತ್ಸವಕ್ಕೆ ಚಾಲನೆ. ನಂತರ ಜನತಾ ಪ್ರಜಾಪ್ರಭುತ್ವ ಗಣರಾಜ್ಯದ ಅಧ್ಯಕ್ಷರಾದ ಅಬ್ದುಲ್ ಅಜೀಜ್ ಬೊಟ್ಪೊಲಿಕಾರವರಿಂದ ಉತ್ಸವದ ಅಧಿಕೃತ ಉದ್ಘಾಟನೆಯಾಯಿತು.



ಉತ್ಸವದ ಉದ್ಘಾಟನೆಯಲ್ಲಿ ನೆರೆದ ಜನ

ಇದಾದ ನಂತರ ಸಮಾರಂಭವೇ ಸಾಂಸ್ಕೃತಿಕ ಲೋಕಕ್ಕೆ ತಿರುಗಿತು. ಅಲ್ಜೀರಿಯಾದ ವಿವಿಧ ಜಾನಪದ ತಂಡಗಳು, ಕಲಾವಿದರು ಹಾಡುಗಾರರು ತಂತ್ರಜ್ಞರು, ವಿವಿಧ ರೀತಿಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದರು. ಹಲವು ಬಣ್ಣದ, ಹಲವು ಭಾಷೆಗಳ, ಹಲವು ಸಂಸ್ಕೃತಿಗಳನ್ನು ಹೊಂದಿದ್ದರೂ ಜಗತ್ತಿನ ನೂರಾರು ದೇಶಗಳ ಯುವಕ-ಯುವತಿಯರು ಆದಿನ ಅಲ್ಜೀರಿಯಾದ ಜನತೆಯೊಂದಿಗೆ ಕೈ ಜೋಡಿಸಿ ಸೌಹಾರ್ದತೆಯನ್ನು ವಿಶ್ವ ಭ್ರಾತೃತ್ವವನ್ನು ಮೆರೆದರು. 'ಜಗತ್ತಿನ ಯುವಜನರನ್ನು ಕ್ರಾಂತಿಕಾರಿ ಪಥದತ್ತ ಒಗ್ಗೂಡಿಸೋಣ' ಎಂಬುದೇ ಈ ಉತ್ಸವ ಉದ್ದೇಶ ಕೂಡ ಆಗಿತ್ತು.



ಕತ್ತಲೆ ಓಡಿಸಿದ ಬೆಳಕು

ಈ ಉತ್ಸವದ ಯಶಸ್ಸಿಗೆ ಇಡೀ ಅಲ್ಜೀರಿಯಾವೇ ಶೃಂಗಾರಗೊಂಡಿತ್ತು. ವರ್ಣರಂಜಿತ ಬ್ಯಾನರ್‌ಗಳು, ಬಾವುಟಗಳು, ಭಿತ್ತಿಪತ್ರಗಳು ಮುಂತಾದವುಗಳಿಂದ ಕೇವಲ 'ಅಲ್ಜೀರ್ಸ್' ನಗರ ಮಾತ್ರವಲ್ಲ. ಇಡೀ ದೇಶವೇ ಸ್ವಾಗತಕಾರನಾಗಿತ್ತು.

ಜಗತ್ತಿನ ಸುಮಾರು 150 ದೇಶಗಳನ್ನು ಪ್ರತಿನಿಧಿಸಿ ಸುಮಾರು 11 ಸಾವಿರ ಯುವಕ ಯುವತಿಯರು ಸುಮಾರು 500 ಕ್ಕಿಂತ ಅಧಿಕ ಸಂಘಟನೆಗಳನ್ನು, ಸರ್ಕಾರಗಳನ್ನು ಪ್ರತಿನಿಧಿಸಿ ಪಾಲ್ಗೊಂಡಿದ್ದರು.

ಭಾರತದಿಂದ ಡಿವೈಎಫ್‌ಐ-ಎಸ್‌ಎಫ್‌ಐ ನ 51 ಯುವಜನ ಪ್ರತಿನಿಧಿಗಳು ಸೇರಿ ಒಟ್ಟು 104 ಪ್ರತಿನಿಧಿಗಳು ವಿವಿಧ ಸಂಘಟನೆಗಳನ್ನು ಪ್ರತಿನಿಧಿಸಿ (AISF, AIYF, AISB, AIYL, ಯೂತ್ ಕಾಂಗ್ರೆಸ್) ಭಾಗವಹಿಸಿದ್ದರು. ಅಲ್ಲದೆ ವಿವಿಧ ರಾಷ್ಟ್ರಗಳಿಂದ ಸುಮಾರು 60 ಸಂಸತ್ ಸದಸ್ಯರು, ಶಾಸಕರುಗಳು, ಸಚಿವರುಗಳು ಪಾಲ್ಗೊಂಡಿದ್ದರು.

ಮಹಾಂತೇಶ್.ಕೆ

ಚರ್ಚಾಕೇಂದ್ರ

ಆಗಸ್ಟ್ 9 ರಿಂದ ಭಾಮೆಡಿಯನ್ ವಿಶ್ವವಿದ್ಯಾಲಯದ ಕ್ಯಾಂಪಸ್‌ನ ವಿವಿಧ ಕೇಂದ್ರಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳು ಪ್ರಾರಂಭಗೊಂಡವು. ಪ್ರಮುಖವಾಗಿ, ಶಾಂತಿ ಮತ್ತು ಭದ್ರತೆ ಕುರಿತ (Peace and Security) ಚರ್ಚೆಯಲ್ಲಿ ಆಫ್ರಿಕಾ, ಲ್ಯಾಟಿನ್, ಅಮೆರಿಕಾ, ಮಧ್ಯ ಪ್ರಾಚ್ಯ, ದಕ್ಷಿಣ ಏಶ್ಯಾ ಮತ್ತು ಇತರೆ ರಾಷ್ಟ್ರಗಳ ಸುಮಾರು 156 ಜನ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಮುಖ್ಯ ಅಮೆರಿಕಾದ ಯಜಮಾನಿಕೆ, ಪ್ಯಾಲಿಸ್ಟೈನ್, ಇರಾಕ್ ಸದಸ್ಯರುಗಳು ಹಾಗೂ ಕ್ಯೂಬಾದ ಮೇಲಿನ ಆರ್ಥಿಕ ದಿಗ್ಬಂಧನಗಳು ಬಹುತೇಕ ಖಂಡನೆಗೊಳಗಾಗುತ್ತಿದ್ದವು.

ಅದೇ ವೇಳೆಗೆ ವಿವಿಧ ಕೇಂದ್ರಗಳಲ್ಲಿ ಆಫ್ರಿಕಾದ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ ಮತ್ತು ಶೀತಲ ಸಮರಗಳು, ಧಾರ್ಮಿಕ ಬಿಕ್ಕಟ್ಟುಗಳು ಹಾಗೂ ಸಹರಾ ಕುರಿತಾದ ಸಮಸ್ಯೆಗಳ ಬಗ್ಗೆ ಚರ್ಚೆಗಳು ನಡೆದವು.

'ನವ ಉದಾರ ಜಾಗತೀಕರಣ' ಕುರಿತ ಚರ್ಚೆಯಲ್ಲಿ 'ಸಾಮ್ರಾಜ್ಯಶಾಹಿಯೂ ಜಗತ್ತಿನ ಎಲ್ಲಾ ಜನತೆಯ ಶತ್ರು' ಹೇಗೆ ಎಂಬುದನ್ನು ಕುರಿತು ಸುಮಾರು 20 ಗಂಟೆಗಳ ಕಾಲ ನೂರಾರು ಪ್ರತಿನಿಧಿಗಳು ಪಾಲ್ಗೊಂಡು ತಮ್ಮ ತಮ್ಮ ದೇಶಗಳ ಅನುಭವದ ಮೂಲಕ ಆ ದೇಶಗಳಲ್ಲಿ ಸಾಮ್ರಾಜ್ಯಶಾಹಿಗಳಲ್ಲಿ ಸಾಮ್ರಾಜ್ಯಶಾಹಿಗಳ ಅಟ್ಟಹಾಸ ಕುರಿತಂತೆ ವಿವರಿಸಿ ಪುಷ್ಟೀಕರಿಸಿದರು.

ಮೂಲಭೂತವಾದವನ್ನೊದ್ದು ಮೇಲೆದ್ದ ಓ ಅಲ್ಜೀರಿಯಾ!

'ಮೆಡಿಟೇರಿಯನ್ ಎಂದರೆ ಪ್ರಶಾಂತತೆಗೆ ಮತ್ತೊಂದು ಹೆಸರಿರಬೇಕು! ಜಗತ್ತಿನ ನೂರಾರು ದೇಶಗಳಿಂದ ಸಾವಿರಾರು ಜನ ತನ್ನ ಮೇಲೆ ಹರಿದಾಡಿದಾಗಲೂ ಅದಕ್ಕೆ ಯಾವುದೇ ಭಂಗವಾದಂತಿಲ್ಲ! ತೀವ್ರತರವಾದ ಅಲೆಗಳ, ಆರ್ಭಟಗಳ ಮೂಲಕ ಯಾವುದೇ ಪ್ರತಿರೋಧ ವ್ಯಕ್ತಪಡಿಸಲಿಲ್ಲ... ತನ್ನಷ್ಟಕ್ಕೆ ಪ್ರಶಾಂತವಾಗಿತ್ತು 'ಮೆಡಿಟೇರಿಯನ್'

ಮೋಡಗಳಿಲ್ಲದ ಆಕಾಶ... ಕೆಳಗೆ ಅಲೆಗಳಿಲ್ಲದ ಮೆಡಿಟೇರಿಯನ್ ಸಮುದ್ರವನ್ನು ನಾವು ಪ್ರಯಾಣಿಸುತ್ತಿದ್ದ ವಿಮಾನ. ದಾಟುತ್ತಿದ್ದಂತೆಯೇ ದೂರದಲ್ಲಿ ಕಾಣಿಸ ತೊಡಗಿತು... 'ಅಲ್ಜೀರ್ಸ್',,ಅಲ್ಜೀರಿಯಾ ದೇಶದ ರಾಜಧಾನಿ.

ಹೌದು ನಿಜಕ್ಕೂ ಸುಂದರವಾದ ನಗರ.... ಬೇಸಿಗೆಯಾಗಿದ್ದರೂ ಸೆಕೆಯೆನಿಸದ ರಸ್ತೆಗಳಿದ್ದರೂ .... ಸಿಗ್ನಲ್‌ಗಳೇ ಇಲ್ಲದ ಆಫ್ರಿಕಾದಲ್ಲಿದ್ದರೂ ಕಪ್ಪಿಲ್ಲದ ಅಲ್ಜೀರ್ಸ್ ಅದು.

ಆಗಸ್ಟ್ 8 ರಿಂದ 16 ರವರೆಗೆ ಅಲ್ಲಿನಡೆದ 15 ನೇ ವಿಶ್ವ ಯುವಜನ ಮತ್ತು ವಿದ್ಯಾರ್ಥಿ ಉತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ನಮಗಂತೂ ಅದೊಂದು ವಿಶೇಷವೇ ಸರಿ.

ಭೌಗೋಳಿಕ ಅಲ್ಜೀರಿಯಾ

2,381741 ಚ.ಕಿ. ವಿಸ್ತೀರ್ಣ ಹೊಂದಿರುವ ಅಲ್ಜೀರಿಯಾ ಜಗತ್ತಿನ 10ನೇ ದೊಡ್ಡ ವಿಸ್ತೀಣ ಹೊಂದಿರುವ ದೇಶವಾಗಿದೆ. ಆಫ್ರಿಕಾದ ಉತ್ತರ-ಪಶ್ಚಿಮ ಭಾಗದಲ್ಲಿ ಬರುವ ಅಲ್ಜೀರಿಯಾವು ಉತ್ತರದಲ್ಲಿ ಮೆಡಿಟೇರಿಯನ್ ಸಮುದ್ರ, ದಕ್ಷಿಣದಲ್ಲಿ ಮೌರಿಥಾನಿ, ಮಾಲಿ ಮತ್ತು ನಿಗಾರ್, ಪೂರ್ವದಲ್ಲಿ ಟುನಿಷಿಯಾ ಮತ್ತು ಲಿಬಿಯಾ ಮತ್ತು ಪಶ್ಚಿಮದಲ್ಲಿ ಮೊರಕ್ಕೊ ಮತ್ತು ಪಶ್ಚಿಮ ಸಹರಾಗಳಿಂದ ಸುತ್ತುವರೆಯಲ್ಪಟ್ಟಿದೆ.

ಸುಮಾರು 3 ಕೋಟಿಗಿಂತ (ಇದರಲ್ಲಿ ಶೇ 75 ರಷ್ಟು ಯುವಜನತೆ) ಹೆಚ್ಚು ಜನಸಂಖ್ಯೆಯುಳ್ಳ ಈ ದೇಶದ ಅಧಿಕೃತ ಆಡಳಿತ ಭಾಷೆ ಅರೆಬಿಕ್, ಕರೆನ್ಸಿ ದಿನಾರ್ ($1- 77 ದಿನಾರ್) ಆಗಿದೆ.

ಉದ್ಯೋಗವಕಾಶಗಳು: ಅಲ್ಜೀರಿಯಾದ ಶೇ 49.2 ಜನರು ಕೈಗಾರಿಕೆ ಮತ್ತು ಸೇವೆಯನ್ನು ಅವಲಂಬಿಸಿದ್ದಾರೆ. ಶೇ 20.5 ಜನರು ಆಡಳಿತ ಹಾಗೂ ಶೇ 24.3 ರಷ್ಟು ಜನರು ಕೃಷಿ ಮತ್ತು ಮೀನುಗಾರಿಕೆಯಲ್ಲಿ ದುಡಿಯುತ್ತಿದ್ದಾರೆ.

ಶೈಕ್ಷಣಿಕವಾಗಿ: ಶಿಕ್ಷಣರಂಗದಲ್ಲಿ ಅತ್ಯಂತ ಪ್ರಗತಿದಾಯಕವಾಗಿದೆ. ಶೇ 97 ರಷ್ಟು ಸಾಕ್ಷರತೆ (ಇತರೆ ಮೂಲದ ಪ್ರಕಾರ ಶೇ 75) ಸಾಧಿಸಿರುವ ಈ ದೇಶದಲ್ಲಿ 6ನೇ ವರ್ಷದಿಂದ ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ.

ಶೈಕ್ಷಣಿಕ ರಂಗದಲ್ಲಿ ಅವರು ಸಾಧಿಸಿರುವ ಪ್ರಗತಿಗೆ ಅಲ್ಜೀರ್ಸ್‌ನಲ್ಲಿ 'ಉತ್ಸವ' ನಡೆದ ವಿಶ್ವವಿದ್ಯಾಲಯದ ಭವ್ಯ ಹಾಗೂ ಬೃಹತ್ತಾದ ಕಟ್ಟಡಗಳೇ ಸಾಕ್ಷಿ! ಕೇವಲ 'ಅಲ್ಜೀರ್ಸ್' ನಗರದಲ್ಲಿ ಮಾತ್ರವೇ 55,000 (ಹಾಸಿಗೆಯ) ವಿದ್ಯಾರ್ಥಿಗಳು ಉಳಿದುಕೊಳ್ಳಲು ವಿದ್ಯಾರ್ಥಿ ನಿಲಯಗಳಿವೆ. ಅಲ್ಜೀರ್ಸ್‌ನಲ್ಲಿರುವ ಹೌರಿ ಬೊಮೆಡಿನ್ ವಿಶ್ವವಿದ್ಯಾಲಯವು ಇಡೀ ಆಫ್ರಿಕಾದಲ್ಲೇ ಅತ್ಯಂತ ದೊಡ್ಡದಾಗಿದೆ. (ಈ ವಿ.ವಿ. ಕ್ಯಾಂಪಸ್‌ನಲ್ಲೇ ಉತ್ಸವದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳಲ್ಲಿ ವಸತಿ ವ್ಯವಸ್ಥೆ ಮಾಡಿದ್ದರು) ಸಾಹಿತ್ಯ.. ಸಂಗೀತ ಪ್ರಿಯರಾಗಿರುವ ಅಲ್ಜೀರಿಯಾದ ಜನತೆ ಸಂಪೂರ್ಣವಾಗಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಶರವೇಗದಲ್ಲಿ ಮುಂದಿದ್ದೇವೆ.....

ನೂರಾರು ವರ್ಷಗಳ ಕಾಲ ಫ್ರೆಂಚರ ವಸಾಹತುಶಾಹಿ ಶೋಷಣೆಗೆ ಒಳಗಾಗಿದ್ದ ಅಲ್ಜೀರಿಯಾ ವಸಾಹತುಶಾಹಿ ವಿರುದ್ಧದ ಹೋರಾಟದಲ್ಲಿ ಲಕ್ಷಾಂತರ ಜೀವಗಳು ಬಲಿ ಯಾಗಿವೆ ಎಂದು ಅಲ್ಜೀರ್ಸ್‌ನ ಮಧ್ಯಭಾಗದಲ್ಲಿ ಸುಮಾರು 250 ಅಡಿಗಳಷ್ಟು ಬೃಹದಾಕಾರವಾಗಿ ನಿರ್ಮಿಸಿರುವ 'ಹುತಾತ್ಮಗೋಪುರ'ದ ಮುಂದಿರುವ ಫಲಕದಲ್ಲಿ ಬರೆಯಲಾಗಿದೆ. ಈ ಧೀರ ಹೋರಾಟಗಳ ಫಲವಾಗಿ-1962 ಜುಲೈ 5 ರಂದು ಜನತಾ ಪ್ರಜಾಪ್ರಭುತ್ವ ಗಣರಾಜ್ಯವಾಗಿ ಉದಯವಾಗಿದೆ. ವಸಾಹತುಶಾಹಿ ಮತ್ತು ಸಾಮ್ರಾಜ್ಯ ಶಾಹಿ ವಿರೋಧಿ ಹೋರಾಟದ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಅಲ್ಲಿನ ಜನತೆ ಇದರೊಂದಿಗೆ ಇತ್ತೀಚೆಗೆ ಅಲ್ಜೀರಿಯಾದಲ್ಲಿ ತೀವ್ರ ಗೊಂಡಿರುವ ಧಾರ್ಮಿಕ ಮೂಲಭೂತ ವಾದ ವನ್ನು ಕೊನೆಗಾಣಿಸಲು ಶ್ರಮಿಸುತ್ತಿದೆ. (ಈ ಕಾರಣ ದಿಂದ ನಾವು ನಗರವನ್ನು ಬಿಟ್ಟು ಎಲ್ಲೂ ಹೊರ ಹೋಗಲು ಸಾಧ್ಯವಾಗಲಿಲ್ಲ) ಸಾಮ್ರಾಜ್ಯ ಶಾಹಿ ವಿರೋಧಿ ಹೋರಾಟವನ್ನು ಜಾಗತೀಕರಿಸುವ ನಿಟ್ಟಿನಲ್ಲಿ ಈ ಉತ್ಸವವು ಅಲ್ಲಿನ ಜನತೆಗೆ ಆನೆಬಲ ವನ್ನು ತಂದುಕೊಟ್ಟಿದೆ ಎನ್ನುವುದರಲ್ಲಿ ಸಂಶಯವಿಲ್ಲ.



ಸಾಮ್ರಾಜ್ಯಶಾಹಿ ನೀನು ಅಪರಾಧಿ ಎಂದು ಘೋಷಿಸಿದ ವೇದಿಕೆ

ಕೊನೆಯಲ್ಲಿ ಅಂಗೀಕರಿಸಲಾದ ನಿರ್ಣಯವನ್ನು ಮಂಡಿಸುತ್ತಾ ಕ್ಯೂಬಾ ಪ್ರತಿನಿಧಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಮುಂದುವರೆಸುವ ಅಗತ್ಯವನ್ನು ಒತ್ತಿ ಹೇಳಿದರು.

ಪ್ರಜಾಪ್ರಭುತ್ವ, ಮಾನವಹಕ್ಕುಗಳು ಹಾಗೂ ಸಾಮಾಜಿಕ ನ್ಯಾಯ ಕುರಿತಂತೆ ನಡೆದ ಕೇಂದ್ರದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು ಜಗತ್ತಿನ ವಿವಿಧ ದೇಶಗಳ ಸಾರ್ವಭೌಮತ್ವದ ಮೇಲೆ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವ ನೆಪದಲ್ಲಿ



ಕರ್ನಾಟಕ ಪ್ರತಿನಿಧಿಗಳಾದ ಉಮೇಶ್, ಕೃಷ್ಣಪ್ಪ, ಮಹಾಂತೇಶ್ ಅನುವಾದಕರೊಂದಿಗೆ

ಆಕ್ರಮಣ ಮಾಡುತ್ತಿರುವವರನ್ನು ತೀವ್ರವಾಗಿ ಖಂಡಿಸಲಾಯಿತು.

ಅಲ್ಲದೆ ಮಧ್ಯ ಪ್ರಾಚ್ಯ ರಾಷ್ಟ್ರಗಳ ಪ್ರತಿನಿಧಿಗಳು ಇರಾಕ್ ಮತ್ತು ಪ್ಯಾಲೆಸ್ಟೇನ್ ಮೇಲೆ ಅಮೆರಿಕ ಮತ್ತು ಅದರ ಕೈಗೊಂಬೆ ಇಸ್ರೇಲ್ ಮಾಡುತ್ತಿರುವ

ಪ್ಯಾಲೆಸ್ಟೇನ್ ಮೇಲೆ ಇಸ್ರೇಲ್ ಧಾಳಿಗೆ ತೀವ್ರ ಖಂಡನೆ

ಉತ್ಸವ ನಡೆಯುತ್ತಿರುವ ಸಂದರ್ಭದಲ್ಲೇ ಪ್ಯಾಲೆಸ್ಟೇನ್ ನಾಗರೀಕರ ಮೇಲೆ ಇಸ್ರೇಲ್ ಸೈನಿಕ ಪಡೆಗಳು ನಡೆಸಿದ ಆಕ್ರಮಣವನ್ನು ಪ್ರತಿನಿಧಿಗಳೆಲ್ಲರೂ ಒಕ್ಕೊರಲಿನಿಂದ ಖಂಡಿಸಿದರು. ಮತ್ತು ಕೂಡಲೇ ಪ್ಯಾಲಿಸ್ಟೇನ್ ಪ್ರದೇಶದಿಂದ ಇರಾನ್ ಸೈನಿಕ ಪಡೆಗಳು ಕಾಲ್ತೆಗೆಯಬೇಕೆಂದು ಆಗ್ರಹಪಡಿಸಿದ್ದಲ್ಲದೆ ತಾಯ್ನಾಡಿನ ರಕ್ಷಣೆಗಾಗಿ ಹೋರಾಡುತ್ತಿರುವ ಪ್ಯಾಲೆಸ್ಟೇನ್ ಜನತೆಗೆ ತಮ್ಮ ಸೌಹಾರ್ದತೆಯನ್ನು ವ್ಯಕ್ತಪಡಿಸಿ ಮೆರವಣಿಗೆಗಳಲ್ಲಿ ಪಾಲ್ಗೊಂಡರು.

ಆಕ್ರಮಣವನ್ನು ಖಂಡಿಸಿ ಅಮೆರಿಕ ರಾಷ್ಟ್ರಕ್ಕೆ ಮಾನವಹಕ್ಕುಗಳ ಬಗ್ಗೆ ಮಾತನಾಡಲು ಯಾವುದೇ ಹಕ್ಕಿಲ್ಲವೆಂದರು.

ಆಫ್ರಿಕಾ ದೇಶಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಸಾಮ್ರಾಜ್ಯಶಾಹಿಗಳು ಸುಧಾರಣೆಯ ಹೆಸರಿನಲ್ಲಿ ಅತಿಕ್ರಮ ಪ್ರವೇಶಿಸಿ ಆ ದೇಶಗಳ ಜನರ ಹಕ್ಕುಗಳ ಮೇಲೆ ಅಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಹಲ್ಲೆ ನಡೆಸಿವೆ. ಮತ್ತು ಅಪಾರ ನೈಸರ್ಗಿಕ ಸಂಪತ್ತನ್ನು ದೋಚಿಲು ಹೂತು ಹಾಕುತ್ತಿವೆ ಎಂದು ಆರೋಪಿಸಿದರು.

ಕ್ಯೂಬಾ, ವಿಯಟ್ನಾಂ, ಪ್ಯಾಲೆಸ್ಟೈನ್, ಇರಾಕ್ ಮತ್ತು ಸಿರಿಯಾ ದೇಶಗಳ ಪ್ರತಿನಿಧಿಗಳು ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ದೇಶಗಳ ಮೇಲೆ ನಡೆಸಿರುವ ಮತ್ತು ನಡೆಸುತ್ತಿರುವ ಪೈಶಾಚಿಕ ಕೃತ್ಯಗಳನ್ನು ಬಯಲು ಮಾಡುವ ಛಾಯಾಚಿತ್ರ ಪ್ರದರ್ಶನಗಳನ್ನು ಸೌಹಾರ್ದತಾ ಬಜಾರ್ (Salidarity Bazar) ಗಳಲ್ಲಿ ಪ್ರದರ್ಶಿಸಿದರು.

'ಸಾಮ್ರಾಜ್ಯಶಾಹಿ ವಿರೋಧಿ ನ್ಯಾಯಾಲಯ'

ಈ ನ್ಯಾಯಾಲಯದಲ್ಲಿ ಪ್ರಮುಖ ಆರೋಪಿ ಸಾಮ್ರಾಜ್ಯಶಾಹಿ, ನ್ಯಾಯಕ್ಕಾಗಿ ಮನವಿ ಮಾಡಿದವರು, ಕ್ಯೂಬಾ, ಇರಾಕ್, ಪ್ಯಾಲಿಸ್ಟೇನ್ ಮತ್ತು ಆಫ್ರಿಕಾ ದೇಶಗಳ ಜನತೆ. ಜಗತ್ತಿನಲ್ಲಿ ನಡೆದಿರುವ ಮತ್ತು ನಡೆಸುತ್ತಿರುವ ಮಾನವತೆಗೆ ವಿರುದ್ಧವಾದಂತಹ ಎಲ್ಲಾ ಕೃತ್ಯಗಳಿಗೆ ಸಾಮ್ರಾಜ್ಯಶಾಹಿಯೇ ಕಾರಣವೆಂದು ನೇರವಾಗಿ ಅಪರಾಧಿಯನ್ನಾಗಿಸಲಾಯಿತು. ಕೊಲೆಗಳು, ಶಸ್ತ್ರಾಸ್ತ್ರಗಳು, ಮಿಲಿಟರಿ ಆಕ್ರಮಣ, ಪರಿಸ್ಥಿತಿಯು ಬಿಗಡಾಯಿಸುವಂತಹ ಪರಿಸ್ಥಿತಿಗಳನ್ನು ಸಾಮ್ರಾಜ್ಯಶಾಹಿ ನಿರ್ಮಿಸಿದೆ ಎಂದು ಆರೋಪ ಮಾಡಲಾಯಿತು.

ಅಧ್ಯಕ್ಷೀಯ ಮಂಡಳಿಯಲ್ಲಿದ್ದ ಸದಸ್ಯರೇ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದರು. ವಿವಿಧ ದೇಶಗಳ ಪ್ರತಿನಿಧಿಗಳು ಈ 'ಟ್ರಿಬುನಲ್' ನಲ್ಲಿ ಮಂಡಿಸಿದ ಅಂಕೆ-ಅಂಶಗಳು ಸಾಮ್ರಾಜ್ಯಶಾಹಿಯ ರುದ್ರನರ್ತನಕ್ಕೆ ಸಾಕ್ಷಿಯಾಗಿ, ಜಗತ್ತನ್ನು ಕಣ್ಣು ತೆರೆಸುವಂತಿದ್ದವು. ಮಾತ್ರವಲ್ಲ ಜಗತ್ತಿನ ಯುವಜನತೆ ಸಾಮ್ರಾಜ್ಯಶಾಹಿ ಕುರಿತು ಜಾಗೃತಿವಹಿಸಲು ಪ್ರೇರಣೆಯಾಯಿತು.

ಇವರೊಂದಿಗೆ, ಅಂತರ್ರಾಷ್ಟ್ರೀಯ ವಿದ್ಯಾರ್ಥಿ-ಯುವಜನರ ಹಕ್ಕುಗಳು ಮತ್ತು ಚಳುವಳಿ ಕುರಿತಂತೆ ಮತ್ತು ಪಶ್ಚಿಮ ಸಹರಾ, ಸೂಡಾನ್, ಗ್ರೇಟ್ ಲ್ಯಾಕ್, ಸೋಮಾಲಿಯಾ, ಲ್ಯಾಟಿನ್ ಅಮೆರಿಕಾ ದೇಶಗಳ ಪ್ರತಿನಿಧಿ ಗಳೊಂದಿಗೆ ಸೌಹಾರ್ದತಾ ಸಭೆಗಳನ್ನು ಆಯೋಜಿಸಲಾಗಿತ್ತು. ಇದಲ್ಲದೆ ಬೂತಾನ್. ಬರ್ಮಾ, ಕೊರಿಯಾ, ತೈಮೂರ್ ದೇಶಗಳ ಪ್ರತಿನಿಧಿಗಳೊಂದಿಗೆ ಚರ್ಚೆಗಳು ನಡೆದವು.

ಕರ್ನಾಟಕದಿಂದ ಭಾಗವಹಿಸಿದ್ದ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಎಸ್ಎಫ್ಐ ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್, ಪತ್ರಕರ್ತ ವಿಭಾಗದಿಂದ ಡಿವೈಎಫ್ಐ ರಾಜ್ಯಉಪಾಧ್ಯಕ್ಷ ಕೃಷ್ಣಪ್ಪ ಕೊಂಜಾಡಿಯವರು ವಿವಿಧ ಕೇಂದ್ರಗಳಲ್ಲಿ ನಡೆದ ಚರ್ಚೆಗಳಲ್ಲಿ ಭಾಗವಹಿಸಿದ್ದರು. ಅಲ್ಲದೆ ಬಿಡುವಿನ ಮಧ್ಯದಲ್ಲೇ ಅಮೆರಿಕಾ, ಬೊಲಿವಿಯಾ, ಕ್ಯೂಬಾ, ಪ್ಯಾಲಿಸ್ಟೇನ್, ಉಕ್ರೇನ್, ಶ್ರೀಲಂಕಾ, ನೇಪಾಳ, ಈಜಿಪ್ಟ್, ಬ್ರೆಜಿಲ್, ಗ್ರೀಸ್, ಅಲ್ಜೀರಿಯಾ ಮುಂತಾದ ದೇಶಗಳ ಪ್ರತಿನಿಧಿಗಳೊಂದಿಗೆ ಅಲ್ಲಿ ಆರ್ಥಿಕ, ರಾಜಕೀಯ ಮತ್ತು ವಿಶ್ವವಾಣಿಜ್ಯ ಸಂಘಟನೆ, ವಿಶ್ವಬ್ಯಾಂಕ್ ಮತ್ತಿತರ ಸಂಸ್ಥೆಗಳ ಒತ್ತಡದ ಪರಿಣಾಮಗಳು ಕುರಿತಂತೆ ಚರ್ಚೆ ನಡೆಸಲಾಯಿತು.

ಮನಸೂರೆಗೊಂಡ ಸಾಂಸ್ಕೃತಿಕ ಸಂಜೆಗಳು

ಉತ್ಸವದ ಒಂದೊಂದು ರಾತ್ರಿಯನ್ನು ಒಂದೊಂದು ಖಂಡದ ಅಥವಾ ದೇಶದ ಸಾಂಸ್ಕೃತಿಕ ಸಂಜೆಯನ್ನಾಗಿ ಘೋಷಿಸಲಾಗಿತ್ತು. ಮೊದಲನೆ ದಿನ ಆಫ್ರಿಕಾಕ್ಕೆ ಮೀಸಲಾಗಿದ್ದರೆ ನಂತರ ಅಮೆರಿಕನ್ ನೈಟ್, ಏಷ್ಯಾ-ಫೆಸಿಫಿಕ್, ಯೂರೋಪ್, ಮಧ್ಯಪ್ರಾಚ್ಯ, ಅಲ್ಜೀರಿಯಾ ನೈಟ್ಸ್ ಕ್ಲಬ್‌ಗಳು ಪ್ರಾರಂಭಗೊಂಡವು. ನಾವು ಉಳಿದುಕೊಂಡಿದ್ದ ಪ್ರದೇಶದಲ್ಲಿ ಆಗಸ್ಟ್ 10 ರಂದು ಏಷ್ಯಾ-ಫೆಸಿಫಿಕ್ ಕ್ಲಬ್‌ನ ಉದ್ಘಾಟನೆಯನ್ನು ಡಿವೈಎಫ್ಐ ಮಾಜಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಪಶ್ಚಿಮ ಬಂಗಾಳ ಸರ್ಕಾರದ ಯುವಜನ ಸಚಿವರಾದ ಕಾಂ. ಮಹಮ್ಮದ್ ಸಲೀಂ ನೆರವೇರಿಸಿದರು. ಕಾರ್ಯಕ್ರಮಗಳು ನಡೆದ ಪ್ರತಿನಿಧಿ ಸಮೂಹವನ್ನು ಮನಸೂರೆಗೊಳಿಸುವಲ್ಲಿ ಯಶಸ್ವಿಗೊಂಡು ಅಲ್ಲಿನ ಸಂಸ್ಕೃತಿ, ಸಾಹಿತ್ಯ, ಕಲೆಗಳ ವಿನಿಮಯಕ್ಕೂ ಅವಕಾಶ ನೀಡಿತು. ಇದರೊಂದಿಗೆ ನೇಪಾಳ, ಭಾರತದ ಪ್ರತಿನಿಧಿಗಳು ಕೂಡಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಕರ್ಷಕವಾಗಿ ನೀಡಿದರು.

ಉತ್ಸವದ ಘೋಷಣೆ:

'ಶಾಂತಿ, ಸೌಹಾರ್ದತೆ, ಅಭಿವೃದ್ಧಿಗಾಗಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಜಾಗತೀಕರಿಸೋಣ ಎನ್ನುವ ಸ್ಫೂರ್ತಿದಾಯಕ ಘೋಷಣೆಯೊಂದಿಗೆ ಇದೇ ಪ್ರಥಮ ಬಾರಿಗೆ ಆಫ್ರಿಕಾ ಖಂಡದಲ್ಲಿ ಜರುಗಿದ 15ನೇ ವಿಶ್ವ ಯುವಜನೋತ್ಸವದಲ್ಲಿ ಜಗತ್ತಿನ ನೂರಾರು ದೇಶಗಳ ಹಾಗೂ ಸುಮಾರು 500 ಕ್ಕೂ ಹೆಚ್ಚು ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದ ಈ ಉತ್ಸವವು ಅಂತಿಮವಾಗಿ 'ಹೊಸಶತಮಾನವು ಹೊಸ ವಿಜಯಗಳ ಕಾಲವಾಗುತ್ತದೆ' ಎಂಬ ಮಹತ್ತರ ಮತ್ತು ಸ್ಫೂರ್ತಿದಾಯಕ ಘೋಷಣೆಯ ಕರೆಯೊಂದಿಗೆ ಮುಕ್ತಾಯವಾಯಿತು.

ಅಲ್ಜೀರಿಯಾದಲ್ಲಿ ಭಾರತದ

ಸ್ವಾತಂತ್ರ್ಯೋತ್ಸವ

ಉತ್ಸವ ನಡೆಯುವ ಸಂದರ್ಭದಲ್ಲೇ ಆಗಸ್ಟ್-15 ಸ್ವಾತಂತ್ರ್ಯ ದಿನ ಬಂದಿದ್ದು ಮತ್ತು ಸ್ವಾತಂತ್ರ್ಯ ದಿನವನ್ನು ಅಲ್ಜೀರಿಯಾದ ನೆಲದಲ್ಲಿ ಆಚರಿಸುವಂತಹ ಸಂತಸ ಭಾರತೀಯ ಪ್ರತಿನಿಧಿಗಳದ್ದಾಗಿತ್ತು. (ಬಾಂಗ್ಲಾ ಸ್ವಾತಂತ್ರ್ಯ ದಿನ ಕೂಡ ಅಂದೇ ಎಂದು ಬಾಂಗ್ಲಾ ಪ್ರತಿನಿಧಿಗಳು 14 ರ ರಾತ್ರಿ ಕಾರ್ಯಕ್ರಮ ನೀಡಿದರು) ಆಗಸ್ಟ 15 ರ ಬೆಳಿಗ್ಗೆ ಯೂನಿವರ್ಸಿಟಿ ವಸತಿ ನಿಲಯದಲ್ಲಿ ಬೆಳಿಗ್ಗೆ 8 ಗಂಟೆಗೆ ಸರಿಯಾಗಿ ಭಾರತದ ಪ್ರತಿನಿಧಿಗಳು ಇತರೆ ವಿವಿಧ ದೇಶಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಪಶ್ಚಿಮ ಬಂಗಾಳದ ಸಚಿವರಾದ ಕಾಂ. ಅಮೀತ್ ಕುಮಾರ್ ಮುಖರ್ಜಿ ರಾಷ್ಟ್ರಧ್ವಜ ಹಾರಿಸಿದರು. ರಾಷ್ಟ್ರಗೀತೆಯ ನಂತರ ತೆಲುಗುದೇಶಂ ಯುವಜನ ಮಂತ್ರಿ, ಕೃಷ್ಣಯಾದವ್, ಎಸ್ಎಫ್ಐ ಪ್ರ.ಕಾರ್ಯದರ್ಶಿ ಕಾಂ. ಶಮಿಕ್ ಲಹರಿ ಮಾತನಾಡಿದರು.

ಮತ್ತೊಂದು ಕಾರ್ಯಕ್ರಮ.

ಅಲ್ಜೀರಿಯಾದಲ್ಲಿರುವ ಭಾರತದ ರಾಯಭಾರಿ ಕಚೇರಿಯಲ್ಲಿ ನೆರವೇರಿಸಲಾಯಿತು.

ಕಾಂ. ಮಹ್ಮದ್ ಸಲೀಂ ಸೇರಿದಂತೆ ಭಾರತದ ಎಲ್ಲಾ ಪ್ರತಿನಿಧಿಗಳು ಭಾಗವಹಿಸಿದರು. ಅಲ್ಜೀರಿಯಾದಲ್ಲಿರುವ ಭಾರತೀಯ ಪ್ರಜೆಗಳೊಂದಿಗೆ (ಕರ್ನಾಟಕದ ಬೆಂಗಳೂರು, ಹುಬ್ಬಳಿ, ಬೀದರ್‌ನ ಕುಟುಂಬಗಳು) ಭೇಟಿ ಮಾಡಿ ಚರ್ಚಿಸಲು ಸಾಧ್ಯವಾಯಿತು.



'ಚೆ' ಎಂದರೆ ಅದೆಂಥಾ ಹುಚ್ಚು!

ಅನ್ಯಾಯದ ವಿರುದ್ಧ ಹೋರಾಡುವ ಸಹಸ್ರಾರು ಸಂಗಾತಿಗಳು ಒಂದೆಡೆ ಸೇರಿರುವಾಗ 'ಚೆ' ಇರದೇ ಇರಲು ಸಾಧ್ಯವೇ?

ಸೌಹಾರ್ದತಾ ಬಜಾರ್(Salidarity Bazar) ನ ಒಳಹೊಕ್ಕರೆ ಗೊತ್ತಾದೀತು!. ಬೆಳಿಗ್ಗೆ ನೋಡಿ ಆಮೇಲೆ ಕೊಂಡು ಕೊಳ್ಳೋಣವೆಂದು ಬಂದಿದ್ದ 'ಚೆ' ನ ಕೀ ಚೈನ್, ಟಿ ಶರ್ಟ್, ಪೋಸ್ಟರ್ಸ್, ಸ್ಟಿಕರ್ಸ್, ಪುಸ್ತಕಗಳು ಎಲ್ಲಾ ಮಾಯ! ಅದೆಂಥಾ ಹುಚ್ಚು! ಅದರಲ್ಲೂ ಇದೇ ಪ್ರಥಮ ಬಾರಿಗೆ 'ಅರಬ್ಬರಿಗೆಲ್ಲಾ' ಹುಚ್ಚು ಹಿಡಿಸಿದ್ದ 'ಚೆ'.



'ಫಿಡೆಲ್ ಹುಟ್ಟುಹಬ್ಬ ಆಚರಿಸಿದ ಉತ್ಸವ'

ಆಗಸ್ಟ್ 14 ಕ್ಯೂಬಾ ಕ್ರಾಂತಿಯ ನಾಯಕ, ಅಧ್ಯಕ್ಷರಾದ ಫಿಡೆಲ್ ಕ್ಯಾಸ್ಟ್ರೋ ಜನ್ಮದಿನವನ್ನು ಉತ್ಸವದಲ್ಲಿ ಆಚರಿಸಲಾಯಿತು. ಸಾಮ್ರಾಜ್ಯಶಾಹಿ ಅಮೆರಿಕಕ್ಕೆ ಸಿಂಹಸ್ವಪ್ನವಾಗಿರುವ ಫಿಡೆಲ್ ಚಿರಾಯುವಾಗಲಿ ಎಂಬ ಘೋಷಣೆಗಳು ಮೊಳಗಿದವು ಮಾತ್ರವಲ್ಲ ಚರ್ಚೆಯಲ್ಲಿ ಭಾಗವಹಿಸಿದ ಪ್ರತಿಯೊಂದು ದೇಶದ ಪ್ರತಿನಿಧಿಯೂ ಆ ದಿನ ಮಾತು ಪ್ರಾರಂಭಿಸುತ್ತಿದ್ದದ್ದು ಕ್ಯಾಸ್ಟ್ರೋಗೆ ಶುಭಾಷಯ ತಿಳಿಸುವುದರ ಮೂಲಕ.


ಕೋಟಿ, ಕೋಟಿ ಹೃದಯದಲ್ಲಿ ಸ್ಫೂರ್ತಿಯ ಸೆಲೆಯಾಗಿರುವ ಫಿಡೆಲ್ ಕ್ಯಾಸ್ಟ್ರೋಗೆ ಲಾಲ್ ಸಲಾಂ!

..........ಬಿತ್ತಿದ್ದನ್ನೇ ಬೆಳೆದುಕೊಂಡು ಅಮೆರಿಕಾ

ಪುಟ 7 ರಿಂದ

ಆಗಿ ಅಮೆರಿಕದ ಉದ್ಧಟತನ-ಸಾಮಾನ್ಯ ಅರಬರನ್ನು ಮುಸ್ಲಿಮರನ್ನು ರೊಚ್ಚಿಗೆಬ್ಬಿಸಿದೆ. ಇದು ಜೆಹಾದಿ ಗುಂಪುಗಳಿಗು ತಟ್ಟಿದೆ. ಸಾಮಾನ್ಯ ಪ್ರಜಾಸತ್ತಾತ್ಮಕ, ಸಾಮೂಹಿಕ ಸಂಘಟನೆ ಆಧಾರಿತ ಪ್ರತಿಭಟನಾ ಚಳುವಳಿಯ ಸಾಧ್ಯತೆಗಳ ಸೀಮಿತ ಯಶಸ್ಸು, ಹತಾಶೆ ಭಯೋತ್ಪಾದಕತೆಗೆ ಬೆಂಬಲದತ್ತ ತಿರುಗಿದೆ. ಲಾಡೆನ್‌ರ ಅಲ್-ಕಾಯಿದಾ ಮತ್ತು ಇತರ ಹಲವು ಗುಂಪುಗಳು ಅಮೆರಿಕಾದಿಂದ ಪಡೆದ ಸೋವಿಯತ್ ವಿರೋಧಿ ಭಯೋತ್ಪಾದನೆಗೆ ಪಡೆದ ತರಬೇತಿಯನ್ನು ಅವರತ್ತ ತಿರುಗಿಸಲು ಇದು ಕಾರಣವಾಗಿದೆ. ಅಮೆರಿಕದ ರಾಯಭಾರ ಕಛೇರಿಗಳ ಮೇಲೆ ಧಾಳಿಗಳು 1995 ರಲ್ಲಿ ವರ್ಲ್ಡ್ ಟ್ರೇಡ್ ಸೆಂಟರ್‌ನಲ್ಲಿ ನೆಲಮಾಳಿಗೆಯಲ್ಲಿ ಬಾಂಬ್ ಮುಂತಾದವು ಇಂತಹ ಹತಾಶೆಯ ಭಯೋತ್ಪಾದಕ ಕ್ರಮಗಳು, ಇವೆಲ್ಲವೂ ಲಾಡೆನ್‌ರ ಕಾಯಿದಾದ ಕೃತ್ಯಗಳು ಅಮೆರಿಕ ಹೇಳುತ್ತವೆ. ಆದರೆ ಯಾವುದೇ ಪುರಾವೆ ಯಾವತ್ತೂ ಅಮೆರಿಕ ಒದಗಿಸಿಲ್ಲ.

ಹೀಗೆ ಈ ಅಮೆರಿಕನ್ ಸರ್ಕಾರದ ಪ್ರಕಾರ ಅಂತರ್ರಾಷ್ಟ್ರೀಯ ಭಯೋತ್ಪಾದಕತೆಯ ತ್ರಿವಳಿಗಳು ಆಗಿರುವ ಲಾಡೆನ್‌ರ 'ಅಲ್ -ಕಾಯಿದಾ' 'ಇಸ್ಲಾಮಿಕ್ ಜೆಹಾದಿ' ಗಳ ಅಂತರ್ರಾಷ್ಟ್ರೀಯ ಜಾಲ, ಮತ್ತು ಅಫಘಾನಿಸ್ತಾನದ ತಾಲಿಬಾನ್ ಸರ್ಕಾರ - ಇವು ಮೂರು ಸಿಐಎ-ಐಎಸ್‌ಐ ಯ ಅಕ್ರಮ ಸಂತಾನ ಎನ್ನುವುದು ಸ್ಪಷ್ಟ. ಭಯೋತ್ಪಾದನೆಯ ವಿರುದ್ಧ ಯುದ್ಧದ ಮಾತನಾಡುವ ಅಮೆರಿಕ ಜಗತ್ತಿನಾದ್ಯಂತ ತನ್ನ ವಿರೋಧಿಗಳ ವಿರುದ್ಧ ಎಲ್ಲೆಡೆಗೂ ಭಯೋತ್ಪಾದಕತೆಯ ಅಸ್ತ್ರ ಬಳಸಿತ್ತು. ಅದು ತಮ್ಮ ಅಂಗಳದಲ್ಲಿ ಬಂದಾಗ ಅರಚಾಡುತ್ತಿದೆ ಎಂಬುದು ಸ್ಪಷ್ಟ. ಅದೂ ತಮ್ಮ ದೇಶದ ಜನತೆಯಿಂದ ಈ ಸತ್ಯವನ್ನು ಮುಚ್ಚಿಟ್ಟು ಇದನ್ನು ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸುವುದು ಇದರ ಉದ್ದೇಶ.



ಯುದ್ಧ ಯಾತಕ್ಕಾಗಿ?
ಭಯೋತ್ಪಾದನೆ ವಿರುದ್ಧ ಅಲ್ಲ!
ಅಮೆರಿಕದ ಆಳುವ ವರ್ಗದ ರಕ್ಷಣೆಗಾಗಿ ಯುದ್ಧ

ಅಮೆರಿಕದಲ್ಲಿ ನಡೆದ ಭೀಕರ ಭಯೋತ್ಪಾದಕ ಕೃತ್ಯಗಳು ಅದಕ್ಕೆ ಮೂಲ ಕಾರಣವಾದ ಮೂಲಭೂತ ಸಮಸ್ಯೆ ಏನು ಎಂದು ಹುಡುಕುವ ಬದಲು, ತನ್ನ ಬೇಳೆ ಬೇಯಿಸಿಕೊಳ್ಳಲು ಬಳಸಲು ಪ್ರಯತ್ನಿಸುತ್ತಿದೆ. ಅಮೆರಿಕದ ಆಳುವ ವರ್ಗ ಮತ್ತು ಸಾಮ್ರಾಜ್ಯಶಾಹಿ ಈ ಘಟನೆಯನ್ನು ಬಳಸಿ ತನ್ನ 'ಅಜೆಂಡಾ'ವನ್ನು ಜಗತ್ತನ ಮೇಲೆ ಹೊರಿಸಲು ಪ್ರಯತ್ನಿಸುತ್ತಿದೆ. ಅಮೆರಿಕದ ಅಧ್ಯಕ್ಷ ಬುಶ್ ಘಟನೆಯ ಕೆಲವೆ ಗಂಟೆಗಳಲ್ಲೇ ಅಫಘಾನಿಸ್ತಾನದ ಮೇಲೆ ಯುದ್ಧ ಸಾರಿದರು. ಆಮೇಲೆ ಪ್ರತಿದಿನವೂ ಯುದ್ಧವನ್ನು ವಿಸ್ತಾರಗೊಳಿಸುತ್ತಿದ್ದಾರೆ. ನ್ಯೂಯಾರ್ಕ್ -ವಾಶಿಂಗ್‌ಟನ್‌ನಲ್ಲಿ ಭಯೋತ್ಪಾದನೆಗೆ ಕಾರಣವಾದ ಗುಂಪು ಅದು ಇರುವ ದೇಶ, ಅದನ್ನೇ 'ತಾಳಿಕೊಂಡಿರುವ' ದೇಶಗಳು, ಇಸ್ಲಾಮಿಕ್ ಗುಂಪುಗಳಿರುವ ದೇಶ, ಇರಾಕ್-ಹೀಗೆ ಬುಶ್‌ರ ಯುದ್ಧ ವಿಸ್ತಾರಗೊಳ್ಳುತ್ತಿದೆ. ಬುಶ್‌ರ 'ಭಯೋತ್ಪಾದನೆ'ಯ ಭಾಷೆ ಒಪ್ಪಿಕೊಳ್ಳುವುದಾದರೆ ಯಾವುದೇ ದೇಶವನ್ನು ಅಮೆರಿಕ ಈಗ ಗುರಿ ಮಾಡಬಹುದು. ಈಗಾಗಲೇ ನೋಡಿದ ಹಾಗೆ (ಒಸಮಾ ಬಿನ್ ಲಾಡೆನ್ ಯಾರೀತ? ನೋಡಿ) ಅಮೆರಿಕದ ಸರ್ಕಾರವೇ ಹೇಳುತ್ತಿರುವ -ಲಾಡೆನ್‌ರ ಅಲ್-ಕಾಯಿದ ಗುಂಪು, 'ಜೆಹಾದಿ' ಅಂತರ್ರಾಷ್ಟ್ರೀಯ ಜಾಲ, ಅಫಘಾನಿಸ್ತಾ ತಾಲಿಬಾನ್ ಸರ್ಕಾರ - ಇವು ಮೂರು 'ಭಯೋತ್ಪಾದಕ ತ್ರಿವಳಿ'ಗಳು. ಸಿಐಎಯ ಶಿಶುಗಳು, ಈ ಭಯೋತ್ಪಾದಕ ತ್ರಿವಳಿಗಳನ್ನು ಹುಟ್ಟು ಹಾಕಿದ ಅಮೆರಿಕ 'ಭಯೋತ್ಪಾದಕತೆ' ವಿರುದ್ಧ ಯುದ್ಧ ಸಾರುತ್ತಿದೆ ಎಂದರೆ ನಂಬುವುದು ಹೇಗೆ? ರಶ್ಯಾ, ಯುಗೋಸ್ಲಾವಿಯ, ಇಂಡಿಯಾದ ಸರ್ಕಾರಗಳ ವಿರುದ್ಧ ಭಯೋತ್ಪಾದನೆಗೆ ಪ್ರತ್ಯಕ್ಷ/ಪರೋಕ್ಷ ಬೆಂಬಲ ನೀಡಿದ ಅಮೆರಿಕದ ಪ್ರಾಮಾಣಿಕತೆಯನ್ನು ಯಾರೂ ನಂಬುತ್ತಿಲ್ಲ. ಅಮೆರಿಕ ತನ್ನ ಈ ಯದ್ಧದಲ್ಲಿ ಅದರ ಮಿಲಿಟರಿ ಕೂಟ 'ನಾಟೋ'ವನ್ನು ಸೇರಿಸಿಕೊಂಡಿದೆ.

ಯುದ್ಧಕ್ಕೊಂದು ಹೊಸನೆಪ

90 ರ ದಶಕದಲ್ಲಿ ಇರಾಕ್ ಆಗಲಿ, ಯುಗೋಸ್ಲಾವಿಯಾ ಆಗಲಿ, ಸೂಡನ್ ಆಗಲಿ ಯುದ್ಧ ಹೂಡಿದ ಅಮೆರಿಕಾ ಆಮೇಲೆ ಗೊತ್ತಾದ ಹಾಗೆ ಯಾವುದೇ ಕಾರಣದಿಂದ ಆ ಯುದ್ಧ ಹೂಡಲಿಲ್ಲ. ತಾನು ಸೂಪರ್ ಪವರ್ ಬೇರೆ ಬೇರೆ ಜಗತ್ತಿನ ಪ್ರದೇಶಗಳಲ್ಲಿ ತನ್ನ ಸೈನ್ಯ ನೆಲೆಸಲು ಅದಕ್ಕೆ ಬೇಕಾಗಿರುವುದು ನೆಪ ಮಾತ್ರ. ಈಗಲೂ ಹಾಗೆ ಏಶ್ಯಾದಲ್ಲಿ ಚೀನಾ, ರಶ್ಯಾ, ಭಾರತಕ್ಕೆ ಮತ್ತು ಇಡೀ ಮಧ್ಯ-ಏಶ್ಯಾಕ್ಕೆ ಹತ್ತಿರವಾಗಿ ಪಡೆಗಳನ್ನು ನೆಲೆಸಲು ಇದು ಉತ್ತಮ ಅವಕಾಶ. ಅದನ್ನು ಅಮೆರಿಕ ಬಳಸಿಕೊಳ್ಳುತ್ತಿದೆ. 90 ರ ದಶಕದ ಘಟನೆಗಳನ್ನು ನೋಡಿದರೆ ಅಮೆರಿಕನ್ ಸರ್ಕಾರವೇ ಜಗತ್ತಿನ ಅತ್ಯಂತ ದೊಡ್ಡ ಭಯೋತ್ಪಾದಕ ಸಂಘಟನೆ. ಎಲ್ಲಾ ಕಡೆ ಅಮೆರಿಕನ್-ನಾಟೋ ಪಡೆಗಳನ್ನು ನೆಲೆಸುವ ಉದ್ದೇಶ, ಮಧ್ಯೆ-ಏಶ್ಯಾದಲ್ಲಿರುವ ತೈಲ ಸಂಪತ್ತಿನ ಮೇಲೆ ಸಾಮ್ರಾಜ್ಯಶಾಹಿ ಹಿಡಿತ ಉಳಿಸಿಕೊಳ್ಳುವ, ಅದನ್ನು ವಿಸ್ತರಿಸುವುದು. ಇದಲ್ಲದೆ ಈ ಪ್ರದೇಶಗಳಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಅಲೆಗಳಾಗಿ ಏಳುತ್ತಿರುವ ಭಾರಿ ಪ್ರತಿಭಟನೆಯನ್ನು ಮಟ್ಟ ಹಾಕುವುದು ಇದರ ಉದ್ದೇಶ, ಯುದ್ಧ ಈ ಪ್ರತಿಭಟನೆಯಿಂದ, ದೈನಂದಿನ ಆರ್ಥಿಕ ವಿಷಯಗಳಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಸಹಾಯವಾಗುತ್ತದೆ.

ಆರ್ಥಿಕ ಕುಸಿತದಿಂದ ಗಮನ ತಿರುಗಿಸಲು ಯುದ್ಧ

ಇದಲ್ಲದೆ ಅಮೆರಿಕದಲ್ಲಿ ಕೆಲವು ತಿಂಗಳುಗಳಿಂದ ಆರಂಭವಾದ ಆರ್ಥಿಕ ಹಿಂಜರಿತ ಕುಸಿತದತ್ತ ಹೋಗುತ್ತಿತ್ತು. ಏರುತ್ತಿರುವ ನಿರುದ್ಯೋಗ ಆ ದೇಶದಲ್ಲಿ ತೀವ್ರ ಅತೃಪ್ತಿ ಬಂಡವಾಳ ಶಾಹಿ ವಿರೋಧಿ ಚಳುವಳಿಗೆ ಪುಟಕೊಟ್ಟಿತ್ತು. ಇದಕ್ಕೆ ಅಮೆರಿಕದ ಆಳುವರ್ಗದ ಸರ್ಕಾರದ ಬಳಿ ಯಾವುದೇ ಪರಿಹಾರವಿಲ್ಲ. ಅಂತರ್ರಾಷ್ಟ್ರೀಯ ವಾಗಿಯೂ ಅಮೆರಿಕದ ಸರ್ಕಾರ ಒಂಟಿಯಾಗುತ್ತಾ ನಡೆದಿತ್ತು. ಕ್ಯೋಟೊ, ಪರಿಸರ ಒಪ್ಪಂದ, ದರ್ಬನ್‌ನ ವರ್ಣಬೇಧ-ವಿರೋಧಿ ಸಮಾವೇಶದಲ್ಲಿ ಅಮೆರಿಕನ್ ಸರ್ಕಾರ ಒಂಟಿಯಾಗಿತ್ತು. ಇವೆಲ್ಲದಕ್ಕೆ 'ಪರಿಹಾರ' ಈ ಹೊಸ ಯುದ್ಧ. ಅಮೆರಿಕದ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕಲು, 'ಪೋಲೀಸ್ ಸರ್ಕಾರ' ಸ್ಥಾಪಿಸಲು ಅಮೆರಿಕದ ಸರ್ಕಾರಕ್ಕೆ ಇದು ಒಳ್ಳೆಯ ಅವಕಾಶ.

ಈಗಾಗಲೇ ಕುಸಿಯುತ್ತಿರುವ ಅಮೆರಿಕದ ಮತ್ತು ಅಂತರ್ರಾಷ್ಟ್ರೀಯ ಬಂಡವಾಳಶಾಹಿ ಆರ್ಥಿಕ - ಈ ಘಟನೆಗಳಿಂದ ಇನ್ನಷ್ಟು ಕುಸಿದಿದೆ. ಒಂದು ವಾರದ ನಂತರ ಆರಂಭವಾದ ನ್ಯೂಯಾರ್ಕ್ ಶೇರು ಮಾರಾಟ ಕುಸಿದಿದೆ. ವಿಮಾನ ಯಾನ ಕಂಪನಿಗಳು, ವಿಮಾನ ತಯಾರಿಸುವ ಕಂಪನಿಗಳು, ಇನ್ಸೂರೆನ್ಸ್ ಕಂಪನಿಗಳ ಶೇರು ಕುಸಿದಿದೆ. ಒಂದು-ಒಂದೂವರೆ ಲಕ್ಷ ಜನ ಇದರಿಂದ ನಿರುದ್ಯೋಗಿಗಳಾಗಲಿದ್ದಾರೆ.



80 ಕ್ಕೂ ಹೆಚ್ಚು ಬಾರಿ ಸಿಐಎ ಭಯೋತ್ಪಾದಕ ಕೊಲೆ ಸಂಚುಗಳಿಂದ ಪಾರಾದ ಫಿಡೆಲ್ ಕ್ಯಾಸ್ಟ್ರೋ


ಅಮೆರಿಕ ಅಫಘಾನಿಸ್ತಾನದ ವಿರುದ್ಧ ಯುದ್ಧ ಆರಂಭಿಸಿದರೆ ಎಲ್ಲಾ ದೇಶಗಳ ಜನರ ಮೇಲೆ ನೇರ ಪರಿಣಾಮ ಬೀಳಲಿದೆ. ತೈಲ ಬೆಲೆಗಳು ಏರುತ್ತವೆ. ಅಂತರ್ರಾಷ್ಟ್ರೀಯ ವ್ಯಾಪಾರದಲ್ಲಿ ಭಾರಿ ಏರುಪೇರಾಗಲಿದೆ. ಇದು ಎಲ್ಲಾ ದೇಶಗಳ ಬಡವರ ಸ್ಥಿತಿಯನ್ನು ದುರ್ಭರಗೊಳಿಸುತ್ತಿದೆ.

ಅಮೆರಿಕದ ಯುದ್ಧಕ್ಕೆ ಬೆಂಬಲ ಬೇಡ

ಇಂತಹ ಯುದ್ಧಕ್ಕೆ ಭಾರತ ಬೆಂಬಲ ಕೊಡಬಾರದು. ನಮ್ಮ ದೇಶದಲ್ಲೇ ಕಾಶ್ಮೀರದಲ್ಲಿ ಭಯೋತ್ಪಾದಕ ಗುಂಪುಗಳಿಗೆ ನೇರ / ಪರೋಕ್ಷ ಬೆಂಬಲ ಕೊಟ್ಟು (ಪಾಕಿಸ್ತಾನದ ಮೂಲಕ) ಅಮೆರಿಕಕ್ಕೆ ಮಿಲಿಟರಿ ಸಹಕಾರ ಕೊಡಬಾರದು. ಅಮೆರಿಕದ ಈ ಯುದ್ಧ ಇನ್ನಷ್ಟು ಭಯೋತ್ಪಾದಕರನ್ನು ಹುಟ್ಟುಹಾಕುತ್ತದೆ. ಭಯೋತ್ಪಾದನೆ ವಿರುದ್ಧ ಯಾವ ಪರಿಣಾಮವೂ ಆಗುವುದಿಲ್ಲ.

ಏಕಪಕ್ಷೀಯವಾಗಿ ಯುದ್ಧ ಸಾರುವ ಅಧಿಕಾರ ಅಮೆರಿಕದ ಸರ್ಕಾರಕ್ಕಿಲ್ಲ. ವಿಶ್ವಸಂಸ್ಥೆ ಮತ್ತಿತರ ಅಂತರ್ರಾಷ್ಟ್ರೀಯ ಸಂಘಟನೆಗಳ ಮೂಲಕ ಭಯೋತ್ಪಾದನೆ ವಿರುದ್ಧ ಕ್ರಮ ಜರುಗಿಸುವವರೆಗೂ ಅಮೆರಿಕದಲ್ಲಿ ನಡೆದ ಭಯೋತ್ಪಾದನೆಗೆ ಕಾರಣರಾದವರು ಯಾರು ಎಂದು ತನಿಖೆ ನಡೆಯ ಬೇಕು. ಇದು ಇಡೀ ಜಗತ್ತಿನ ಜನತೆಯ ಒತ್ತಾಯ.

ಭಯೋತ್ಪಾದನೆ ಯಾವುದೇ ಸಮಸ್ಯೆ ಪರಿಹರಿಸುವುದಿಲ್ಲ ಎಂದು ಜನರಿಗೆ ಗೊತ್ತು. ಭಯೋತ್ಪಾದನೆ ಯಾವುದೇ ಸರ್ಕಾರ, ದುಷ್ಟಸಂಘಟನೆಗೆ ಮಣಿಸುವುದಿಲ್ಲ. ಭಯೋತ್ಪಾದನೆ ದುಷ್ಟ ಸಂಘಟನೆಗಳನ್ನು ಬಲಪಡಿಸುತ್ತದೆ. ಅಮೆರಿಕನ್ ಸರ್ಕಾರವಾಗಲಿ, ಇತರ ಯಾವುದೇ ದುಷ್ಟ ಸಂಘಟನೆಗಳಾಗಲಿ ಅವುಗಳನ್ನು ಮಣಿಸಲು ಜನತೆಯ ಬೆಂಬಲ ಪಡೆದ ಸಾಮೂಹಿಕ ಹೋರಾಟ, ಪ್ರಜ್ಞೆ ಅಗತ್ಯ - ಎಂಬ ಸಾರ್ವಕಾಲಿಕ ಸತ್ಯವನ್ನು ಈ ಘಟನಾವಳಿ ಪುನಃ ಸ್ಪಷ್ಟಪಡಿಸಿದೆ.



ಅಪಾಯಕಾರಿ ಬಿಜೆಪಿ ನಿಲುವು

ಇಂತಹ ಕ್ಲಿಷ್ಟಕರ ಸಂದರ್ಭದಲ್ಲಿ ಬಿಜೆಪಿ ನಿಲುವು ಅಪಹಾಸ್ಯಕ್ಕೆ ಈಡು ಮಾಡುತ್ತಿದೆ. ಅಲಿಪ್ತ ಧೋರಣೆಯಿಂದ ದೂರ ಸರಿದು ಅಮೆರಿಕಾ ಪರ ಮುತ್ತಿದ್ದ ಬಿಜೆಪಿ ನೇತೃತ್ವದ ಸರಕಾರ ಡೊಗ್ಗು ಸಲಾಮು ಹಾಕುತ್ತಿದೆ. ಅಮೆರಿಕಾ ಭಾರತದ ಸ್ಥಳಾವಕಾಶ ಕೇಳಿರಲಿಲ್ಲ. ಯುದ್ಧ ಮಾಡಲು ನೆಲೆ ನೀಡಬೇಕೆಂದು ಪಾಕಿಸ್ತಾನವನ್ನು ಕೇಳಿ ಪಡೆದು ಕೊಂಡಿತ್ತು. ವಾಜಪೇಯಿ, ಅಡ್ವಾಣಿ ಕೂಟ, ಅಮೆರಿಕಾ ಸಹಾಯ ಕೇಳಿದ್ದರೆ ಕೊಡಬಹುದಾಗಿತ್ತು ಎಂದು ನಿರ್ಲಜ್ಜೆಯ ಹೇಳಿಕೆ ನೀಡುತ್ತಿದೆ. ಪ್ರಧಾನಿಯವರೇ ಕರೆದ ಸರ್ವಪಕ್ಷಗಳ ಸಭೆಯಲ್ಲಿ, ದುಡುಕಬಾರದು ಎಂದು ಮುನ್ನೆಚ್ಚರಿಕೆ ನೀಡಲಾಗಿತ್ತು. ಆದರೆ ಸಂಘ ಪರಿವಾರಕ್ಕೆ ಎಲ್ಲಾ ಭಯೋತ್ಪಾದನೆಗಳ ಹಿಂದೆ ಕಾಣುವುದು ಆರಿಸಿಕೊಳ್ಳುವುದು ಮುಸ್ಲಿಂ ವಿರೋಧಿ ಧೋರಣೆ ಮಾತ್ರ.

ಅಂತೆಯೇ ಸೆಪ್ಟೆಂಬರ್ 18ರಂದು ದೇಶದಾದ್ಯಂತ ಭಯೋತ್ಪಾದಕ ವಿರೋಧಿ ದಿನವನ್ನು ಆಚರಿಸಲಾಯ್ತು. ಆ ಸಂದರ್ಭದಲ್ಲಿ ಪ್ರಮುಖ ದಿನ ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹೀರಾತುಗಳನ್ನು ನೀಡಲಾಯ್ತು. ಕೋಟಿಗಟ್ಟಲೆ ಸರಕಾರದ ಹಣಪೋಲಾಯಿತು. ಆ ಜಾಹೀರಾತು ಗಳಲ್ಲಿ ಬಂದ ಅಂಶ - ಮುಸ್ಲಿಂ ವಿರೋಧಿ ದೂಷಣೆಗಳು ಮಾತ್ರ. 1993 ರಲ್ಲಿ ನಡೆದ ಮುಂಬೈ ಸರಣಿ ಸ್ಫೋಟ, ಡಿಸೆಂಬರ್ 1999 ರ ವಿಮಾನ ಅಪಹರಣ, ಮಾರ್ಚ್ 2001 ರ ಅನಂತ್‌ನಾಗ್‌ನಲ್ಲಿ ನಡೆದ ಸಾಮೂಹಿಕ ಹತ್ಯಾಕಾಂಡ. ಇವನ್ನು ಅಮೆರಿಕಾದಲ್ಲಿ ನಡೆದ ಭಯೋತ್ಪಾದನೆಗೆ ಹೋಲಿಸಲಾಗಿತ್ತು. ಖಂಡಿತಾ ಮೇಲಿನ ಎಲ್ಲಾ ಘಟನೆಗಳು ಖಂಡನಾರ್ಹವೇ.

ಆದರೆ ಭಾರತದ ಇಬ್ಬರು ಮಾಜಿ ಪ್ರಧಾನಿಗಳನ್ನು ಕೊಂದು ತುಂಡರಿಸಿದ ಭಯೋತ್ಪಾದಕರು ವಾಜಪೇಯಿ ಸರ್ಕಾರದ ನೆನಪಿಗೆ ಬರಲಿಲ್ಲ, 400 ವರುಷಗಳ ಇತಿಹಾಸ ಪ್ರಸಿದ್ಧ ಬಾಬರಿ ಮಸೀದಿ ಉರುಳಿಸಿ ಜನರನ್ನು ಕೊಂದು ಕೇಕೆ ಹಾಕಿ ಭಯೋತ್ಪಾದಕರು ಇವರ ಮಿತ್ರರು. ಅವರನ್ನು ಖಂಡಿಸುವ ಪ್ರಮೇಯವೇ ಅವರಿಗೆ ಇಲ್ಲ. 300 ಜನರನ್ನು ಬಲಿ ತೆಗೆದುಕೊಂಡ ಏರ್ ಇಂಡಿಯಾದ 'ಕಾನಿಷ್ಕ' ದ ಮೇಲೆ ಭಯೋತ್ಪಾದ ಕರು ನಡೆಸಿದ ಧಾಳಿ, ಜಾಹೀರಾತಿನಲ್ಲಿ ಬರಲೇ ಇಲ್ಲ. ಇದು ಬಿಜೆಪಿಯ ಕೋಮುದ್ವೇಷದ ಕಾಮಾಲೆ ಕಣ್ಣಿನ ಪ್ರತೀಕ.

ವಿಶ್ವಸಂಸ್ಥೆ ನಿರ್ಣಯ: ಭಯೋತ್ಪಾದನೆಯನ್ನು ಮೂಲೋತ್ಪಾಟನೆ ಮಾಡಲು ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಒಮ್ಮತದ ನಿರ್ಣಯ ಆಗಿದ್ದರೂ ಬಿನ್ ಲಾಡೆನ್ ಅವರನ್ನು ಒಪ್ಪಿಸಲು ತಾಲಿಬಾನ್ ಸರಕಾರಕ್ಕೆ ಆದೇಶ ನೀಡಿದ್ದರೂ, ಅಮೆರಿಕಾ ತನ್ನ ನೇತೃತ್ವದಲ್ಲೇ ಯುದ್ಧ ನಡೆಸ ಬೇಕೆಂದು ಹವಣಿಸುತ್ತಿದೆ. ನ್ಯಾಟೋ ದೇಶಗಳ ಬೆಂಬಲದೊಂದಿಗೆ ಜಗತ್ತಿನ ಏಕಮೇವಾಧಿತ್ವವನ್ನು ಸಾಧಿಸುವ ಹಂಬಲ. ಪಾಕಿಸ್ತಾನವನ್ನು ನೆಲೆ ಯಾಗಿಟ್ಟುಕೊಂಡು ಮಿಲಿಟರಿ ಕೇಂದ್ರವನ್ನು ಸ್ಥಾಪಿಸಿ, ಭಾರತವೂ ಸೇರಿದಂತೆ ಏಶಿಯಾದ ಎಲ್ಲಾ ರಾಷ್ಟ್ರಗಳ ಮೇಲೂ ಹೊಂಚು ಹಾಕುವ ಸಂಚು ಹೂಡಿದೆ ಅಮೆರಿಕಾ. ಇಂತಹ ಅಮೆರಿಕಾ ದೊಂದಿಗೆ ಬಿಜೆಪಿ ಸರಸವಾಡುತ್ತಿದೆ. ಇವರ ಧೂರ್ತತನವನ್ನು ಭಾರತದ ಜನತೆ ಏನೆಂದು ಹೇಳಬೇಕೋ!

ಬಿಜೆಪಿ ಮತ್ತು ಸಂಘ ಪರಿವಾರದ ಉದ್ದೇಶ ಒಂದೇ ಮುಸ್ಲಿಂ ವಿರೋಧಿ ಭಾವನೆಯನ್ನು ಕೆರಳಿಸುವುದು. ಆ ಮೂಲಕ ಅಧಿಕಾರದ ಮೇಲೆ ಹಿಡಿತ ಸಾಧಿಸುವುದು.

ಅಮೆರಿಕಾದ ಯುದ್ಧ ವಿಮಾನಗಳಿಗೆ ಅಗತ್ಯವಿರುವ ಸಹಾಯಗಳನ್ನು ನೀಡುವುದಾಗಿ ವಾಜಪೇಯಿ ಸರಕಾರ ಘೋಷಿಸಿದೆ. ಅಂದರೆ ಅಫಘಾನಿಸ್ತಾನದ ಮೇಲೆ ಧಾಳಿ ನಡೆಸಿ ಹಿಂತಿರುಗುವಾಗ ಇಂಧನ ಪೂರೈಸುವುದು ಇತ್ಯಾದಿ, ಸಹಾಯ ಕೇಳದಿದ್ದರೂ...

ಭಾರತದ ಪ್ರತಿಷ್ಠೆ ಮತ್ತು ಸಾರ್ವಭೌಮತೆಯನ್ನು ಹರಾಜು ಹಾಕುವ ನೀತಿಯನ್ನು ಜನತೆ ಖಂಡಿಸಬೇಕು.

ಲಾಭಕ್ಕಾಗಿ ಎಲ್ಲವನ್ನೂ ಮಾರುವವರು

ನಮ್ಮ ದೇಶದ ಸಾರ್ವಜನಿಕ ವಲಯಕ್ಕೆ ಈಗ ಅತೀವ ಸಂಕಷ್ಟದ ಕಾಲ. ಖಾಸಗೀಕರಣದ ಮಂತ್ರದ ಪಠಣ ದಿನನಿತ್ಯ ಸಾಗುತ್ತಿದೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ದೇಶ ಸಾಧಿಸಿದ ಪ್ರಗತಿಯಲ್ಲಿ, ಗಣನೀಯ ಪಾಲು ಸಾರ್ವಜನಿಕ ವಲಯದ್ದು ಎಂಬ ವಾಸ್ತವವನ್ನು ಬೇಕೆಂದೇ ಮರೆಮಾಚಲಾಗುತ್ತಿದೆ. ಆರ್ಥಿಕ ಸ್ವಾವಲಂಬನೆ, ಸರ್ವಾಂಗೀಣ ಪ್ರಗತಿ ಮತ್ತು ಉದ್ಯೋಗಾವಕಾಶಗಳ ಸೃಷ್ಟಿ-ಇವುಗಳ ದಿಸೆಯಲ್ಲಿ ಅಮೂಲ್ಯ ಕೊಡುಗೆ ನೀಡಿದ ಸಾರ್ವಜನಿಕ ವಲಯ ಇಂದು ಆಳುವ ಜನರ ಅವ್ಯಾಹತ ಧಾಳಿಗೆ ತುತ್ತಾಗಿದೆ. 'ದೇಶಕ್ಕೆ ಒಂದು ದೊಡ್ಡ ಹೊರೆ' ಎಂದೇ ಅವುಗಳನ್ನು ಬಣ್ಣಿಸಲಾಗುತ್ತಿದೆ. ದೇಶ ಇಂದು ಎದುರಿಸುತ್ತಿರುವ ಆಳವಾದ ಸಾಮಾಜಿಕ ಮತ್ತು ಆರ್ಥಿಕ ಬಿಕ್ಕಟ್ಟಿಗೆ, ಸಾರ್ವಜನಿಕ ವಲಯಕ್ಕೆ ಈ ಹಿಂದೆ ನೀಡಿದ್ದ ಪ್ರಾಧಾನ್ಯತೆಯೇ ಕಾರಣ ಎಂಬ ಕುತ್ಸಿತ ವಾದವನ್ನು ಮಂಡಿಸಲಾಗಿದೆ. ಖಾಸಗೀಕರಣದ ಪ್ರಕ್ರಿಯೆ ಮತ್ತು ಸಾರ್ವಜನಿಕ ವಲಯದ ಮೇಲಿನ ಗದಾಪ್ರಹಾರ ಇವೆರಡೂ ತೀವ್ರಗೊಂಡಿವೆ.

ಖಾಸಗೀ ಕ್ಷೇತ್ರದ 'ಗುಣಾತ್ಮಕ ಅಂಶಗಳು ಮತ್ತು ಅವುಗಳಿಂದ ದೇಶದ ಆರ್ಥಿಕತೆಗೆ ಲಭ್ಯವಾಗುವ ಅನುಕೂಲಗಳ' ಕುರಿತಾಗಿ ಆಳುವ ಜನ ಮತ್ತು ಅವರ ಮಾಧ್ಯಮಗಳು ಪ್ರತಿನಿತ್ಯ ಎಂಬಂತೆ ಒದರುತ್ತಿರುತ್ತಾರೆ. ಸಾರ್ವಜನಿಕ ವಲಯ ಎಂದರೆ ನಷ್ಟ; ಉತ್ಪಾದನೆಯ ಕುಸಿತ. ಖಾಸಗೀ ಕ್ಷೇತ್ರ ಎಂದರೆ ಲಾಭ; ಉತ್ಪದಕತೆಯ ಹೆಚ್ಚಳ. ಆದುದರಿಂದ ಸಾರ್ವಜನಿಕ ವಲಯವನ್ನು ಖಾಸಗಿ ಕ್ಷೇತ್ರಕ್ಕೆ ವರ್ಗಾಯಿಸುವುದು ದೇಶಕ್ಕೆ, ದೇಶದ ಆರ್ಥಿಕತೆಗೆ ಮತ್ತು ಆ ಮೂಲಕ ದೇಶದ ಜನತೆಗೆ ಒಳಿತು ಇದಿಷ್ಟು ಆಳುವ ಜನರ ಪ್ರಚಾರದ ತಿರುಳು.

ಭರಣಿ

ಇವರು ಇಷ್ಟೊಂದು ಹೊಗಳುವ ಖಾಸಗೀಕ್ಷೇತ್ರದಲ್ಲಿ ನಿಜಕ್ಕೂ ಏನಾಗುತ್ತಿದೆ ಎಂಬುದನ್ನು ಗಮನಿಸಿದಾಗ, ಇವರ ಹೂರಣ ಬಯಲಾಗುತ್ತದೆ. ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದ ಸುದ್ದಿಯ ಅನುಸಾರ, ನಷ್ಟ ಅನುಭವಿಸುತ್ತಿರುವ ಖಾಸಗೀ ಉದ್ಯಮಗಳಲ್ಲಿ ಮೊದಲ ಹತ್ತು ಉದ್ಯಮಗಳು ಈ ದೇಶದ ದಿಗ್ಗಜಗಳೆಂದೇ ಕರೆಯಲಾಗುತ್ತಿರುವ ಪ್ರತಿಷ್ಟಿತ ಉದ್ಯಮ ಮನೆತನಗಳಿಗೆ ಸೇರಿದ್ದವುಗಳು. ಟೆಲ್ಕೋ (ಟಾಟಾ ಮನೆತನ), ಅರವಿಂದ್ ಮಿಲ್ಸ್ (ಲಾಲ್‌ಭಾಯಿ ಮನೆತನ), ಜೆ.ಕೆ. ಕಾರ್ಪೋರೇಷನ್ (ಸಿಂಘಾನಿಯ ಮನೆತನ), ಹ್ಯೂಸ್ ಟೆಲಿಕಾಂ (ಮಿಟ್ಟಲ್ ಮನೆತನ), ಮಂಗಳೂರು ತೈಲಾಗಾರ (ಎ.ವಿ.ಬಿರ್ಲಾ ಮನೆತನ), ವಿಎಕ್ಸ್‌ಎಲ್ ಇಂಡಸ್ಟ್ರೀಸ್ (ಎಸ್.ಕೆ. ಬಿರ್ಲಾ ಮನೆತನ) ಮುಂತಾದವು ಈ ಪಟ್ಟಿಯಲ್ಲಿವೆ. ಈ ಹತ್ತು ಖಾಸಗೀ ಉದ್ದಿಮೆಗಳು 2000-2001ರ ಸಾಲಿನಲ್ಲಿ ಒಟ್ಟಾರೆಯಾಗಿ ರೂ. 2,881 ಕೋಟಿಗಳಷ್ಟು ನಷ್ಟ ಅನುಭವಿಸಿವೆ. ಕಳೆದ ಸಾಲಿನಲ್ಲಿ ಅಂದರೆ 1999-2000ರ ವರ್ಷದಲ್ಲಿ ಅವುಗಳಿಗಾದ ಒಟ್ಟು ನಷ್ಟ ರೂ. 2,262 ಕೋಟಿಗಳಷ್ಟಾಗಿತ್ತು.

ಇವುಗಳಲ್ಲದೆ ಇನ್ನು ಕೆಲವನ್ನು ಮುಚ್ಚಲಾಗಿದೆ. ಇವಕ್ಕೆ ನಮ್ಮ ರಾಜ್ಯದ, ಹರಿಹರ ಕಿರ್ಲೋಸ್ಕರ್ ಮತ್ತು ಅಮ್ಮಸಂದ್ರದ ಸಿಮೆಂಟ್ ಕಾರ್ಖಾನೆಗಳು ಇತ್ತೀಚಿನ ಸೇರ್ಪಡೆಗಳ ಲಿಷ್ಟು ಮಾತ್ರವಲ್ಲ,

ಮಹೀಂದ್ರ ಮತ್ತು ಮಹೀಂದ್ರ, ಎಸ್ಸಾರ್, ಮೈಕೊ, ಎಲ್ & ಟಿ ಮುಂತಾದ ಉದ್ಯಮಗಳು ಆತಂಕದ ದಿನಗಳನ್ನೆಣಿಸುತ್ತಿವೆ. ಅಶೋಕ್ ಲೇಲ್ಯಾಂಡ್ ಕ್ರಾಂಪ್ಟನ್ ಗ್ರೀವ್ಸ್, ಹಿಂದೂಸ್ತಾನ್ ಮೋಟಾರ್ಸ್ ಮುಂತಾದವು ನಷ್ಟದಲ್ಲಿವೆ.

ಅತ್ಯಂತ ಶ್ರೀಮಂತ ಕೈಗಾರಿಕೋದ್ಯಮಿಗಳ ಒಡೆತನದಲ್ಲಿರುವ ಬೃಹತ್ ಉದ್ದಿಮೆಗಳ ಪರಿಸ್ಥಿತಿ ಹೀಗಾದರೆ, ಮಧ್ಯಮ ಮತ್ತು ಸಣ್ಣ ಉದ್ದಿಮೆಗಳ ಪಾಡಂತೂ ಹೇಳುವುದೇ ಬೇಡ.

ಇವೆಲ್ಲವೂ ಖಾಸಗೀ ಕ್ಷೇತ್ರದ ಉದ್ದಿಮೆಗಳಲ್ಲವೆ? ಹಾಗಾದರೆ ಯಾಕೆ ನಷ್ಟ ಅನುಭವಿಸುತ್ತಿವೆ? ಯಾಕೆ ಮುಚ್ಚಿಹೋಗುತ್ತಿವೆ? ಯಾವ ರೀತಿಯಲ್ಲಿ ಇವು ದೇಶದ ಆರ್ಥಿಕ ಪ್ರಗತಿಗೆ ನೆರವಾಗುತ್ತಿವೆ? ಆಳುವವರ ಬಳಿ ಉತ್ತರವಿಲ್ಲ.

ಖಾಸಗೀ ಬಂಡವಾಳಿಗರ ಗುರಿ ದೇಶದ ಆರ್ಥಿಕ ಪ್ರಗತಿಯಲ್ಲ. ಕೇವಲ ತಮ್ಮ ಲಾಭ ಮಾತ್ರ. ಲಾಭ ಮತ್ತು ಅದರ ಮೂಲಕ ಮತ್ತಷ್ಟು ಲಾಭ. ಲಾಭಕ್ಕೊಸ್ಕರ ಅವರು ದೇಶದ ಹಿತಾಸಕ್ತಿಯನ್ನು ಸಹಾ ಬಲಿಕೊಡಲು ಹಿಂಜರಿಯಲಾರರು.

ಉದ್ದಿಮೆಯೊಂದರ ಸ್ಥಾಪನೆ ಮತ್ತು ಅದನ್ನು ನಡೆಸುವಿಕೆ ಉತ್ಪಾದನೆಗಾಗಿ, ಲಾಭಗಳಿಕೆ ಅದರ ಮುಖ್ಯ ಉದ್ದೇಶಗಳಲ್ಲೊಂದು ಎಂಬುದು ಸಾರ್ವತ್ರಿಕವಾದ ನಂಬಿಕೆ. ಆದರೆ ಜಾಗತೀಕರಣದ ಭರಾಟೆಯ ಈ ದಿನಗಳಲ್ಲಿ ಅಂತಹ ನಂಬಿಕೆಯನ್ನು ಸುಳ್ಳಾಗಿಸುವ ಘಟನೆಗಳು ಪ್ರತಿನಿತ್ಯ ಎಂಬಂತೆ ಜರಗುತ್ತಿವೆ.

ಇಂಡಿಯಾ ಸಿಮೆಂಟ್ಸ್ ಕಂಪನಿ, ದಕ್ಷಿಣ ಭಾರತದ ಪ್ರತಿಷ್ಠಿತ ಕಂಪನಿಗಳಲ್ಲೊಂದು. ಅದರ ಅಧ್ಯಕ್ಷರಿಗೆ, ತಮ್ಮ ಕಂಪನಿ, ಭಾರತದಲ್ಲೇ ಮೊದಲ ಸ್ಥಾನದಲ್ಲಿರಬೇಕೆಂಬ ಹೆಬ್ಬಯಕೆ. ಆದರೇನು? ಬೇರೆ ಸಿಮೆಂಟ್ ಕಂಪನಿಗಳೂ ಇವೆಯಲ್ಲವೇ. ಅವುಗಳ ಮಾಲೀಕರಿಗೂ ಸಹ ತಾವು ಬೆಳೆಯಬೇಕೆಂಬ ಹಂಬಲ ಸಹಜವಾಗಿಯೇ ಇರುತ್ತದೆ. ಅದಕ್ಕಾಗಿ ಇಂಡಿಯಾ ಸಿಮೆಂಟ್ಸ್ ಮಾಲೀಕರು ಹೊಸ ಯೋಜನೆ ರೂಪಿಸಿದರು. ಕಂಪನಿಗಳನ್ನೇ ಸಾರಾ ಸಗಟಾಗಿ ಖರೀದಿಸುವುದು. ಅದಕ್ಕಾಗಿ ಸಾಲ ಮಾಡಿಯಾದರೂ ಹಣ ಹೊಂದಿಸಿಕೊಂಡರಾಯಿತು. ಅಂತೆಯೇ 1997-98ರಲ್ಲಿ ರಾಸಿ ಸಿಮೆಂಟ್ಸ್ ಮತ್ತು 1999 ರಲ್ಲಿ ಶ್ರೀ ವಿಷ್ಣು ಸಿಮೆಂಟ್ಸ್ ಕಂಪನಿಗಳನ್ನು ಖರೀದಿಸಲಾಯಿತು. ಅಷ್ಟೇ ಅಲ್ಲ, ವಿದೇಶೀ ಕಂಪನಿಗಳ ಸಹಭಾಗಿತ್ವದಲ್ಲಿ, ಎಲ್. ಅಂಡ್ ಟಿಯ ಸಿಮೆಂಟ್ ಕಾರ್ಖಾನೆಯನ್ನು ಸಹ ತಮ್ಮ ತೆಕ್ಕೆಗೆ ಹಾಕಿಕೊಳ್ಳಲು ಯೋಜಿಸಲಾಯಿತು. ಇತರ ಕಂಪನಿಗಳ ಖರೀದಿ ಅಂದರೆ ಪ್ರತಿಸ್ಪರ್ಧಿಗಳ ನಿವಾರಣೆ. ಮಾರುಕಟ್ಟೆಯಲ್ಲಿ ಏಕಸ್ವಾಮ್ಯ, ಲಾಭದ ಹೊಳೆ, ಇದು ಅವರ ಕನಸು. ಅಪಾರ ಲಾಭದ ಭವ್ಯ ಕನಸು.

ಆದರೆ ಈಗ ಪರಿಸ್ಥಿತಿ ತಿರುವು ಮುರುವು. ಬೇರೆ ಕಂಪನಿಗಳನ್ನು ಖರೀದಿಸುವ ಹುಮ್ಮಸ್ಸಿನಲ್ಲಿ ವಿಪರೀತ ಸಾಲ ಮಾಡಬೇಕಾಯಿತು. ಸಾಲದ ಹೊರೆ ಇಂದು ಭರಿಸಲಾಗುತ್ತಿಲ್ಲ. ಬೇರೆ ದಾರಿಯಿಲ್ಲದೆ, ಹಿಂದೆ ಕೊಂಡುಕೊಂಡ ಕಂಪನಿಗಳನ್ನು ಇಂದು ಮಾರಬೇಕಾದ ಸ್ಥಿತಿ ಬಂದಿದೆ. ಶ್ರೀ ವಿಷ್ಣು ಸಿಮೆಂಟ್ಸ್ ಕಂಪನಿಯನ್ನು ಮಾರಲು ಪ್ರಯತ್ನಗಳು ನಡೆದಿವೆ. ಆತಂಕದ ದಿನಗಳು ಮುಂದಿವೆ.

ನಿಕೋಲಾಸ್ ಪಿರಾಮಲ್ ಇಂಡಿಯಾ ಲಿಮಿಟೆಡ್ (ಎನ್.ಪಿಐಎಲ್) ದೇಶದ ದೊಡ್ಡ ಔಷಧ ತಯಾರಿಕಾ ಸಂಸ್ಥೆ ಹಲವು ಕಡೆಗಳಲ್ಲಿ ತಯಾರಿಕಾ ಘಟಕಗಳನ್ನು ಹೊಂದಿದೆ. ಇತ್ತೀಚೆಗೆ

ಪುಟ 12 ಕ್ಕೆ

ಶಿಕ್ಷಣದ ಕೇಸರೀಕರಣ ಸಂವಿಧಾನದ ಆಶಯಗಳ ಉಲ್ಲಂಘನೆ

ಆದೇಶ, ಸೂಚನೆಗಳನ್ನು ಹಿಂತೆಗೆಯಲು ಕೇಂದ್ರಕ್ಕೆ ಆಗ್ರಹ

ಪಠ್ಯಪುಸ್ತಕಗಳಲ್ಲಿ ವೈದಿಕ ಜ್ಯೋತಿಷ್ಯಶಾಸ್ತ್ರ ಮತ್ತು ಧಾರ್ಮಿಕ ಆಚರಣೆಗಳಂತಹ ಹೊಸ ಪಠ್ಯಗಳನ್ನು ಅಳವಡಿಸುವುದಕ್ಕೆ ಸಂಬಂಧಿಸಿ ಕೇಂದ್ರದ ಮಾನವ ಸಂಪನ್ಮೂಲ ಸಚಿವಾಲಯದ ಎಲ್ಲಾ ಆದೇಶಗಳನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ದೆಹಲಿಯಲ್ಲಿ ನಡೆದ



ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಮತ್ತು ಶಿಕ್ಷಣ ಸಚಿವರ ಸಭೆಯು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವಭಟ್ಟಾಚಾರ್ಯ ಅವರು ಕರೆದಿದ್ದ ಈ ಸಭೆಯಲ್ಲಿ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಭಾಗಿಗಳಾಗಿರುವ ಜಮ್ಮು-ಕಾಶ್ಮೀರ ಮತ್ತು ಮೇಘಾಲಯ ರಾಜ್ಯ ಸರ್ಕಾರಗಳ ಮಂತ್ರಿಗಳು ಸೇರಿದಂತೆ ಹಲಾವರು ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿ ಕೇಂದ್ರ ಸರ್ಕಾರದ ಶಿಕ್ಷಣ ಕೇಸರೀಕರಣ ಯತ್ನವನ್ನು ಉಗ್ರವಾಗಿ ಖಂಡಿಸಿದರು.

ಸಮಾವೇಶದ ಕೊನೆಯಲ್ಲಿ ಅಂಗೀಕರಿಸಿದ ನಿರ್ಣಯದಲ್ಲಿ 'ಶಿಕ್ಷಣ ಯಾವುದೇ ಪಕ್ಷದ ಸುಪರ್ದಿಗೆ ಬರುವ ವಿಚಾರವಲ್ಲ, ಬದಲಾಗಿ ಇದೊಂದು ರಾಷ್ಟ್ರೀಯ ವಿಚಾರವಾಗಿದೆ. ಸಂವಿಧಾನದಲ್ಲಿ ಸೂಚಿಸಿರುವಂತೆ ಜಾತ್ಯಾತೀತ, ವೈಜ್ಞಾನಿಕ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಶಿಕ್ಷಣರಂಗದಲ್ಲಿ ಪ್ರತಿನಿಧಿಸುವಂತಿರಬೇಕು.

ಈ ವಿಚಾರದಲ್ಲಿ ಸರ್ಕಾರ ಇದುವರೆಗ ಪ್ರಕಟಿಸಿದ ಅಥವಾ ಪ್ರಚಾರಕ್ಕೆ ತಂದ ಎಲ್ಲಾ ನಿರ್ಧಾರಗಳು, ಆದೇಶಗಳು, ಸುತ್ತೋಲೆಗಳು ಮತ್ತು ದಾಖಲೆಗಳನ್ನು ತಕ್ಷಣ ವಾಪಸ್ ಪಡೆಯಬೇಕು ಇಲ್ಲವೇ ಸ್ಥಗಿತಗೊಳಿಸಬೇಕು ಮತ್ತು ಶಿಕ್ಷಣ ಪದ್ಧತಿಯ ಮೂಲಭೂತ ವಿಚಾರಗಳಿಗೆ ಸಂಬಂಧಿಸಿ ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ರಾಜ್ಯ ಸರ್ಕಾರಗಳ ಅಭಿಪ್ರಾಯಗಳನ್ನು ಪರಿಗಣಿಸಿ ತೀರ್ಮಾನ ಕೈಗೊಳ್ಳಬೇಕೆಂದು ಸಭೆಯು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದೆ.

ಎನ್‌ಡಿಎ ಮಿತ್ರರಾಗಿರುವ ಮೇಘಾಲಯದ ಮುಖ್ಯಮಂತ್ರಿ ಶ್ರೀ ಇ.ಕೆ.ಮಾನ್‌ಸಾಂಗ್, ಜಮ್ಮುಕಾಶ್ಮೀರ ಸರ್ಕಾರದ ಶಿಕ್ಷಣ ಮಂತ್ರಿ ಶ್ರೀ ಮುಹಮ್ಮದ್‌ರವರು ಹಾಗೂ ತ್ರಿಪುರಾದ ಮುಖ್ಯಮಂತ್ರಿ ಶ್ರೀ ಮಾಣಿಕ್ ಸರ್ಕಾರ, ಕರ್ನಾಟಕದ ಶಿಕ್ಷಣ ಮಂತ್ರಿ ಶ್ರೀ ಹೆಚ್.ವಿಶ್ವನಾಥ ಸೇರಿದಂತೆ 13 ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಶಿಕ್ಷಣದಕೋಮುವಾದೀಕರಣ ವಿರೋಧಿಸಿದ ರಾಷ್ಟ್ರೀಯ ಸಮಾವೇಶ

ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಶಿಕ್ಷಣ ಕ್ಷೇತ್ರದಲ್ಲಿ ಜಾರಿ ಮಾಡಲೊರಟಿರುವ ಶಿಕ್ಷಣದ ಕೇಸರೀಕರಣದ ಬಗ್ಗೆ ತವ್ರ ಆತಂಕ ವ್ಯಕ್ತಪಡಿಸಿರುವ ದೇಶದ ವಿವಿಧ ಕ್ಷೇತ್ರಗಳ ಗಣ್ಯರು 'ಭವಿಷ್ಯದಲ್ಲಿ ನಮ್ಮ ಮಕ್ಕಳಿಗಾಗುತ್ತಿರುವ ಮೋಸವನ್ನು ತಪ್ಪಿಸಲು' ಮತ್ತು ಶಿಕ್ಷಣ ಕ್ಷೇತ್ರವನ್ನು ಇಂತಹ ವಿಷ ವರ್ತುಲದಂದ ಪಾರು ಮಾಡಲು ಎಲ್ಲಾ ಜಾತ್ಯಾತೀತರು, ಪ್ರಗತಿಪರರು, ರಾಜಕೀಯ ಚಿಂತಕರು ಮುಂದಾಗಿ ಇಂತಹ ಪ್ರಗತಿವಿರೋಧಿ, ಅವೈಜ್ಞಾನಿಕ, ಪಠ್ಯಕ್ರಮ ಅಳವಡಿಕೆಯನ್ನು ಪ್ರಬಲವಾಗಿ ವಿರೋಧಿಸಬೇಕೆಂದು ದೆಹಲಿಯಲ್ಲಿ ಆಗಸ್ಟ್ 4 ರಿಂದ 6 ರ ವರೆಗೆ 'ಸಹಮತ್' ಸಂಘಟಿಸಿದ್ದ 'ಶಿಕ್ಷಣದ ಕಾವೀಕರಣ ವಿರುದ್ಧ'ದ ಸಮಾವೇಶವು ಕರೆ ನೀಡಿದೆ.

ಮೂರು ದಿನಗಳ ಕಾಲ ನಡೆದ ಈ ರಾಷ್ಟ್ರೀಯ ಸಮಾವೇಶದಲ್ಲಿ ಪ್ರಮುಖವಾಗಿ ಕೋಮುವಾದಿ ಅಜೆಂಡಾ, ಅಲ್ಪಸಂಖ್ಯಾತ ಶಕ್ಷಣ ಸಂಸ್ಥೆಗಳ ಮೇಲಿನ ಹಲ್ಲೆಗಳು, ವಿಜ್ಞಾನದ ವಿರುದ್ಧದ ದಾಳಿಗಳು, ಶಾಲಾ ಶಿಕ್ಷಣದಲ್ಲಿ ಕೇಸರೀಕರಣ ಮತ್ತು ಅದರ ವಿರುದ್ಧದ ತಂತ್ರಗಳು ಕುರಿತಂತೆ ವಿಚಾರ ಸಂಕಿರಣಗಳು ನಡೆದು, ಖ್ಯಾತ ಇತಿಹಾಸ ತಜ್ಞರುಗಳು, ಶಿಕ್ಷಣ ತಜ್ಞರು, ವಿಜ್ಞಾನಿಗಳು, ಅಧ್ಯಾಪಕರು, ಪ್ರಗತಿಪರ ರಾಜಕೀಯ ಚಿಂತಕರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಸಮಾವೇಶದ ಕೊನೆಯ ದಿನದಂದು ಎನ್‌ಡಿಎ ಮಿತ್ರ ಪಕ್ಷಗಳು ಹೊರತುಪಡಿಸಿದ ರಾಜ್ಯ ಸರ್ಕಾರಗಳ ಶಿಕ್ಷಣ ಮಂತ್ರಿಗಳ, ಸಂಸದರ ವಿರೋಧ ಪಕ್ಷಗಳ ಮುಖಂಡರ ಸಭೆಯನ್ನು ಸಂಘಟಿಸಲಾಗಿತ್ತು.

ಈ ಸಭೆಯನ್ನು ಪ್ರಮುಖವಾಗಿ ಪ್ರಸಿದ್ಧ ಇತಿಹಾಸಕಾರ ರೋಮಿಳಾ ಥಾಪರ್, ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ, ತ್ರಿಪುರಾದ ಶಿಕ್ಷಣ ಮಂತ್ರಿ ಶ್ರೀ ಅನಿಲ್ ಸರ್ಕಾರ್, ಕರ್ನಾಟಕ ಶಿಕ್ಷಣ ಮಂತ್ರಿ ಶ್ರೀ ಹೆಚ್.ವಿಶ್ವನಾಥ, ಛತ್ತೀಸ್ ಘಡ್ ಮುಖ್ಯಮಂತ್ರಿ ಶ್ರೀ ಅಜಿತ್ ಜೋಗಿ, ಸಿಪಿಐ ಪ್ರ.ಕಾರ್ಯದರ್ಶಿ ಎ.ಬಿ.ಬರ್ಧನ್, ಪ.ಬಂಗಾಳ ಶಿಕ್ಷಣ ಸಚಿವ ಕಾಂತಿ ಬಿಸ್ವಾಸ್, ಮಧ್ಯಪ್ರದೇಶ ಶಿಕ್ಷಣ ಮಂತ್ರಿ ಶ್ರೀ ರತ್ನೇಶ್ ಸೋಲೋಮನ್, ಕಾಂಗ್ರೆಸ್, ಸಿಡ್ಲೂಸಿ ಸದಸ್ಯ ಶ್ರೀ ಅರ್ಜುನ್ ಸಿಂಗ್, ರಾಜಸ್ತಾನ್ ಶಿಕ್ಷಣಮಂತ್ರಿ ಸಿ.ಪಿ. ಜೋಷಿ, ಬಿಹಾರ ಶಿಕ್ಷಣ ಮಂತ್ರಿ ರಾಮಚಂದ್ರ ಪರ್ವೆ, ಪಾಂಡಿಚೇರಿ ಶಿಕ್ಷಣ ಮಂತ್ರಿ ಎ.ವಿ. ಸುಬ್ರಮಣ್ಯಂ ಸೇರಿದಂತೆ ಸಂಸದರಾದ ಕಪಿಲ್ ಸಿಬಾಲ್, ಶಬಾನಾ ಆಜ್ಮಿ, ಮಣಿಶಂಕರ್ ಅಯ್ಯರ್, ಮಹಮ್ಮದ್ ಸಲೀಂ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಬೃಂದಾಕಾರಟ್ ಮೊದಲಾದವರು ಭಾಗವಹಿಸಿ ಕೇಂದ್ರ ಸರ್ಕಾರ ಶಿಕ್ಷಣದ ಕೇಸರೀಕರಣ ಕ್ರಮವನ್ನು ಪ್ರಬಲವಾಗಿ ವಿರೋಧಿಸಿದರು.

ಕೊನೆಯಲ್ಲಿ ಪ್ರಭಾಕ ಪಟ್ನಾಯಕ್‌ರವರು, ಶಿಕ್ಷಣಮಂತ್ರಿಗಳು, ಸಂಸದರು, ರಾಜಕೀಯ ಮುಖಂಡರು ವಿವಿಧ ಕ್ಷೇತ್ರಗಳ ಗಣ್ಯರು ಸಹಿ ಮಾಡಿದ ನಿರ್ಣಯವನ್ನು ಮಂಡಿಸಿದರು.

ಸಿನಿಮಾ

ಲಜ್ಜೆ ಬಿಟ್ಟವರಿಗೆ ದಿಟ್ಟ ಉತ್ತರ ಲಜ್ಜಾ

ಭ್ರೂಣಾವಸ್ಥೆಯಿಂದ ಹಿಡಿದು ಮುತಾಯಿಯ ಪಾಲಾಗುವ ತನಕ ಮಹಿಳೆ ಅನುಭವಿಸುವ ಕ್ರೌರ್ಯದ ನಾನಾ ಮುಖಗಳನ್ನು ಮನೋಜ್ಞವಾಗಿ ಸೆರೆ ಹಿಡಿದಿರುವ ಚಿತ್ರ ಲಜ್ಜಾ.

ಭಜರಂಗ ದಳದವರ ಪ್ರತಿಭಟನೆಯ ನಡುವೆಯೂ ಪ್ರದರ್ಶನಗೊಳ್ಳುತ್ತಿರುವ ಲಜ್ಜಾ ಚಿತ್ರ ರಾಜ್ಯಕ್ಕೂ ಅತ್ಯುತ್ತಮ ಹಾಗೂ ಎಲ್ಲರೂ ನೋಡಬಹುದಾದ ಚಿತ್ರ.

ಮಹಿಳೆಯರನ್ನು ನಡೆಸಿಕೊಳ್ಳುವಲ್ಲಿ, ನಾಗರಿಕ ಸಮಾಜ ತಲೆತಗ್ಗಿಸಲೇಬೇಕಾದ ಪ್ರಸಂಗಗಳನ್ನು ಮನಮುಟ್ಟುವಂತೆ ತೆರೆದಿಟ್ಟಿದೆ. ಮಹಿಳೆಯರ ಸಮಸ್ಯೆಗಳಿಗೆ ಮಹಿಳೆಯರನ್ನೇ ಹೊಣೆ ಮಾಡದೆ ಪರಿಹಾರದ ಜವಾಬ್ದಾರಿಯನ್ನು ಕೇವಲ ಮಹಿಳೆಯರ ಹೆಗಲಿಗೆ ಹೊರಿಸದೆ ಸಮಾಜವಹಿಸಬೇಕಾದ ಪಾತ್ರದ ಬಗ್ಗೆ ಎಚ್ಚರಿಸಿದೆ.

ಭ್ರೂಣಹತ್ಯೆ, ಶಿಶುಹತ್ಯೆ, ವರದಕ್ಷಿಣೆ, ಹಿಂಸಾಚಾರ, ಅವಮಾನಿಸುವುದು, ಪತ್ನಿಯರನ್ನು ವಂಚಿಸಿ ಮರು ವಿವಾಹಗಳಾಗುವುದು, ಮುಗ್ಧ ಮಹಿಳೆಯರನ್ನು ವಂಚಿಸುವುದು, ಬೆತ್ತಲೆಗೊಳಿಸಿ ಪೌರುಷ-ಪರಾಕ್ರಮ ಮೆರೆಯುವುದು, ಪ್ರೇಮಿಸಿದ ಜೋಡಿಗಳನ್ನು ಬೆನ್ನಟ್ಟುವುದು, ಬದುಕಿಗಾಗಿ ಮಹಿಳೆಯರು ಮೈ ಮಾರುವುದು, ಅಲ್ಲೂ ವಂಚಿಸಲ್ಪಡುವುದು ಇವುಗಳು ದಿನಬೆಳಗಾದರೆ ನಮ್ಮ ಸುತ್ತಮುತ್ತ ಸಂಭವಿಸುವ ಸಾಮಾನ್ಯ ಘಟನೆಗಳನ್ನೇ ಅನಾವರಣಗೊಳಿಸುತ್ತದೆ ಲಜ್ಜಾ.

ಮಹಿಳೆಯರನ್ನು ನಡೆಸಿಕೊಳ್ಳುವಲ್ಲಿ, ನಾಗರಿಕ ಸಮಾಜ ತಲೆತಗ್ಗಿಸಲೇಬೇಕಾದ ಪ್ರಸಂಗಗಳನ್ನು ಮನಮುಟ್ಟುವಂತೆ ತೆರೆದಿಟ್ಟಿದೆ. ಮಹಿಳೆಯರ ಸಮಸ್ಯೆಗಳಿಗೆ ಮಹಿಳೆಯರನ್ನೇ ಹೊಣೆ ಮಾಡದೆ ಪರಿಹಾರದ ಜವಾಬ್ದಾರಿಯನ್ನು ಕೇವಲ ಮಹಿಳೆಯರ ಹೆಗಲಿಗೆ ಹೊರಿಸದೆ ಸಮಾಜವಹಿಸಬೇಕಾದ ಪಾತ್ರದ ಬಗ್ಗೆ ಎಚ್ಚರಿಸಿ ಹಿಂದಿ ಚಿತ್ರ 'ಲಜ್ಜಾ'.

ಕ್ರೌರ್ಯದ ಮುಖಗಳು ಬೇರೆ ಬೇರೆ ಇರಬಹುದು ಆದರೆ ಧಾಳಿ ಮಾತ್ರ ಒಂದೇ ಒಂದು ಎಂದು ಅರ್ಥಮಾಡಿಸಲು ಆಯ್ಕೆ ಮಾಡಿಕೊಂಡಿರುವ ಘಟನಾವಳಿಗಳು ಚಿತ್ರದ ಮೂಲ ಉದ್ದೇಶಕ್ಕೆ ಇಂಬು ನೀಡಿವೆ.

ಒರಿಸ್ಸಾ, ಬಿಹಾರ, ರಾಜಸ್ತಾನ, ಉತ್ತರ ಪ್ರದೇಶಗಳನ್ನು ದಾಟಿ ದೇಶದೆಲ್ಲೆಡೆ ಹೆಣ್ಣು ಶಿಶುಹತ್ಯೆಗಳು, ಮೈ ಜುಮ್ಮೆನಿಸುವ ರೀತಿಯಲ್ಲಿ ವ್ಯಾಪಿಸಿವೆ. ಹೆಣ್ಣೆಂಬ ಕಾರಣಕ್ಕೆ ಆಗ ತಾನೆ ಜನಿಸಿದ ಶಿಶುವನ್ನು ತಂದೆಯೇ ಹಾಲಿನ ಕಡಾಯಿಯಲ್ಲಿ ಮುಳುಗಿಸಿ ಮರಳಿ ಭಗವಂತನ ಪಾದ ಸೇರಿಸುವ ಪ್ರಯತ್ನ ಮಾಡುವ ದೃಶ್ಯವಂತೂ ಮನಕಲಕುತ್ತದೆ.

ರಾಮ್‌ದುಲಾರಿಯೆಂಬ ಶುಶ್ರೂಕಿಯ ಮಗನು ಅದೇ ಊರಿನ ಜಮೀನ್ದಾರನ ಮಗಳನ್ನು ಪ್ರೇಮಿಸಿದ ತಪ್ಪಿಗೆ ಅವರು ಅನುಭವಿಸುವ ಯಾತನೆ, ಶಿಕ್ಷೆ ಇತ್ತೀಚಿಗಷ್ಟೆ ವರದಿಯಾದ ಉತ್ತರ ಪ್ರದೇಶದ ಯುವ ಪ್ರೇಮಿಗಳ ಕಗ್ಗೊಲೆಯನ್ನು ನೆನಪಿಸುತ್ತದೆ.

ಮಗನ ಮೇಲೆ ಸೇಡುತೀರಿಸಿಕೊಳ್ಳಲು ರಾಮ್‌ದುಲಾರಿಯನ್ನು ಗುಂಪುಗಟ್ಟುವ ಜಮೀನ್ದಾರನ ಹಿಂಡು, ರಾಕ್ಷಸರನ್ನು ನಾಚಿಸುವ ಅವರ ಕ್ರೌರ್ಯ, ಬೆತ್ತಲೆಗೊಳಿಸುವ ಅಮಾನವೀಯ ಘಟನೆ, ಮೊನ್ನೆಯಷ್ಟೇ ಬಲಿಯಾದ ಬಳ್ಳಾರಿಯ 'ಯರ್ರಮ್ಮ'ಳನ್ನು ನೆನಪಿಸುತ್ತದೆ. ರೀಲಿನಲ್ಲೂ ಅದೇ ಜಮೀನ್ದಾರರು, ಅವರದೇ ಚೇಲಾಗಳು, ಅದೇ ಕ್ರೌರ್ಯತನ, ಅದೇ ಬೆತ್ತಲೆ, ಅದೇ ಆಕ್ರಂದನ, ಅದೇ ಮೌನ. ಇತ್ತ ರಿಯಲ್ಲಿನಲ್ಲೂ ಅದೇ ಜಮೀನ್ದಾರರು, ಅದೇ ಗುಂಪು, ಅದೇಕ್ರೌರ್ಯ, ಅದೇ ಬೆತ್ತಲು, ಅದೇ ಆಕ್ರಂದನ ಕೊನೆಗೆ ಅದೇ ಮೌನ. ರೀಲಿಗೂ ರಿಯಲ್ಲಿಗೂ ಕಿಂಚಿತ್ ವ್ಯತ್ಯಾಸವಿಲ್ಲ. ರಾಮದುಲಾರಿ ಬೆತ್ತಲೆಗೂ ಪ್ರೇಮ ಪ್ರಕರಣವೇ ಕಾರಣ. ಯರ್ರಮ್ಮಳ ಬೆತ್ತಲೆಗೂ ಅದೇ ಪ್ರೇಮ ಪ್ರಕರಣ ಕಾರಣ. ಯರ್ರಮ್ಮಳ ಘಟನೆಯನ್ನೇ ಸಿನಿಮಾ ಮಾಡಿದ್ದಾರೆ ಎನಿಸದೇ ಇರದು ಆ ಕ್ಷಣ.


ವರದಕ್ಷಿಣೆ ಕಡಿಮೆ ಬಿದ್ದ ಕಾರಣಕ್ಕೆ ಧಾರೆ ಮಂಟಪದ ತನಕ ಹೋಗಿದ್ದ ಅದೆಷ್ಟು ಮದುವೆಗಳು ಸ್ತಬ್ಧವಾಗಿಲ್ಲ. ಗಂಡಿನ ಕಡೆಯವರೆಂಬ ಅಹಂಭಾವದಿಂದ ಹೆಣ್ಣಿನ ತಂದೆ ತಾಯಿಯರನ್ನು ಬಂಧು-ಬಳಗದವರನ್ನು ಹೆಜ್ಜೆ-ಹೆಜ್ಜೆಗೂ ಅವಮಾನಿಸುವ ಪ್ರಸಂಗ, ಜಗಳ, ಕದನ, ಕೊಲೆಯಲ್ಲಿ ಮದುವೆಗಳು ಪರ್ಯಾಪ್ತವಾದ ಸತ್ಯಕಥೆಗಳು ನಮ್ಮ ನಡುವೆಯೇ ಎಷ್ಟು ನಡೆದಿಲ್ಲ, ಹೆಣ್ಣಿನ ತಂದೆ ಎನ್ನುವ ಕಾರಣಕ್ಕೆ ನಾಯಿಕುನ್ನಿಗಿಂತ ಕಡೆಯಾಗಬೇಕಾದ ಅವಸ್ಥೆಯನ್ನು ನಾವುಗಳೇನು ಕಂಡಿಲ್ಲವೇ?

ಸತ್ಯ ಘಟನೆಗಳನ್ನಾಧರಿಸಿ ತಯಾರಾಗಿರುವ ಲಜ್ಜಾದ ನಾಯಕಿಯರೆಲ್ಲರೂ ಆಧುನಿಕ ಸೀತೆಯರು. ಒಬ್ಬಳು ವೈದೇಹಿ ಮತ್ತೊಬ್ಬಳು ಮೈಥಿಲಿ, ಇನ್ನೊಬ್ಬರು ಜಾನಕಿ ಮಗದೊಬ್ಬಳು ರಾಮ್‌ದುಲಾರಿ. ಸೀತೆಗಿದ್ದ ವಿವಿಧ ಹೆಸರುಗಳನ್ನು ಹೊತ್ತ ಇವರು ರಾಮಾಯಣದ ಸೀತೆಯಿಂದ ಹಿಡಿದು ಆಧುನಿಕ ಸೀತೆಯರ ತನಕ ಹೆಣ್ಣು ಅನುಭವಿಸುತ್ತಿರುವ ಕಷ್ಟ-ಕಾರ್ಪಣ್ಯಗಳನ್ನು ಸಮರ್ಥವಾಗಿ ಪ್ರತಿನಿಧಿಸುವವರು.

ನೆನಪಿನಲ್ಲುಳಿದು ಪರಿಣಾಮ ಬೀರುವಂತಹ ಘಟನೆಗಳು ಈ ಸಿನಿಮಾದಲ್ಲಿ ಹತ್ತಾರು.

ಅಮೇರಿಕಾ ವಾಸಿ ಶ್ರೀಮಂತ ಮನೆಯ ಸೊಸೆಯಾದ ವೈದೇಹಿ ತನ್ನನ್ನು ಮಗುವನ್ನು ಹೆರುವ ಯಂತ್ರವಾಗಿ ಮಾತ್ರ ಪರಿಗಣಿಸಿದ್ದ ಮಾವ ಮತ್ತು ಗಂಡನನ್ನು ತ್ಯಜಿಸಿ ಅವರ ವಂಚನೆಯ ಸಂಚಿಗೆ ಬಲಿಯಾಗದೆ, ತನಗಾಗಿ ಬದುಕುವ ಆಸೆಯಿಂದ, ಸ್ವತಂತ್ರ ಬದುಕಿಗೆ ನಡೆಸುವ ಹುಡುಕಾಟ

ವೈದೇಹಿ ಗರ್ಭಿಣಿ, ಶ್ರೀಮಂತರ ಮನೆಯ ಮಹಿಳೆಯರಿಗೆ ಗರ್ಭಾವಸ್ಥೆ ಒಂದು ಸವಾಲು. ಅದಕ್ಕಾಗಿ ವಿಶೇಷ ಗಮನ ಹಾರೈಕೆ. ಇಡೀ ಚಿತ್ರದುದ್ದಕ್ಕೂ ಅದನ್ನೇ ಎಳೆದಾಡುವುದು ಮಾಮೂಲಿ ಚಿತ್ರಗಳ ದಾಟಿ. ಮಹಿಳೆಯರಿಂದ ಕೋಡಿ ಕಣ್ಣೀರು ಹಾಕಿಸಿ ಕೊನೆಗೆ ಮಹಿಳಾ ಚಿತ್ರ ಎನ್ನುವ ಹಣೆಪಟ್ಟಿಯನ್ನು ಕಟ್ಟುವುದೂ ಸರ್ವೇಸಾಮಾನ್ಯ. ಆದರೆ ಇಲ್ಲಿ ಇಡೀ ಚಿತ್ರದುದ್ದಕ್ಕೂ ಅಂತದ್ದೊಂದು ಅಳುಕಿನ, ಆತಂಕದ ಸಣ್ಣ ಸನ್ನಿವೇಶವನ್ನು ಕಾಣಿಸಿಕೊಡದೆ ವೈದೇಹಿಯನ್ನು ನಾಯಕಿಯ ಸ್ಥಾನದಲ್ಲಿ ನಿಲ್ಲಿಸಿ ದೌರ್ಜನ್ಯಕ್ಕೊಳಗಾದ ಮಹಿಳೆಯರ ಪರ ದಿಟ್ಟತನ ಪ್ರದರ್ಶಿಸುವ ಮೂಲಕ ಗರ್ಭಿಣಿ, ಬಾಣಂತಿ ಮುಂತಾದ ನೈಸರ್ಗಿಕ ಕ್ರಿಯೆಗಳಿಗಿಂತ ಭಯಾನಕವಾದ ಸಾಮಾಜಿಕ ದೌರ್ಜನ್ಯಗಳಿಗೆ ಆದ್ಯತೆ ನೀಡಿರುವುದು ಗಮನಿಸಲೇಬೇಕಾದ ಅಂಶ.


ಅತ್ಯುತ್ತಮ ಅಭಿನಯ ನೀಡಿರುವ ಮೋನಿಷ ಮತ್ತು ರೇಖಾ

ಮೈಥಿಲಿಯ ವಿವಾಹದ ಸಂದರ್ಭದಲ್ಲಿ ಹೆಣ್ಣಿನ ತಂದೆಯ ಪಡಿಪಾಟಲು, ಮಾತು ಮಾತಿಗೂ 'ಕ್ಷಮಿಸಿ' ಎಂದು ತೋರುವ ವಿಧೇಯತೆ, ವರದಕ್ಷಿಣೆ ಕಡಿಮೆ ಬಿದ್ದಾಗ ಆಗ ತಾನೆ ಕಳುವು ಮಾಡಿದ್ದ 50 ಸಾವಿರ ನಗದನ್ನು ಕಳ್ಳ ಹುಡುಗಿಯ ತಂದೆ ರೆಡಿ ಮಾಡಿದ್ದ ಬ್ರೀಫ್‌ಕೇಸಿಗೆ ಸೇರಿಸುವುದು, ಕಳ್ಳನ ಮನಸ್ಸಾದರೂ ಕರಗೀತು ಆದರೆ ಗಂಡ್ಹೆತ್ತ ಗಂಡೆದೆ ಕರಗದೆ ಹೋಗುವುದು. ಮದುವೆಯೆನ್ನುವುದು ಕೇವಲ ವ್ಯಾಪಾರವಾದಾಗ ಮದುಮಗಳು ಮೈಥಿಲಿ ಮೈಕೊಡವಿ ನಿಂತು ಹೂವು-ಹಾರ ಚೆಲ್ಲಿ ವಿವಾಹ ಒಲ್ಲೆಯೆಂಬುವುದು, ರೀತಿ-ರಿವಾಜುಗಳು, ತಾಳ್ಮೆ-ಸಹನೆ ವಿಧೇಯತೆಗಳ ಬಗ್ಗೆಯೇ ಪಾಠ ಮಾಡಬಹುದಾದ ಅಜ್ಜಿ ಮೊಮ್ಮಗಳ ಧೈರ್ಯ ಮೆಚ್ಚಿ 'ಶಹಬ್ಬಾಸ್‌ಗಿರಿ' ಕೊಡುವುದು. ಹೆಣ್ಣೊಬ್ಬಳಿಗೆ ಮುಕ್ತಿ ಸಿಕ್ಕಿತು ಎಂದು ಕೊನೆಯಲ್ಲಿ ಕಳ್ಳ ಉದ್ಗರಿಸುವುದು. ಚಿತ್ರದ ಕೊನೆಯಲ್ಲಿ ಆತನೆ ಅವಳ ಪತಿಯಾಗುವುದು ಮನ ಮುಟ್ಟುವ ದೃಶ್ಯಗಳು.

ಸಿನಿಮಾದ ನಾಯಕ ಮನಪರಿವರ್ತನೆಗೊಳ್ಳುವುದಂತು ಸ್ವಾಗತಿಸಬೇಕಾದ ಅಂಶ.

ಪ್ರತಿಪಾತ್ರಗಳು ಸಹ ಒಪ್ಪಿತ ಮೌಲ್ಯಗಳ ವಿರುದ್ಧ ಬಂಡಾಯವೇಳುವ ಪರಿಕಲ್ಪನೆ, ಸಮಾಜ ಪರಿವರ್ತನೆಗೆ ಮಿಡಿಯುವ ಪ್ರತಿಯೊಬ್ಬರಲ್ಲೂ ರೋಮಾಂಚನಗೊಳಿಸುವಂತದ್ದು.

ಈ ನಡುವೆ ದುಷ್ಟರನ್ನು ಸದೆಬಡಿಯುವ, ಶಿಷ್ಟರನ್ನು ಕಾಪಾಡುವ ನಾಯಕನಾಗಿ ಬಂಡುಕೋರ ಬುಲ್ವಾ ವಿಜೃಂಭಿಸುತ್ತಾನೆ. ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗೊಳಗಾದ ಜನರ ರಕ್ಷಣೆಗಾಗಿ ಪರ್ಯಾಯ ಹೋರಾಟ ಇದ್ದೇ ಇರುತ್ತದೆಂಬುದು ಖಂಡಿತ ಸತ್ಯ. ಆದರೆ ಬುಲ್ವಾ ಅದಕ್ಕೆ ಉತ್ತರವಾಗಲಾರ. ಬುಲ್ವನಿಗೆ ಕೊಟ್ಟ ಆದ್ಯತೆ ಜಾಸ್ತಿಯಾಯಿತೆನಿಸುತ್ತದೆ.

ಗಂಭೀರ ವಿಷಯನ್ನಿಟ್ಟು ಚಿತ್ರ ಮಾಡುವಾಗ ಕಲಾತ್ಮಕ ಚಿತ್ರಗಳ ಪಟ್ಟಿಗೆ ಸೇರಿಸುವುದೇ ಹೆಚ್ಚು. ಆದರೆ ಕೆಲವೇ ಪ್ರಜ್ಞಾವಂತ ಪ್ರೇಕ್ಷಕರಿಗೆ ಮಾತ್ರ ಸಲ್ಲದೆ ಎಲ್ಲರೂ ನೋಡಬಹುದಾದ ಮಾಮೂಲಿ ವ್ಯಾಪಾರಿ ಚಿತ್ರದ ಸಾಲಿಗೆ 'ಲಜ್ಜಾ'ವನ್ನು ಸೇರಿಸಿ ಮಹಿಳಾ ಪರ ಚಿಂತನೆಗೆ ಎಡೆ ಮಾಡಿರುವ ವಿಧಾನವನ್ನು ಪ್ರಶಂಸಿಸಲೇಬೇಕು.

ನವ-ನಟಿಯರೆಲ್ಲರೂ ತಮ್ಮ ಪಾಲಿನ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಬೆತ್ತಲೆಗೊಳ್ಳುವ ಹೆಣ್ಣಾಗಿ ರೇಖಾ ಅಭಿನಯ ಮನೋಜ್ಞವಾಗಿದೆ. ಸಿನಿಮಾದ ಕೇಂದ್ರ ಬಿಂದುವಾಗಿ ಮೊನಿಷಾ ಮನಸೆಳೆಯುತ್ತಾರೆ. ಕಳ್ಳನ ಪಾತ್ರಧಾರಿಯಾಗಿ ಅನಿಲ್‌ಕಪೂರ್ ಮಿಂಚಿದ್ದಾರೆ. ಬಂಡುಕೋರನಾಗಿ ಅಜಯ್‌ದೇವಗನ್, ವೈದೇಹಿಯ ಪತಿಯಾಗಿ ಜಾಕಿಷ್ರಾಫ್, ರಂಗನಟಿಯಾಗಿ ಮಾಧುರಿ ಸೇರಿದಂತೆ ಎಲ್ಲರೂ ಚುರುಕಿನ ಅಭಿನಯ ನೀಡಿದ್ದಾರೆ. ನೃತ್ಯ ಮತ್ತು ಹಾಡುಗಳು ಮಾಮೂಲಿಯಾಗಿವೆ. ಬಿಗಿ ನಿರ್ದೇಶನದೊಂದಿಗೆ ರಾಜಕುಮಾರ್ ಸಂತೋಷಿ ಗಮನಸೆಳೆಯುತ್ತಾರೆ.

- ಎನ್. ಪ್ರಭಾ

.... ಎಲ್ಲವನ್ನೂ ಮಾರುವವರು

ಪುಟ 11 ರಿಂದ

ಅದು ರೋನೆ ಪೌಲೆಂಕ್(RHONE POULENC) ಇಂಡಿಯಾ ಎಂಬ ಇನ್ನೊಂದು ಔಷಧ ತಯಾರಿಕಾ ಸಂಸ್ಥೆಯನ್ನು ಖರೀದಿಸಿತು. ಇದಕ್ಕೂ ಮೊದಲು ಕಂಪೆನಿ ಬೃಹತ್ ಬಹುರಾಷ್ಟ್ರೀಯ ಕಂಪನಿ ಏವಂಟಿಸ್ ಫಾರ್ಮಾ (Aventis Pharma) ದ ಒಡೆತನದಲ್ಲಿತ್ತು. ಮುಂಬಯಿನ ಭಾಂಡುಪ್‌ನಲ್ಲಿ ಅದರ ಘಟಕವಿದೆ. ಸುಮಾರು 450 ಜನ ಕೆಲಸಗಾರರಿದ್ದರು. ಹಿಂದಿನ ಮಾಲೀಕರು 150 ಜನ ಕೆಲಸಗಾರರನ್ನು ಸ್ವಯಂ ನಿವೃತ್ತಿ ಯೋಜನೆ ಮೂಲಕ ಮನೆಗಟ್ಟಿದರು. ಈಗ 300 ಜನ ಕೆಲಸಗಾರರಿದ್ದಾರೆ. ಹೊಸ ಮಾಲೀಕರ ಯೋಜನೆಯೇನು ಗೊತ್ತೆ? ಆ ಘಟಕವನ್ನೇ ಮುಚ್ಚಿಬಿಡುವುದು. ಉಳಿದಿರುವ 300 ಜನ ಕೆಲಸಗಾರರನ್ನು ಸ್ವಯಂ ನಿವೃತ್ತಿ ಯೋಜನೆ ಮೂಲಕ ತೆಗೆದುಹಾಕುವುದು. ಆ ಘಟಕಕ್ಕೆ ಸೇರಿದ ಸುಮಾರು 10-12 ಎಕರೆ ವಿಶಾಲವಾದ ಸ್ಥಳವಿದೆ. ಮುಂಬಯಿಯಂತಹ ನಗರದಲ್ಲಿ ಕಡಿಮೆಯೆಂದರೂ ಸಮಾರು 250 ಕೋಟಿ ರೂ. ಬೆಲೆ ಬರುವ ಈ ಜಾಗ, ಘಟಕ ಮುಚ್ಚಿದ ನಂತರ ತೆರವಾಗುತ್ತದೆ. ಸುಲಭವಾಗಿ, ಯಾರ ಹಂಗೂ ಇಲ್ಲದೆ ಮಾರಬಹುದು. ಇನ್ನು ಔಷಧ ತಯಾರಿಕೆ, ಮುಂಬಯಿನ ಘಟಕದ ಉತ್ಪಾದನೆಯನ್ನು ಮಧ್ಯ ಪ್ರದೇಶದ ಘಟಕಕ್ಕೆ ವರ್ಗಾಯಿಸಲಿದೆ. ಹೊಸ ಮಾಲೀಕರು ಕೊಡುತ್ತಿರುವ ಸಬೂಬು ಏನೆಂದರೆ ಮುಂಬಯಿಯ ಘಟಕ ದುಬಾರಿಯಂತೆ!

ಲಾಭದ ಆಸೆಗೆ ಹೊಸ ಉದ್ಯಮ ಸ್ಥಾಪಿಸುವುದು,ಲಾಭದ ಆಸೆಗೆ ಹಾಲಿ ಇರುವ ಉದ್ಯಮವನ್ನೇ ಕೊಳ್ಳುವುದು. ಅದೇ ಲಾಭದ ಆಸೆಗೆ ಉದ್ಯಮವನ್ನು ಮಾರುವುದು. ಕೊನೆಗೆ, ಲಾಭದ ಆಸೆಗಾಗಿಯೇ ಉದ್ಯಮವನ್ನೇ ಮುಚ್ಚಿ ಬಿಡುವುದು. ಖಾಸಗೀವಲಯದ ಉದ್ಯಮಶೀಲತೆ ಎಂದರೆ ಇದೇ - ಬೇರೇನೂ ಅಲ್ಲ. ಉತ್ಪಾದನೆಯಲ್ಲಿ ಹೆಚ್ಚಳ, ದೇಶದ ಆರ್ಥಿಕ ಪ್ರಗತಿ, ದೇಶದ ಜನರ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಇವಾವುದೂ ಈ ಲಾಭ ಪಿಪಾಸುಗಳನ್ನು ತಟ್ಟುವುದಿಲ್ಲ. ಖಾಸಗಿ ವಲಯ ಇರುವುದೇ ಲಾಭಕ್ಕಾಗಿ. ಎಲ್ಲವನ್ನೂ ಮಾರುವ ಲಾಭಕ್ಕಾಗಿ. ಅದಕ್ಕಾಗಿ ಅತ್ಯಂತ ಶ್ರೀಮಂತ ಖಾಸಗಿ ಬದುಕಿಗಾಗಿ.

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH